


ಸಂಬಂಧ

ಸಂಚಯ

ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ

ಸಂಪುಟ : ೯

ಸಂಚಿಕೆ : ೨

ಮಾರ್ಚ್ - ಏಪ್ರಿಲ್ - ೯೮

ಸಂಪಾದಕರು :

ಡಿ. ವಿ. ಪ್ರಹ್ಲಾದ್
ರವಿಕುಮಾರ ಕಾಶಿ

ಚಂದಾ ವಿವರ :

ವಾರ್ಷಿಕ : ರೂ. ೫೦/-
ಆಜೀವ : ರೂ. ೫೦೦/-

ಸಂಪರ್ಕ ವಿಳಾಸ :

೨೪/ಡಿ, ೧೭ನೇ ಮುಖ್ಯರಸ್ತೆ
ಮುನೇಶ್ವರ ಬ್ಲಾಕ್
ಜಿ.ಇ.ಎಫ್. ಅಂಚೆ
ಬೆಂಗಳೂರು - ೫೬೦ ೦೨೬
ಫೋನ್ : ೬೬೯೭೮೬೬

ಸಂಚಯ-೧೦

ಧೂಳು ಕಾಲುಗಳಲ್ಲಿ ಏಣಿ ಹೆಗಲಿಗೆ ಹೊತ್ತು
ಅಲೆಯುತ್ತಲೇ ಇರುವನು ಹುಡುಗ ಇನ್ನೂ
ನಂದದ ದೀಪಗಳ ಅರಸುತ್ತಲೇ.

—ಜಯಂತ ಕಾಯ್ಕಿಣಿ

ಮುಖಪುಟ :

ಎಂ. ಎಸ್. ಪ್ರಕಾಶ್‌ಬಾಬು
ಅವರ ಕಲಾಕೃತಿ

ನಿಮ್ಮೊಡನೆ

ಪ್ರಿಯ ಓದುಗರೆ,

ಕೆಂಡದಂತಹ ಬೇಸಿಗೆ ಎಲ್ಲ ಕಡೆ ಆವರಿಸಿಕೊಂಡಿದೆ. ಸೂರ್ಯ ನಿಗಿ ನಿಗಿ ಉರಿಯುತ್ತಾ ಎಲ್ಲ ಜೀವಿಗಳ ಮೇಲೆ ಸೇಡು ತೀರಿಸಿಕೊಳ್ಳುತ್ತಿರುವ ಹಾಗಿದೆ.

ತಲೆಮಾರಿನ ತಳಮಳ ಪುಸ್ತಕ ಕುರಿತ ಈಚಿನ ವಿವಾದ ಎಲ್ಲರನ್ನೂ ದಂಗು ಬಡಿಸಿದೆ. ಲೇಖಕರ ವರ್ತನೆಗಳಲ್ಲಿ ನಿರೀಕ್ಷಿಸಬಹುದಾಗಿದ್ದ ಘನತೆ ಹಾಗೂ ಸಂಯಮಗಳನ್ನು ಲಂಕೇಶ್ ಮತ್ತು ಅನಂತಮೂರ್ತಿ ಇಬ್ಬರೂ ತಾವು ಮಾಗುವ ಇಳಿ ಹೊತ್ತಿನಲ್ಲಿ ಕಳಕೊಂಡಿರುವುದು ಸ್ಪಷ್ಟವಾಗಿದೆ. ಇಲ್ಲಿ ಯಾರ್ಯಾರ ತಪ್ಪು ಸರಿಗಳು ಎಷ್ಟೆಷ್ಟು ಎನ್ನುವುದರ ವಿಶ್ಲೇಷಣೆ ಅನಗತ್ಯ. ವಯಸ್ಸು ಮಾಗತೊಡಗಿದ ಹಾಗೆಲ್ಲಾ ವ್ಯಕ್ತಿ ಪ್ರತಿಷ್ಠೆ ದೊಡ್ಡದಾಗಿಬಿಡುವುದು ದುರಂತ.

ಡಾ॥ ಎಂ. ಎಂ. ಕಲಬುರ್ಗಿ ಕನ್ನಡ ವಿ.ವಿ.ಯ ಚುಕ್ಕಾಣಿ ಹಿಡಿದಿದ್ದಾರೆ, ಸೃಜನಶೀಲ ಸಾಹಿತ್ಯ ಹೆಚ್ಚಿಸುವ ವಾತಾವರಣ ಬೆಳೆಸುವ ದಿಸೆಯಲ್ಲಿ ವಿ.ವಿ.ಯಲ್ಲೊಂದು ಸೃಜನಶೀಲತೆ ಬೆಳೆಸುವ ನೆಲೆಯ ಹೊಸ ವಿಭಾಗ ಆರಂಭಿಸುತ್ತಿರುವುದಾಗಿ ಹೇಳಿಕೆ ನೀಡಿದ್ದಾರೆ; ಕನ್ನಡದ ಮಟ್ಟಿಗೆ ಸೃಜನಶೀಲ ಸಾಹಿತ್ಯ ವಿಪುಲವಾಗಿದೆ. ನಮ್ಮ ಬಹುಮುಖ್ಯ ಕೊರತೆ ಇತರ ಜ್ಞಾನ ಶಾಖೆಗಳದ್ದು, ಇವತ್ತಿನ ಕ್ಷಿಪ್ರಗತಿಯ ಮಾಧ್ಯಮಗಳ ಹಾಗೂ ವಿಜ್ಞಾನಗಳ ಬದಲಾವಣೆಗೆ ತಕ್ಕಹಾಗೆ ನಮ್ಮ ಭಾಷೆ ಸಜ್ಜುಗೊಳ್ಳಬೇಕಿದೆ. ನಮ್ಮಲ್ಲಿನ್ನೂ ವಿವಿಧ ವೈಜ್ಞಾನಿಕ ಶಾಖೆಗಳ ಸೂಕ್ತ ನಿಘಂಟುಗಳಿಲ್ಲ, ಗ್ರಂಥ ವಿಜ್ಞಾನ, ನರ್ಸಿಂಗ್ ಮುಂತಾದ ಅಗತ್ಯವಾದ ಸಣ್ಣಪುಟ್ಟ ವೃತ್ತಿ ಶಿಕ್ಷಣಕ್ಕೂ ಇಂಗ್ಲೀಷ್ ಭಾಷೆಯನ್ನೇ ಅವಲಂಬಿಸಲಾಗುತ್ತಿದೆ. ಇವತ್ತಿನ ನಮ್ಮ ಭಾಷೆಯ ಎದುರಿನ ಸವಾಲುಗಳು ಬೇರೆಯದೇ ರೂಪದ್ದಾಗಿದೆ. ಯಾವ ವಿಶ್ವವಿದ್ಯಾಲಯಗಳಿಂದಲೂ ಬೇಂದ್ರೆ, ಅಡಿಗ, ಕುವೆಂಪು ಅವರಂಥ ಲೇಖಕರು ಉತ್ಪಾದನೆಯಾದ ಉದಾಹರಣೆಗಳಿಲ್ಲ.

ತಮ್ಮ ಹೊಸತು ಹೊಸತು ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಡಾ॥ ಎಂ. ಚಿದಾನಂದಮೂರ್ತಿ ಅವರಿಗೆ ನಮ್ಮ ಅಭಿನಂದನೆಗಳು.

ಈಚೆಗೆ ನಿಧನರಾದ ಕಮ್ಯೂನಿಸ್ಟ್ ನಾಯಕ ಇ.ಎಂ.ಎಸ್. ನಂಬೂದರಿಪಾಡ್ ಮತ್ತು ನಮ್ಮ ಮುಖ್ಯ ನವ್ಯ ಲೇಖಕರಲ್ಲೊಬ್ಬರಾದ ಶಾಂತಿನಾಥ ದೇಸಾಯಿ ಇವರಿಗೆ ನಮ್ಮ ಶ್ರದ್ಧಾಂಜಲಿ.

ನಿಮ್ಮ

ಸಂಪಾದಕ

ಬಳಿಸಾಲು

ಂ ಂ

ಎಸ್. ಜಿ. ಸಿದ್ಧರಾಮಯ್ಯ

ಹಾಕಿದ ಅಗಳಿ ಹಾಕಿಯೇ ಇದೆ
ಮುಚ್ಚಿದ ಕದ ಮುಚ್ಚಿ
ಬಂದವರು ಇಬ್ಬರೆ ಹೊರಗಿಂದ
ಅಡ್ಡಗೋಡೆಯ ಹಾಯ್ದು ಎದುರಾದೆಯಲ್ಲ ಜೋಗಿ !

ನೀರುಳ್ಳಿ ದನಿಯ ರುಬ್ಬಿದ ಗಮಲು ಕೋಣೆ ತುಂಬಿ
ಕಡೆದ ಕಾರದ ತಣಿಗೆ ಕೈಯೊಳಗೆ
ಸಾಲ ಬಳುವಳಿ ಸರದ ಗೊಣಗು ಬಾಯೊಳಗೆ
ಕಿವಿ ತುಂಬಿ ರಣರಣಿಸಿ ದಿಗ್ಗ
ನೆದ್ದರು ಕೂಡ ಸ್ಪಷ್ಟವಿಲ್ಲದ ಸೊಲ್ಲು

ಇಂತಪ್ಪ ಇರುಳೊಳಗೆ
ಒಳಗಿನೊಳಗಿನ ಕತ್ತಲೆಗೆ
ಕೈ ಹಾಕಿ
ಮತ್ತೆಲ್ಲವನು ನಿಲೆಹಾಕಿ
ತನಿಖೆ ಮಾಡುವ ಮಠದಯ್ಯ

ಮುಟ್ಟು ನಿಲ್ಲದ ಮಟಮಟಾ ಮಧ್ಯಾನ
ಗಳಿಗೆ ಮುರಿಯದ ನಿರಿಗೆ
ನರ ಬಿಗಿದ ಸೆರಗು
ಉಪ್ಪಿಲ್ಲದೊಗೆತನಕೆ ತಡೆದೀತದೆಷ್ಟು ದಿನಮಾನ !

ಬಗಲ ಜೋಳಿಗೆ ಜಗ್ಗಿ
ಕೈಯ ಕಿನ್ನರಿ ನಾದ
ಹೊಸಲು ದಾಟಿದ ಮ್ಯಾಲೆ
ಹೆಸರಿಗ್ಯಾತರ ಹಂಗು

ಕರಿಕಲ್ಲ ಸಾಲು ಹುಲಿಗವಿಯ ಸರವು
ಬೋರಿಟ್ಟ ಎದೆಗೆ ದೊಣೆಬಾಯಿ ನೆರವು

ಸರಸರನೆ ಸರಿದು ನಾದವಾಯಿತು ಕಾಡು
ಮುದಗೊಂಡು ಹದಗೊಂಡು ಮೂಡುಬಾಯಲಿ ಮಿಂಚು
ಸೊರೆಬಿಟ್ಟ ಕೆಚ್ಚಲಿಗೆ ಕರುಬಾಯಿ ನೊರೆಗರೆದು
ನೇಮವಾಯಿತು ನಿತ್ಯ ನಿಜದ ಬಳಿಸಾಲಿಡಿದು. ಂ

ರೈನರ್ ಮಾರಿಯಾ ರಿಲ್ಕೆ : ಎರಡು ಪದ್ಯಗಳು

ಂ ಂ

ಕನ್ನಡಕ್ಕೆ : ಎಲ್ಸಿ ನಾಗರಾಜ್

ಲೋಕ ಪ್ರೀತಿ ಪಾತ್ರರ ಮುಖೇಣ

ಪ್ರೀತಿಪಾತ್ರರ ಮುಖೇಣ ಕಂಡ ಲೋಕ
ಚೆಲ್ಲಿಹೋಯಿತು ಇದ್ದಕ್ಕಿದ್ದಂತೆ
ಈಗ ಈ ಲೋಕ ನನ್ನಿಂದ ಹೊರಗೆ
ಗ್ರಹಿಸಲಾಗದು ಈ ಲೋಕವನ್ನ

ಒಮ್ಮೆಕ್ಕಾಗಿ ಆ ಪ್ರೀತಿಪಾತ್ರ ಮುಖವನ್ನ
ತುಟಿಗಳಿಗೆ ಹೇಗೆ ಎತ್ತಿಕೊಂಡೆನೋ
ಹಾಗೇ ಯಾಕೆ ಕುಡಿದುಬಿಡಲಿಲ್ಲ ?
ರುಚಿ ನೋಡುವಷ್ಟು ಹತ್ತಿರದಲ್ಲಿದ್ದ
ಆ ಲೋಕವನ್ನ

ಹಾ । ಕುಡಿದುಬಿಟ್ಟೆ, ಕುಡಿದಷ್ಟೂ ತಣಿಯದಂತೆ
ಆದರೆ ತುಂಬಿಹೋಗಿದ್ದೆ ಇಷ್ಟೊಂದು ಲೋಕದಿಂದ
ಮತ್ತು ಕುಡಿತದಿಂದ ನಾನೇ ಆಳತೆ ಮೀರಿದ್ದೆ

ಂ ಂ ಂ

ಕುರುಡಾಗಿ ಹೋಗುವುದು

ಮೇಜಿನ ಮುಂದೆ ಅವಳು ಕುಳಿತಿದ್ದು ಉಳಿದವರಂತೆ
ಆದರೆ ಎರಡನೆ ನೋಟಕ್ಕೆ ಕಾಣಿಸಿದ್ದು ; ಅವಳು
ಬಟ್ಟಲನ್ನು ಕೈಯ್ಯಲ್ಲಿ ಹಿಡಿದಿರುವಂತೆ

ಅದನ್ನ ಕೈಗೆತ್ತಿಕೊಳ್ಳುವಾಗ ನಕ್ಕಳು
ಕೊಂಚ ಭಿನ್ನವಾಗಿ ಒಂದೇ ಒಂದು ಸಲ
ಹೆಚ್ಚು ಕಡಿಮೆ ಆ ನಗು ಯಾತನೆಯಿಂದ ತುಂಬಿತ್ತು

ಎಲ್ಲವೂ ಮುಗಿದು ಇನ್ನೇನು ಎದ್ದು ನಿಲ್ಲಬೇಕು
ಆಗ ಸಾವಕಾಶವಾಗಿ ಅವಕಾಶವೇ ಆಯ್ಕೆ ಮಾಡಿಕೊಂಡಂತೆ
ಅವರೆಲ್ಲ ಅಲ್ಲಿಂದ ಹೊರಟರು ; ಮಾತಾಡುತ್ತ, ನಗುತ್ತ
ಅನೇಕ ಕದಗಳ ದಾಟುತ್ತ

ಮತ್ತೆ ನಾನು ಅವಳ ಕಡೆಗೆ ನೋಟ ಹರಿಸಿದಾಗ
ನಡಿಗೆಯಲ್ಲಿ ಅವಳು ತುಂಬಾ ಹಿಂದೆ ಬಿದ್ದಿದ್ದಳು
ಉಳಿದವರೆಲ್ಲ ಸಹಸ್ರಾರು ಜನರ ಮುಂದೆ ಇನ್ನೇನು
ಹಾಡಬೇಕೆಂಬ ಗುಂಗಿನಲ್ಲಿರುವಾಗ, ಅವಳ ಕಣ್ಣುಗಳಲ್ಲಿ
ಸಂತಸದ ಹೊಳಪು ನಾಟ್ಯವಾಡುತ್ತಿತ್ತು, ಕಣ್ಣು ಕೊಳದ
ಕ್ಷಿತಿಜವೋ ಎಂಬಂತೆ

ಹಿಂಬಾಲಿಸುತ್ತಿದ್ದಳು ; ತಾನು ನಡೆವ ಹಾದಿಯಲ್ಲಿ
ಅಡೆತಡೆಗಳಿವೆಯೇನೋ ಎಂಬಂತೆ, ತುಂಬಾ ವೇಳೆ ತೆಗೆದುಕೊಳ್ಳುತ್ತ
ಆದರೂ ಅವುಗಳನ್ನೆಲ್ಲ ದಾಟಿದ ಮೇಲೆ, ಹಾರಿ
ಹೊರಟುಹೋಗುತ್ತಾಳೆ ಅವಳು ಈ
ನಡಿಗೆಗಳನ್ನೆಲ್ಲಾ ಮೀರಿ

ಯಾವುದು ಸ್ವಭಾವವನ್ನು ಪರಿವರ್ತಿಸಬಲ್ಲದೋ, ಯಾವುದು ಒಳಗಿನ ಸತ್ಯಕ್ಕೆ ನಮ್ಮನ್ನು ಬದ್ಧವಾಗಿಸುವುದೋ, ಯಾವುದು ಶುದ್ಧಗೊಳಿಸುತ್ತಾ ಹೋಗುತ್ತದೋ ಅಂಥದು; ಮಾನವ ಪ್ರಕೃತಿಯ ಸ್ಥಾಯೀ ಅಂಶ ಅದು; ಅದು ತನ್ನ ಸಂಪೂರ್ಣ ಅಭಿವ್ಯಕ್ತಿಯನ್ನು ಕಂಡುಕೊಳ್ಳುವುದಕ್ಕಾಗಿ ಯಾವುದೇ ತ್ಯಾಗಕ್ಕಾದರೂ ಸಿದ್ಧವಿರುತ್ತದೆ; ಯಾವುದೇ ಚೇತನ ತನ್ನನ್ನೂ, ತನ್ನನ್ನು ನಿರ್ಮಿಸಿದ ಸೃಷ್ಟಿಕರ್ತನನ್ನೂ ಹಾಗೂ ತನಗೂ ಸೃಷ್ಟಿಕರ್ತನಿಗೂ ಇರುವ ಸಂಬಂಧವನ್ನೂ ಅರಿತುಕೊಳ್ಳುವ ತನಕವೂ ಚಡಪಡಿಸುತ್ತಲೇ ಇರುವಂತೆ ಮಾಡುವ ಸತ್ಯವೇ ಧರ್ಮ.

—ಗಾಂಧೀಜಿ



ಡಾ|| ಎಂ. ಚಿದಾನಂದಮೂರ್ತಿ ಸಂದರ್ಶನ

● ಸಂದರ್ಶನ : **ಡಿ. ವಿ. ಪ್ರಹ್ಲಾದ್**

ಚಿದಾನಂದಮೂರ್ತಿ ಎಂದ ತಕ್ಷಣ ನಮಗೆ ನೆನಪಾಗುವುದು ಅವರ ಕನ್ನಡ ಪರವಾದ ನಿಲುವುಗಳು – ಹೋರಾಟ. ತಮ್ಮ ನಿಲುವುಗಳು ಹಾಗೂ ನಡವಳಿಕೆಗಳಿಂದ ಅನೇಕರ ಟೀಕೆಗೆ ನಿಂದನೆಗೆ ಗುರಿಯಾಗಿದ್ದಾರೆ. ಅಧ್ಯಾಪಕರಾಗಿ – ಸಂಶೋಧಕರಾಗಿ ಕೆಲಸ ಮಾಡಿದ ಇವರು ಮುಖ್ಯವಾಗಿ ಸಂಸ್ಕೃತಿ ನಿಷ್ಠ ಸಂಶೋಧನೆಯ ದಿಕ್ಕು ತೆರೆದಿಟ್ಟಿದ್ದಾರೆ. ಅವು ಬಹುಕಾಲ ಬಾಳುವಂಥವು. ಇವರ ಭಾವುಕ ನಡವಳಿಕೆ ಟೀಕಿಸಿದರೂ ಕನ್ನಡ ನಾಡು ನುಡಿಯ ಬಗ್ಗೆ ಅತೀವ ಶ್ರದ್ಧೆ ಪ್ರೀತಿ ಇರುವ ಇವರ ಕಳಕಳಿ ಹಾಗೂ ಪ್ರಾಮಾಣಿಕತೆಗಳನ್ನ ಯಾರೂ ಪ್ರಶ್ನಿಸಲಾಗದು. ಕನ್ನಡ ಪರ ಹೋರಾಟಗಳಿಗೆ ಇವರ ಪ್ರವೇಶದ ನಂತರ ಅದಕ್ಕೊಂದು ಗಾಂಭೀರ್ಯ ಘನತೆ ಬಂದಿದೆ.

ಹುಡುಗುತನದ ಹುಮ್ಮಸ್ಸು ಹಾಗೂ ಕ್ರಿಯಾಶೀಲತೆ ಹೊಂದಿದ ಈ ವಾಮನ ಮೂರ್ತಿಯಲ್ಲಿ ನಾನು ಕಂಡಿದ್ದು ಸರಳ ಮನಸ್ಸಿನ ನೇರ ನುಡಿಯ ಮನುಷ್ಯನನ್ನ, ದೇವರು ಮತ್ತು ಶಾಶ್ವತ ಮೌಲ್ಯಗಳ ಬಗ್ಗೆ ಅಚಲವಾದ ನಂಬಿಕೆ ಇಟ್ಟ ಕ್ರಿಯಾಶೀಲ ವ್ಯಕ್ತಿಯನ್ನು.

● **ಮೊದಲನೆಯದಾಗಿ ನೀವು ಸಂಶೋಧಕರಾಗಲು, ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಲು ತೀ. ನಂ. ಶ್ರೀ., ಡಿ. ಎಲ್. ಎನ್. ಅವರುಗಳ ಶಿಷ್ಯತ್ವ ಕಾರಣವೇ ? ನಿಮ್ಮನ್ನು ಸಂಶೋಧನೆಗೆ ಸೆಳೆದ ಅಂಶ ಯಾವುದು ?**

○ ಅವರ ಶಿಷ್ಯನಾಗಿದ್ದೇ ಬಹಳ ಮುಖ್ಯವಾದ ಅಂಶ. ಇಂಟರ್‌ಮೀಡಿಯೇಟ್‌ನಲ್ಲಿ ನಾನು ವಿಜ್ಞಾನದ ವಿದ್ಯಾರ್ಥಿಯಾಗಿದ್ದೆ. ಆ ಕಾಲಕ್ಕೆ ನಾನು ಮೈಸೂರು ರಾಜ್ಯಕ್ಕೇ ರ್‍ಯಾಂಕ್ ಗಳಿಸಿದ್ದೆ. ಆದರೆ ಸಾಹಿತ್ಯದ ಬಗ್ಗೆ ನಾನು ಒಲವನ್ನಿಟ್ಟು

ಕೊಂಡಿದ್ದೆ. ಜಿ. ಎಸ್. ಶಿವರುದ್ರಪ್ಪನವರು ಪಾಠ ಹೇಳುತ್ತಿದ್ದ ರೀತಿ ಮುಂತಾದವು ನನ್ನನ್ನು ಸಾಹಿತ್ಯಕ್ಕೆ ಸೆಳೆದವು, ಬೇರೆಯ ಓದಿಗೂ ತೊಡಗ ಬಹುದಿತ್ತು, ಆದರೆ ಸಾಹಿತ್ಯದ ವಿದ್ಯಾರ್ಥಿಯಾದೆ. ಕವಿ ಅಥವಾ ನಾಟಕಕಾರ ಆಗುವ ಆಸಕ್ತಿ ಇರದಿದ್ದರೂ ನನಗೆ ಒಬ್ಬ ವಿಮರ್ಶಕನಾಗಬೇಕು ಅನ್ನೋ ಅಪೇಕ್ಷೆ ಬಹಳ ಬಲವಾಗಿತ್ತು.

ಎಂ.ಎ.ನಲ್ಲಿರುವಾಗ ಡಿ.ಎಲ್. ನರಸಿಂಹಾಚಾರ್ಯರು ಕರ್ನಾಟಕದ ಶಾಸನ ಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ಪಂಪನಿಗೆ ಹಿನ್ನೆಲೆಯಾಗಿ ಆ ಕಾಲದ ಸಾಮಾಜಿಕ ಜೀವನ–ಮೌಲ್ಯಗಳನ್ನೂ, ಆ ವ್ಯವಸ್ಥೆಗಳನ್ನೂ ಕುರಿತು ಪ್ರಬಂಧ ಬರೆಯಲು ಹೇಳಿದರು. ಅದು ನನಗೆ ಶಾಸನಗಳಲ್ಲಿರುವ ಮಾಹಿತಿಗಳ ಬಗ್ಗೆ ಆಸಕ್ತಿ ಕೆರಳಿಸಿತು. ಮುಂದೆ ತೀ.ನಂ.ಶ್ರೀ. ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ.ಗೆ ತೊಡಗಿದಾಗ ಇದೇ ವಿಷಯ ಆಯ್ಕೆ ಮಾಡಿಕೊಳ್ಳಲು ಹೇಳಿದರು. ಬಹುಶಃ ನನ್ನಲ್ಲೂ ಒಬ್ಬ ವಿಜ್ಞಾನದ ವಿದ್ಯಾರ್ಥಿ ಹುದುಗಿದ್ದ, ಅವನು ಕನ್ನಡ ಸಂಶೋಧಕನಾಗಿ ಪರಿವರ್ತಿತನಾದ. ವಿಜ್ಞಾನದ ಮಾರ್ಗ, ಸಂಶೋಧನೆಯ ಮಾರ್ಗ–ಶಿಸ್ತು ಎರಡೂ ಒಂದೇ. ಹೀಗೆ ನಾನು ಸಂಶೋ ಧನೆಗೆ ಹೋದೆ. ಆಸಕ್ತಿ ಮೂಡಿತು, ಅವರು ಕೈಹಿಡಿದು ನಡೆಸಿದರು.

● **ನಮ್ಮ ಸಂಶೋಧನಾ ಶಾಸ್ತ್ರಕ್ಕೆ ಸುಮಾರು 100 ವರ್ಷಗಳ ಇತಿಹಾಸ. ನೀವು ನಿಮ್ಮ ಹಿಂದಿನ ತಲೆಮಾರಿನ ಸಂಶೋಧಕರ ಸಾಧನೆಗಳನ್ನು ಹೇಗೆ ಗುರುತಿಸುತ್ತೀರಿ ? ಜೊತೆಗೆ ನಿಮ್ಮ ಹಾಗೂ ನಿಮ್ಮ ನಂತರದ ಹೊಸ ತಲೆಮಾರಿನ ಸಂಶೋಧನೆಯ ಬೆಳವಣಿಗೆ ಹೇಗೆ ಗುರುತಿಸುತ್ತೀರಿ ?**

○ ನನ್ನ ಹಿಂದಿನ ತಲೆಮಾರಿನ ಸಂಶೋಧಕರು ; ಆರ್. ನರಸಿಂಹಾಚಾರ್, ಎಸ್. ಜಿ. ನರಸಿಂಹಾಚಾರ್, ಶಿ. ಶಿ. ಬಸವನಾಳರು, ಗೋವಿಂದ ಪೈ, ಎಸ್. ಶ್ರೀಕಂಠಶಾಸ್ತ್ರಿ, ಆ. ನೆ. ಉಪಾಧ್ಯೆ ಇವರುಗಳೆಲ್ಲಾ ಬಹಳ ದೊಡ್ಡ ವಿದ್ವಾಂಸರು. ನಮ್ಮ ದೇಶಭಾಷೆಗಳ ಬಗ್ಗೆ ಹೊಸ ರೀತಿಯ ಕುತೂಹಲ ಮೂಡಿದ ನವೋದಯದ ಆ ಕಾಲದಲ್ಲಿ, ಸಹಜವಾಗೇ ಆಗಿನ ಸಂಶೋಧಕರಿಗೆ ಮಹತ್ವ ಇದ್ದದ್ದು ಅಪ್ರಕಟಿತ ಕೃತಿಗಳನ್ನು ಪ್ರಕಟಿಸುವುದರಲ್ಲಿ. ಅದು ಮೊದಲು ಆಗಬೇಕಾದದ್ದು. ಆ ಹಳೆಯ ಗ್ರಂಥಗಳನ್ನು ಓಲೆಗಳಿಂದ ಬಿಡಿಸಿ ಪ್ರತಿಮಾಡಿ ಸಂಸ್ಕರಿಸುವುದು. ಅದೇ ಒಂದು ಪ್ರತ್ಯೇಕ ಶಾಸ್ತ್ರ. ಎರಡನೆಯದು ಆಯಾ ಕಾಲದ ಕವಿಗಳ ಕಾಲ, ದೇಶ, ಮತ ಇವೂ ಮುಖ್ಯ. ಒಬ್ಬ ಕವಿಯ ಬಗ್ಗೆ ಮಾತನಾಡುವಾಗ ಇವುಗಳ ಅಗತ್ಯ ಇದೆ. ಈ ದಿಸೆಯಲ್ಲಿ ನಮ್ಮ ಹಿಂದಿನ ಸಂಶೋಧನೆ ಒತ್ತುಕೊಟ್ಟಿತ್ತು. ಅತ್ಯಂತ ಮೂಲಭೂತವಾದ ಹಾಗೂ ಹೆಚ್ಚಿನ ಶ್ರಮದ ಕೆಲಸ. ಈಗಿನ ಕೆಲವರು ಆ ಬಗೆಯ ಸಂಶೋಧನೆ ಯನ್ನು ಸ್ವಲ್ಪ ಲೇವಡಿ ಮಾಡುವುದುಂಟು. ಕೃತಿಯ ಬಗೆಗಿನ ವ್ಯಾಖ್ಯಾನದ

ಕಡೆಗೂ ಈ ತಲೆಮಾರಿನವರು ಗಮನ ಹರಿಸಿದರು. ತೀ.ನಂ.ಶ್ರೀ. ಅವರ ಸಮಾಲೋಕನದ ಅನೇಕ ಲೇಖನಗಳು ಸಂಶೋಧನೆಯು ಜೊತೆಗೆ ವಿಮರ್ಶೆಯೂ ಆಗಿರುತ್ತಿತ್ತು. ಶಿ. ಶಿ. ಬಸವನಾಳರು ಬಸವಣ್ಣನವರ ವಚನ ಗಳಿಗೆ ಬರೆದ ಮುನ್ನುಡಿಯನ್ನು ಈ ನಿಟ್ಟಿನಲ್ಲಿ ಗಮನಿಸಬಹುದು.

ನಂತರ ಬಂದ ನನ್ನ ತಲೆಮಾರಿನವರು, ನಮ್ಮ ಹಿಂದಿನವರಿಗಿಂತ ಎಷ್ಟು ಮುಂದೆ ಹೋದೆವು ಬೇರೆಯಾದೆವು ಅನ್ನೋದು ಬೇರೆಯವರು ಹೇಳಬೇಕು. ನಾನು ಸ್ವಲ್ಪಮಟ್ಟಿಗೆ ಅವರು ಮಾಡದೇ ಇದ್ದ ವಿಧಾನವನ್ನು ಅನುಸರಿಸಿದೆ. ಕ್ಷೇತ್ರಕಾರ್ಯದ ಕಡೆಗೇ ಹೆಚ್ಚು ಗಮನ ಕೊಟ್ಟೆ. ಅದು ನಮ್ಮ ಗುರುಗಳಿ ಗಿಂತ ಸ್ವಲ್ಪ ಭಿನ್ನವಾದ ರೀತಿಯ ಶೋಧ. ಶಾಸನಗಳನ್ನು ಸಂಸ್ಕೃತಿಯ ದೃಷ್ಟಿಯಿಂದ ನೋಡುವಂಥ ಪ್ರಯತ್ನ ಮಾಡಿದೆ. ಮೂಲಭೂತವಾಗಿ ನಾನು ಹಳ್ಳಿಯವನೇ ಆಗಿದ್ದು, ಇವತ್ತು ಬೆಂಗಳೂರಿನಲ್ಲಿದ್ದರೂ 'ಹಳ್ಳಿತನ' ವನ್ನು ನನ್ನ ಸ್ವಭಾವದಲ್ಲಿ ಉಳಿಸಿಕೊಂಡಿರುವುದರಿಂದ ನನಗೆ ; ಬದುಕು–ಜನ ಜೀವನದ ಕಷ್ಟ–ಸುಖ, ಏಳು–ಬೀಳು, ಅನ್ಯಾಯ–ಶೋಷಣೆಗಳ ಬಗ್ಗೆ ಶಾಸನ ಗಳಲ್ಲಿ ನೋಡುವ ಆಸಕ್ತಿ. ಹೀಗಾಗಿ ಅನೇಕರು ನನ್ನದು ಸಂಸ್ಕೃತಿ ಕೇಂದ್ರಿತ ಸಂಶೋಧನೆ ಅಂತೆಲ್ಲಾ ಕರೆದಿದ್ದಾರೆ. ಇರಬಹುದು, ಕೆಲವು ನೆಲೆಗಳಲ್ಲಿ ಅವರಿಗಿಂತ ಭಿನ್ನವಾದರೂ ದೃಷ್ಟಿ ಒಂದೇ, ಸತ್ಯವನ್ನು ನೋಡುವುದು, ಹೊಸತನ್ನು ಕಾಣೋದು.

ಮುಂದಿನ ತಲೆಮಾರು ನನಗೆ ಬಹಳ ನಿರಾಸೆ ಹುಟ್ಟಿಸಿದೆ. ಈಗಾಗಲೇ ನಮ್ಮ ಸಾಮಾಜಿಕ ಜೀವನದಲ್ಲಿ ಕನಿಷ್ಠ ಶ್ರಮ, ಗರಿಷ್ಠ ಲಾಭ. ಇದು ಇವತ್ತಿನ ಘೋಷಣೆ. ಸಂಶೋಧನೆಯಲ್ಲಿ ಕನಿಷ್ಠ ಸಮಯ–ಶ್ರಮಗಳ ಪ್ರಶ್ನೆಯೇ ಇಲ್ಲ. ಇದು ನಿಷ್ಠೆ ಹಾಗೂ ದೈಹಿಕ ಮಾನಸಿಕ ಶ್ರಮಗಳನ್ನು ಬಯಸುತ್ತದೆ. ಇದು ಒಂದು ಪದ್ಯವನ್ನೋ, ನಾಟಕವನ್ನೋ ನಿರ್ದಿಷ್ಟ ಸಮಯದಲ್ಲಿ ಬರೆದ ಹಾಗಲ್ಲ. ಸಂಶೋಧಕ ಕಾಯಬೇಕಾಗುತ್ತದೆ. ಬರೀ ಸಂಶೋಧನೆಯ ಹೆಸರಿಗೆ ಬರೆಯೋದು ಬೇರೆ. ಈಗ ಬರುತ್ತಿರುವ ಅನೇಕ ಪಿಎಚ್.ಡಿ. ನಿಬಂಧಗಳನ್ನು ನೋಡಿದಾಗ ಬಹಳ ವ್ಯಸನವಾಗುತ್ತದೆ ಅದನ್ನು ಬರೆದವರ ಬಗ್ಗೆ. ಅದಕ್ಕಿಂತಲೂ ಅದನ್ನು ಬರೆಸುವ ಮಾರ್ಗದರ್ಶಕರ ಬಗ್ಗೆ ಹೆಚ್ಚು ವ್ಯಸನವಾಗುತ್ತದೆ.

● **ನಿಮ್ಮ ಒಟ್ಟು ಬೆಳವಣಿಗೆಯನ್ನು ಸಾಹಿತ್ಯದಿಂದ ಶಾಸನ, ಶಾಸನದಿಂದ ಭಾಷಾಶಾಸ್ತ್ರ, ಭಾಷಾಶಾಸ್ತ್ರದಿಂದ ಜಾನಪದ ಮತ್ತು ಜಾನಪದದಿಂದ ಮುಂದಿನ ಹೆಜ್ಜೆಯಾಗಿ ನಿಮ್ಮ ಹೋರಾಟದ ಪರ್ವವನ್ನಾಗಿ ಗುರುತಿಸಬಹುದೇ ?**

○ ಸಾಹಿತ್ಯದಿಂದ ಶಾಸನ ನಿಜ. ಒಂದರಿಂದ ಇನ್ನೊಂದರ ಕಡೆಗೆ ಹೋದಾಗ

ಆ ಹಿಂದಿನ ಘಟ್ಟವನ್ನು ಮರೆತೆ ಅಂತಲ್ಲ. ನಮಗೆ ಆನರ್ಸ್‌ನಲ್ಲಿ ಇವೆಲ್ಲವನ್ನೂ ಸಲ್ಪಮಟ್ಟಿಗೆ ಅಧ್ಯಯನ ಮಾಡುವ ಅನುಕೂಲ ಇದ್ದುದ್ದರಿಂದ ಸಾಹಿತ್ಯದ ವಿದ್ಯಾರ್ಥಿಯಾಗಿದ್ದವನು ಶಾಸನದ ವಿದ್ಯಾರ್ಥಿಯಾದೆ. ಆಗಲೇ ನನಗೆ ಭಾಷಾ ವಿಜ್ಞಾನದ ಬಗ್ಗೆಯೂ ಆಸಕ್ತಿ ಬಂದಿತು. ಜೊತೆ ಜೊತೆಗೇ ಜಾನಪದ, ಇವೆಲ್ಲವನ್ನೂ ಒಟ್ಟಾಗಿ ಸಮೀಕರಿಸಲಿಕ್ಕೆ ನಾನು ಪ್ರಯತ್ನಪಡುತ್ತೇನೆ. ನನ್ನ ಎಷ್ಟೋ ಭಾಷಾ ವಿಜ್ಞಾನದ ಅಧ್ಯಯನದಲ್ಲಿ ಜಾನಪದವೂ ಸೇರಿಕೊಂಡಿದೆ ಅಥವಾ ಜಾನಪದ ಅಧ್ಯಯನದಲ್ಲಿ ಶಾಸನಗಳೂ ಸೇರಿಕೊಳ್ಳಬಹುದು. ಉದಾಹರಣೆಗೆ ಊರದೇವತೆ ಬನಶಂಕರಿಯ ಬಗ್ಗೆ ಚರ್ಚಿಸುವಾಗ ಶಾಸನಗಳಲ್ಲಿ ಬರುವ 'ಬನದಬ್ಬೆ' ಎನ್ನುವ ಉಲ್ಲೇಖ ಸಹಜವಾಗೇ ನನ್ನ ನೆನಪಿಗೆ ಬರುತ್ತದೆ. ಸಾಹಿತ್ಯವನ್ನು ಕೇವಲ ಸಂತೋಷ–ರಸಾಸ್ವಾದಗಳಿಗೆ, ಭಾಷೆಯ ಬಳಕೆ ದೃಷ್ಟಿಯಿಂದ ನೋಡದೆ ಬದುಕನ್ನು ಎಷ್ಟರಮಟ್ಟಿಗೆ ಚಿತ್ರಿಸಲಾಗಿದೆ ಎನ್ನುವುದರ ಕಡೆಗೆ ನನ್ನ ಆಸಕ್ತಿ ಇದೆ. ಈ ದೃಷ್ಟಿಯಿಂದ ಒಂದು ಮಹಾ ಕಾವ್ಯದಷ್ಟೇ ಒಂದು ಲಘುಕೃತಿಯೂ ಮುಖ್ಯವಾಗುತ್ತದೆ. ಒಂದು ಮಹಾ ಕಾವ್ಯ ಕೊಡಲಾಗದ ಬದುಕಿನ ವಿವರಗಳನ್ನು ಒಂದು ಲಘುಕೃತಿ ಹಿಡಿದಿಡ ಬಲ್ಲದು. ನಾವು ಇದು ಒಬ್ಬ ಮಹಾಕವಿ, ಇದೇ ಮಹಾಕಾವ್ಯ ಎಂದು ಗುರುತಿಸಹೊರಟರೆ, ಅದು ಇನ್ನೊಂದು ರೀತಿಯ ಬಂಡವಾಳಶಾಹಿ ದೃಷ್ಟಿ ಅಂತಲೇ ಹೇಳುತ್ತೇನೆ. ಒಂದು ಸಾಮಾನ್ಯ ಕೃತಿಯಲ್ಲೂ ಮಹತ್ವ ಉಂಟು. ಒಬ್ಬ ಕವಿ ತಾನು ಹುಟ್ಟಿದ ಹಿನ್ನೆಲೆ ಸಂದರ್ಭಗಳ ಕಾರಣದಿಂದ ಒಂದು ಮಹಾಕಾವ್ಯವನ್ನು ಸೃಜಿಸಬಲ್ಲವನಾಗಿರುತ್ತಾನೆ. ನನಗೆ ತಕ್ಷಣಕ್ಕೆ ಕನಕದಾಸರ 'ರಾಮಧಾನ್ಯ ಚರಿತೆ' ನೆನಪಾಗುತ್ತದೆ. ಇದು ಪಂಪಭಾರತ, ಕುಮಾರ ವ್ಯಾಸ ಭಾರತದ ಹಾಗೆ ಅಥವಾ ಪ್ರಭುಲಿಂಗಲೀಲೆಯ ಹಾಗೆ ಮಹಾಕಾವ್ಯ ಅಲ್ಲದೇ ಇರಬಹುದು. ಆದರೆ ಒಂದು ವರ್ಗ ಸಂಘರ್ಷದ ದೃಷ್ಟಿಯಿಂದ ನೋಡಿದಾಗ ಬಹಳ ಮುಖ್ಯವಾದದ್ದು. ಆ ಕಾಲದ ವರ್ಗ ಸಂಘರ್ಷದ ಚಿತ್ರಣ ಇದರಲ್ಲಿದೆ.

● ಸಂಶೋಧನೆಯ ಪ್ರಪಂಚ ಹೆಚ್ಚು ಏಕಾಗ್ರತೆಯನ್ನು, ಅಧ್ಯಯನವನ್ನು ಬೇಡುವಂಥದ್ದು. ಆದರೆ ಚಳುವಳಿಗೆ ಹೆಚ್ಚು Stratagic ಆಗಿರಬೇಕಾಗುತ್ತದೆ. ಜೊತೆಗೆ ಬಹಳ ಜನ ನಿಮ್ಮನ್ನು ಸಂಶೋಧಕರಾಗಿ ಆ ಕ್ಷೇತ್ರದಲ್ಲೇ ಇರಬೇಕೆಂದು ಅಪೇಕ್ಷಿಸುತ್ತಾರೆ. ಇದರ ಬಗ್ಗೆ ನಿಮ್ಮ ಅನಿಸಿಕೆ ಏನು ?

○ ನಾನು ಒಬ್ಬ ಬಡ ಉಪಾಧ್ಯಾಯರ ಮಗನಾಗಿ; ಬದುಕನ್ನು ಅದರ ಕಠೋರ ವಾಸ್ತವಗಳನ್ನು ತುಂಬಾ ಹತ್ತಿರದಿಂದ ಕಂಡವನು. ಆಗಲೇ ಹೇಳಿದ ಹಾಗೆ ಹಳ್ಳಿಯವನಾಗಿ ಬದುಕು ನನಗೆ ಬಹಳ ಮುಖ್ಯ. ನಾನು ನನ್ನ ನಾಡನ್ನೂ, ಭಾಷೆಯನ್ನೂ ಬಹಳವಾಗಿ ಹಚ್ಚಿಕೊಂಡವನು. ಕರ್ನಾಟಕ ಅಂದ ತಕ್ಷಣ

ಭಾರತ ನನಗೆ ಮರೆತ ಪ್ರಶ್ನೆಯಾಗುವುದಿಲ್ಲ. ಏಕೀಕರಣದ ನಂತರ ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಂಥ ನಗರದಲ್ಲಿ ಕನ್ನಡದ ಸ್ಥಿತಿ ಏನು ಎನ್ನುವುದು ನನ್ನ ಅನುಭವಕ್ಕೆ ಬಂದಮೇಲೆ, ನಾವು ನಿಂತ ನೆಲವೇ ಕುಸಿಯು ತ್ತಿರುವಾಗ ಈ ಸಂಶೋಧನೆಗಳಿಂದ ಏನು ಪ್ರಯೋಜನ ? ಈ ಸಂಶೋಧನೆ ಯನ್ನು ಬೇರೆಯವರು ಇವತ್ತಲ್ಲ ನಾಳೆ ಮಾಡುತ್ತಾರೆ, ಒಬ್ಬ ದಾಸ-ವಚನ ಕಾರರ ಬಗ್ಗೆ ನಾನು ಬರೆಯದೇ ಹೋದರೆ ಏನೂ ಮುಳುಗಿ ಹೋಗುವುದಿಲ್ಲ. ನಮ್ಮ ಕಣ್ಣ ಮುಂದಿರೋ ವಾಸ್ತವ ಭೀಕರವಾಗಿದೆ. ನಾನು ಪ್ರೀತಿಸೋ ಕನ್ನಡ ಕರ್ನಾಟಕ ಬರೇ ಚರಿತ್ರೆಯ ಪುಟಗಳಲ್ಲಿ ಉಳಿಯಬೇಕೆ ? ಅದಕ್ಕೇ ಅನಿವಾರ್ಯವಾಗಿ ಅಲ್ಲಿಂದ ಇಲ್ಲಿಗೆ ಬಂದೆ. ಆದರೆ ಎರಡೂ ಕಡೆ ಅದೇ ಜೀವನ ಪ್ರೀತಿ ಇದೆ. ನನ್ನ ಸಂಸ್ಕೃತಿಯ ಬಗ್ಗೆ ನನಗಿರುವ ಆಳವಾದ ಆಸಕ್ತಿ ಮತ್ತು ಯಾವುದೇ ಕೆಲಸಕ್ಕೆ ನನ್ನನ್ನು ನಾನು ಒಪ್ಪಿಸಿಕೊಂಡು ಮಾಡು ವಂಥಾದ್ದು, ಮೊದಲಿನಿಂದಲೂ ನನಗೆ ಬಂದಿರುವ ಒಂದು ಗುಣ. ನಮ್ಮ ಭವ್ಯ ಚರಿತ್ರೆಯ ಹೆಮ್ಮೆಯ ಗುಂಗಿನಲ್ಲಿದ್ದ ನನಗೆ ಬೆಂಗಳೂರಿಗೆ ಬಂದಮೇಲೆ ಅಂಥಾ ಪರಂಪರೆಯ ವಸ್ತುಸ್ಥಿತಿಯನ್ನು ನಾನು ಕಂಡಿರಲಿಲ್ಲ ಎನಿಸಿತು. ಈ ಹಿನ್ನೆಲೆಯಲ್ಲಿ ಸಂಘಟನೆಗೆ ಕೈಹಾಕಿದೆ, ಕಟ್ಟಿದೆವು, ಬೆಳೆಸಿದೆವು.

● **ನಮ್ಮ ರಾಷ್ಟ್ರೀಯತೆಯ ಕಲ್ಪನೆಯ ಹಾಗೆ ಕನ್ನಡಿಗತ್ವವೂ ಒಂದು ಎರವಲು ತಂದ, ಪ್ರಭಾವಕ್ಕೆ ಒಳಗಾದ ಪರಿಕಲ್ಪನೆಯೆ ? ಭೌಗೋಳಿಕವಾಗಿ ಬೇರೆ ಬೇರೆ ರಾಜ್ಯದ ಅಧಿಪತ್ಯಗಳ ಭಾಗವಾಗಿದ್ದ ಕರ್ನಾಟಕಕ್ಕೆ ಏಕೀಕರಣದ ನಂತರ 'ಕನ್ನಡತ್ವ'ದ ಕಲ್ಪನೆ ಮೂಡಲು ಸಾಧ್ಯವಾಗಿಲ್ಲವೆ ?**

○ ಕನ್ನಡಿಗ ಕನ್ನಡತನದ ಬಗ್ಗೆ ಮೊದಲಿನಿಂದಲೂ ನಮ್ಮಲ್ಲಿ ಜಾಗೃತಿ ಇದೆ. ಪುಲಕೇಶಿಯ ಸೊಸೆ ತನ್ನನ್ನ ತಾನು ಕರ್ನಾಟಕಿ ಅಂತ ಕರೆದುಕೊಂಡಳು. ಆ ಕಾಲಕ್ಕೆ ಒಂದಾಗಿದ್ದ ಕಾರಣ ಕನ್ನಡಿಗರಿಗೆ ತಾವು ಒಂದಾಗಬೇಕೆನ್ನುವ ಪರಿಕಲ್ಪನೆಯ ಅಗತ್ಯ ಇರಲಿಲ್ಲ. ಒಂದು ರೀತಿಯ ಅರಕ್ಷಿತ-ಅನಾಥ ಸ್ಥಿತಿ ಬಂದಾಗ ನಾವು ಒಂದಾಗಬೇಕೆನ್ನುವ ಭಾವನೆ ಬರುತ್ತದೆ, ಬ್ರಿಟಿಷರ ಆಕ್ರಮಣದ ನಂತರ ಹರಿದು ಹಂಚಿಹೋದ ಕರ್ನಾಟಕ ಮತ್ತೆ ಒಂದಾಗ ಬೇಕೆನ್ನುವ ಭಾವನೆ ಬಂದಿತು. ನಮ್ಮ ಹಾಗೆ ಬಂಗಾಳ, ತಮಿಳುನಾಡುಗಳೂ ಹೋರಾಟ ನಡೆಸಿದವು. ಭಾರತ ಅನ್ನೋದು ಅಖಂಡವಾದ ಅಮೂರ್ತ ಭೂ ಪ್ರದೇಶ ಅಂತ ಗುರುತಿಸಬಹುದಾದರೂ ಸಾಂಸ್ಕೃತಿಕವಾಗಿ ಅಖಂಡ ಅಲ್ಲ. ಅನೇಕ ಭಾಷೆ ಸಂಸ್ಕೃತಿಗಳು ನಮ್ಮದು. ಈ ಉಪಸಂಸ್ಕೃತಿಗಳನ್ನು ನಾಶ ಮಾಡಿಬಿಟ್ಟರೆ ಭಾರತ ಅನ್ನೋದು ಇರುವುದಿಲ್ಲ. ಆ ಕಾಲಕ್ಕೆ ಭಾರತದ ರಾಷ್ಟ್ರೀಯ ಭಾವನೆಯ ಜೊತೆಜೊತೆಗೇ ಪ್ರಾಂತೀಯವಾದ ಭಾವನೆಗಳೂ ಉಜ್ವಲವಾದವು. ಇದು ಸ್ಪಷ್ಟವಾಗಿ ರೂಪು ಪಡೆದದ್ದು ಆಲೂರು

ವೆಂಕಟರಾಯರ ಕರ್ನಾಟಕ ಗತವೈಭವದಲ್ಲಿ, ಇತರ ರಾಜ್ಯಗಳಲ್ಲಿ ತಮ್ಮ ರಾಜ್ಯ ಬೇಕೆನ್ನುವ ಭಾವನೆ ಬಲವಾದ ಹಾಗೆ ನಮ್ಮಲ್ಲೂ ಏಕೀಕರಣದ ಹೋರಾಟ ಬಲವಾಯ್ತು. ಕನ್ನಡಿಗ ತನ್ನ ಅಸ್ತಿತ್ವವನ್ನ ವ್ಯಕ್ತಿತ್ವವನ್ನ ಗುರುತಿಸಿಕೊಳ್ಳ ಬೇಕು ಎಂದು ಏಕೀಕರಣದ ನಂತರ ಬಂದದ್ದು. ಆಮೇಲೆ ಕರ್ನಾಟಕ ಏಕೀಕರಣವಾಯ್ತು. ಎಷ್ಟು ಭೂಪ್ರದೇಶ ಉಳಿಯಿತೋ ಅಷ್ಟಕ್ಕೇ ಸಮಾಧಾನ ಪಡಬೇಕಾಯ್ತು. ಇಲ್ಲಿ ರಾಷ್ಟ್ರೀಯತೆ ಮತ್ತು ಪ್ರಾಂತದ ಅಭಿಮಾನ ಎರಡೂ ಖಂಡಿತವಾಗಿಯೂ ವಿರೋಧಿಗಳಲ್ಲ. ಕರ್ನಾಟಕವನ್ನ ಪ್ರೀತಿಸುವವನು ಭಾರತವನ್ನೂ ಪ್ರೀತಿಸುತ್ತಾನೆ. ನಿಜವಾದ ಪ್ರೀತಿ ಭಾರತದಂತೆ ಆಫ್ರಿಕಾ ದಂತಹ ಬಡ ರಾಷ್ಟ್ರಗಳೂ ಇರುವುದನ್ನ ಗುರುತಿಸುತ್ತದೆ.

● **ನಮ್ಮಲ್ಲಿ ಮುಸ್ಲಿಂ ಮತ್ತು ಕ್ರೈಸ್ತ ಮತದ ಅನೇಕರು ಕನ್ನಡ ಭಾಷೆಯ ಮುಖ್ಯ ಪ್ರವಾಹದಲ್ಲಿ ಒಂದಾಗಲು ಸಾಧ್ಯವಾಗಿಲ್ಲ. ತಮಿಳು-ಉರ್ದು ಹೀಗೆ ಬೇರೆ ಬೇರೆ ಭಾಷೆಗಳ ಮೂಲಕವೇ ಅವರು ತಮ್ಮ ಅಸ್ತಿತ್ವ ಗುರುತಿಸಿಕೊಳ್ಳುತ್ತಿದ್ದಾರೆ. ಬೇರೆ ರಾಜ್ಯದಲ್ಲಿ ವ್ಯಕ್ತಿ ಯೊಬ್ಬ ಯಾವುದೇ ಜಾತಿ-ಧರ್ಮಗಳಲ್ಲಿದ್ದರೂ ಆ ರಾಜ್ಯದ ಭಾಷೆಯೊಂದಿಗೆ ಆತ ಮೊದಲಿಗೆ ಗುರುತಿಸಿಕೊಳ್ಳುತ್ತಾನೆ. ನಮ್ಮ ಸಾಹಿತ್ಯದಲ್ಲೂ ಈ ರೀತಿಯಾಗಿ 'ಮುಸ್ಲಿಂ ಸಂವೇದನೆ' ಮುಸ್ಲಿಂ ಲೇಖಕ ಮುಂತಾಗಿ ಗುರುತಿಸಲ್ಪಡುತ್ತಾರೆ ಕನ್ನಡದ ಲೇಖಕ ಅಂತಲ್ಲ. ಯಾಕೆ ಹೀಗೆ.**

○ ನಮ್ಮಲ್ಲಿ ಮುಸ್ಲಿಮರು ಕನ್ನಡ ಭಾಷೆಯ ಜೊತೆಗೆ ತಮ್ಮನ್ನ ತಾವು ಗುರುತಿಸಿ ಕೊಂಡಿರೋದು ಅಷ್ಟಾಗಿ ಕಾಣುತ್ತಿಲ್ಲ ಆದರೆ ಬೆಂಗಳೂರಿನ ಕೆಲವು ತಮಿಳು ಕ್ರಿಶ್ಚಿಯನ್ನರನ್ನ ಹೊರತು ಪಡಿಸಿದರೆ ಉಳಿದಂತೆ ಕ್ರಿಶ್ಚಿಯನ್ನರು ಮುಖ್ಯ ಪ್ರವಾಹದ ಜೊತೆಗೆ ಬೆರೆತಿದ್ದಾರೆ. ನಮ್ಮ ಕನ್ನಡ ಪರ ಹೋರಾಟಗಳಲ್ಲಿ ಅನೇಕ ಕ್ರಿಶ್ಚಿಯನ್ನರೂ ಜೊತೆಗಿದ್ದಾರೆ ಅವರಲ್ಲಿ ಅನೇಕರು ಬೇರೆ ಬೇರೆ ಭಾಷೆಯ ಮೂಲದಿಂದ ಬಂದವರು. ಮುಸ್ಲಿಮರ ಬಗ್ಗೆ ಹೇಳಿದ ಮಾತನ್ನ ಒಟ್ಟಾಗಿ ಕ್ರಿಶ್ಚಿಯನ್ನರ ಬಗ್ಗೆ ಹೇಳಲಿಕ್ಕಾಗುವುದಿಲ್ಲ. ಇನ್ನು ಮುಸ್ಲಿಮರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಏನು ನಡೆಯುತ್ತಿದೆ ಎನ್ನುವುದು ತಿಳಿದಿರುವುದರಿಂದ ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನನ್ನದೇ ಆದ ಸ್ಪಷ್ಟ ಅಭಿಪ್ರಾಯಗಳಿವೆ.

● **ಕನ್ನಡ ನಾಡಿನಲ್ಲಿ ಅನೇಕ ಜನ ಬೇರೆ ಬೇರೆ ಭಾಷೆಗಳವರಿದ್ದಾರೆ. ಉದ್ಯೋಗದ ಕಾರಣ ದಿಂದಲೋ ಅಥವಾ ಇತರ ಯಾವುದೇ ಕಾರಣದಿಂದಲೋ ಇಲ್ಲಿ ಅವರುಗಳು ನೆಲೆಸಿದ್ದಾರೆ. ಅವರು ಈ ಭಾಷೆಯನ್ನ ಬಳಸುವ ಪ್ರೀತಿಸುವ ಹಾಗೆ, ಅವರನ್ನ ಕನ್ನಡಿಗರನ್ನಾಗಿ ಮಾಡುವುದು ಹೇಗೆ ?**

○ ಅದು ಸರ್ಕಾರದಿಂದ ಆಗುವ ಕೆಲಸವಲ್ಲ ಕಾನೂನಿಂದಲೂ ಸಾಧ್ಯವಿಲ್ಲ, ಜನ ಯಾರೇ ಬಂದರೂ ಅವರ ಜೊತೆ ಕನ್ನಡ ಭಾಷೆಯಲ್ಲೇ ಮಾತಾಡಬೇಕು.

ಉದ್ಯೋಗಗಳಿಗೆ ಸಂಬಂಧಿಸಿದ ಪರೀಕ್ಷೆಗಳಲ್ಲಿ ಕನ್ನಡ ಬಲ್ಲವರನ್ನೇ ಸ್ಥಳೀಕರನ್ನೇ ಆಯ್ಕೆ ಮಾಡಬೇಕು. ಮತ್ತೊಂದು, ಹೊರ ರಾಜ್ಯದ ಜನ ಇಲ್ಲಿ ತಮ್ಮ ಕೈಗಾರಿಕೆ ಸ್ಥಾಪಿಸಿದರೆ, ಸ್ಥಾಪಿಸಲಿ ಆದರೆ ಇಲ್ಲಿಯ ಜನಗಳನ್ನ ಉದ್ಯೋಗಕ್ಕೆ ತೆಗೆದುಕೊಳ್ಳಬೇಕು. ಬರೀ ಉದ್ಯೋಗ ಎಂದರೆ ಕೆಳಮಟ್ಟದ ಕೆಲಸಗಳಿಗಷ್ಟೇ ಅಲ್ಲ ಉನ್ನತ ಮಟ್ಟದ ಅಧಿಕಾರದಲ್ಲೂ ಅರ್ಹ ಕನ್ನಡಿಗರನ್ನ ಸ್ವೀಕರಿಸಬೇಕು. ಜನ ಒಟ್ಟಾಗಿ ಪ್ರತಿಭಟಿಸಬೇಕು. ಎಚ್ಚರಗೊಳ್ಳಬೇಕು.

● **ನಮ್ಮ ಚಳುವಳಿಗಳು ವಿಫಲಗೊಳ್ಳಲೂ ಇದೇ ಕಾರಣವಲ್ಲವೆ? ಅಧಿಕಾರ ಕೇಂದ್ರದಿಂದ ಕನ್ನಡವನ್ನ ಕಡ್ಡಾಯವಾಗಿ ಬಳಸುವಂತೆ ಮಾಡುವುದಕ್ಕೂ ಜನರ ಒತ್ತಾಸೆಯಿಂದಲೇ ಅಂತಹ ಒಂದು ಸ್ಥಿತಿ ಬರುವುದಕ್ಕೂ ವ್ಯತ್ಯಾಸಗಳಿವೆ. ಜನರ ಒತ್ತಾಸೆಯಿಂದ ಹುಟ್ಟದ ಯಾವುದೇ ಪ್ರಯತ್ನ ಯಶಸ್ವಿಯಾಗುವುದಿಲ್ಲ.**

○ ನಿಜ, ಆದರೆ ಇವುಗಳನ್ನ ಮಾಡೋರು ಯಾರಿದ್ದಾರೆ. ಮೂಲಭೂತವಾಗಿ ಚಳುವಳಿಯ ಮನುಷ್ಯ ನಾನಲ್ಲ. ಸಂಶೋಧಕನಾಗಿದ್ದವನು – ಪುಸ್ತಕಗಳ ನಡುವೆ ಇದ್ದವನು ಅನಿವಾರ್ಯವಾಗಿ ಚಳುವಳಿಗೆ ಇಳಿದಿರುವೆ. ನಾನು ಬಂದಿದ್ದರಿಂದ ಚಳುವಳಿಗೆ ಒಂದು ಗಾಂಭೀರ್ಯ ಬಂದಿದೆ. ಮುಖ್ಯಮಂತ್ರಿ ಆದಿಯಾಗಿ ಅಧಿಕಾರಿಗಳು ಮುಖ್ಯಸ್ಥರು ನಾವು ಹೇಳಿದ್ದನ್ನ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಚಳುವಳಿಗೆ ಲಕ್ಷಗಟ್ಟಲೆ ಹಣಬೇಕು, ನನ್ನ ದೌರ್ಬಲ್ಯ ನನ್ನ ಹತ್ತಿರ ಹಣವಿಲ್ಲ. ಜೊತೆಗೆ ನನ್ನ ವಯಸ್ಸೂ ಇದಕ್ಕೆ ಅಡ್ಡಿಯಾಗುತ್ತದೆ. ನಾವೆಲ್ಲಾ ಹಾರೈಸುತ್ತಿರುವುದು ಒಬ್ಬ ನಿಷ್ಠಾವಂತನಾದ ನಿಸ್ಪೃಹನಾದ ಲವಲವಿಕೆಯ ಯುವಕ ಒಂದು ಸಂಘಟಿಸುವ ಕೆಲಸ ಆಗಬೇಕು. ನಮ್ಮಲ್ಲಿ ಆ ಬಗೆಯ ಕೆಲಸ ಆಗಿಲ್ಲ. ನಮ್ಮ ಜನಗಳಲ್ಲಿ ಮೂಲಭೂತವಾದ ಒಂದು ಕೊರತೆ - ಜಡತೆ ಇದೆ ಎನಿಸುತ್ತದೆ. ಅವರಿಗೆ ಕೋಪ ಸಿಟ್ಟುಗಳೇ ಬರೋದಿಲ್ಲ ಗೋಕಾಕ್ ಚಳುವಳಿಯಂಥಾ ಚಳುವಳಿ ಎಲ್ಲ ಸಮಯದಲ್ಲೂ ಸಾಧ್ಯವಿಲ್ಲ. ಇಂಥದೊಂದು ಎಚ್ಚರ ಬರಬೇಕಾದ ಅಗತ್ಯ ಇದೆ. ನಾವು ಚಳುವಳಿಯನ್ನ ಜೀವಂತವಾಗಿ ಇಟ್ಟದ್ದೇವೆ. ಒಂದಷ್ಟು ಬೆಂಕಿಯನ್ನ ಜೀವಂತವಾಗಿಟ್ಟ ಹಾಗೆ ನಾಳೆ ಅದು ದೊಡ್ಡದಾಗಬಹುದೆನ್ನುವ ಭರವಸೆಯಿಂದ.

● **ಕನ್ನಡ ಭಾಷೆಯ ಬಗ್ಗೆ ಮಾತು ಬಂದಾಗಲೆಲ್ಲಾ ಸಾಹಿತ್ಯ ಮತ್ತು ಸಿನಿಮಾ ಇವೆರಡನ್ನೇ ಎತ್ತಿ ಹಿಡಿಯಲಾಗುತ್ತಿವೆ. ಭಾಷೆಯ ಹಿಂದೆಯ ಬಗ್ಗೆ ಸಾಹಿತ್ಯವನ್ನು ಉದಾಹರಿಸಿ. ಕನ್ನಡಕ್ಕೆ ಬಂದ ತೊಂದರೆ ಕನ್ನಡ ಸಿನಿಮಾಗಳಿಗೆ ಬಂದ ತೊಂದರೆ ಎಂಬಂತೆ ಪ್ರತಿಭಟನೆಗಳು ನಡೆಯುತ್ತವೆ. ಸಾಹಿತ್ಯ–ಸಿನಿಮಾ ಎರಡೇ ನಮ್ಮ ಭಾಷೆಯಲ್ಲ ಅಲ್ಲವೆ?**

○ ಕನ್ನಡ ಭಾಷೆ ಅಂದರೆ ಕನ್ನಡ ಸಾಹಿತ್ಯ ಅಂತ ನಮಗೆ ನಾವೇ ಮೋಸ ಮಾಡಿಕೊಂಡಿದ್ದೇವೆ. ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯ ಎರಡೂ ಸಮಾನಾರ್ಥಕ ಪದಗಳಲ್ಲ. ಭಾಷೆ ಎನ್ನೋದು ಜನಗಳ ದಿನ ಬಳಕೆಯಲ್ಲಿ

ಬಳಕೆಯಾಗುವಂಥಾದ್ದು. ಕನ್ನಡ ಭಾಷೆ ಬೆಳೆಯೋದು ಅಂದರೆ ಬರೀ ಕನ್ನಡ ಸಾಹಿತ್ಯದ ಬೆಳವಣಿಗೆ ಅಲ್ಲ. ಅದು ವಿಜ್ಞಾನದ-ತಂತ್ರಜ್ಞಾನದ ಭಾಷೆಯಾಗ ಬೇಕು. ಸಮಾಜಶಾಸ್ತ್ರ ವೈದ್ಯಕೀಯಗಳ ಪರಿಭಾಷೆಯಾಗಿ ಬೆಳೆಯಬೇಕು. ಆ ಕ್ಷೇತ್ರಗಳಲ್ಲಿ ನಮ್ಮ ಬೆಳವಣಿಗೆ ಏನೇನೂ ಸಾಲದು. ಆರು ಜ್ಞಾನಪೀಠ ಪ್ರಶಸ್ತಿ ಬಂದಿದೆ ನಿಜ, ಇನ್ನೂ ಹತ್ತು ಹಲವು ಕಡೆ ನಮ್ಮ ಭಾಷೆ ಬೆಳೆಯ ಬೇಕು. ಮುಖ್ಯವಾಗಿ ಕನ್ನಡಕ್ಕೆ ತನ್ನದೇ ಆದ ವ್ಯಕ್ತಿತ್ವ ಇದೆ ಎನ್ನೋ ನಂಬಿಕೆ ನಮ್ಮ ಜನಕ್ಕೆ ಬರಬೇಕು. ಭಾಷೆಯನ್ನ ಬಳಸುವ ರೀತಿಯಲ್ಲೇ ನಮ್ಮಲ್ಲೊಂದು ಸೂಕ್ಷ್ಮ ಹಿಂಜರಿಕೆ ಇದೆ, ಅದು ತೊಲಗಬೇಕು. ನಾವು ಬರೇ ನಮ್ಮ ಸಾಹಿತ್ಯ-ಸಾಹಿತಿಗಳನ್ನು ಎತ್ತಿತೋರಿಸುತ್ತಿದ್ದೇವೆ. ಇಂಗ್ಲೀಷ್ ಎಂದರೆ ಬರೀ ಇಂಗ್ಲಿಷ್ ಸಾಹಿತ್ಯವಲ್ಲ ವಿಜ್ಞಾನದಿಂದ ಕಂಪ್ಯೂಟರ್‌ವರೆಗೂ ಆ ಭಾಷೆ ಬೆಳೆಯುತ್ತಲೇ ಇದೆ. ಈ ವಿಶಾಲ ವಿಶ್ವಕ್ಕೆ ಹೋಲಿಸಿದರೆ ಕರ್ನಾಟಕ ಒಂದು ಚಿಕ್ಕ ರಾಜ್ಯ. ನಮ್ಮ ವಿಜ್ಞಾನದ ಲೇಖಕರು ಕರ್ನಾಟಕದ ಮಟ್ಟಿಗಾದರೂ ಒಂದು ಸಮಾನವಾದ ಪರಿಭಾಷೆ ಇಟ್ಟುಕೊಳ್ಳಬೇಕಾದ ಅಗತ್ಯ ಇದೆ. ಈ ಪರಿಭಾಷೆಯು ಸಮಸ್ಯೆ ಸಾಹಿತ್ಯಕ್ಕಿಲ್ಲ. ಬೇರೆ ಬೇರೆ ವಿಶ್ವವಿದ್ಯಾನಿಲಯ ಬೇರೆ ಬೇರೆ ವಿಜ್ಞಾನದ ಪರಿಭಾಷೆ ಹೊಂದಿರಲಿಕ್ಕೆ ಸಾಧ್ಯವಿಲ್ಲ. ತೆಲುಗಿನಲ್ಲಿ ಈ ನಿಟ್ಟಿನಲ್ಲಿ ಒಂದು ಪ್ರಯತ್ನ ಆಗಿದೆ. ಆದರೆ ಕರ್ನಾಟಕದಲ್ಲಿ ಮಾತ್ರ ಅವ್ಯವಸ್ಥೆ ತಾಂಡವವಾಡುತ್ತಿದೆ. ಸಾಹಿತ್ಯದ ವಿದ್ಯಾರ್ಥಿಯಾಗಿಯೂ ನನಗೆ ; ಸಾಹಿತ್ಯ ಬೆಳೆಯುತ್ತಿದೆ ನಿಜ. ಆದರೆ ವಿಜ್ಞಾನ, ಮನೋವಿಜ್ಞಾನ, ಸಮಾಜಶಾಸ್ತ್ರ, ರಾಜಕೀಯ–ಅರ್ಥಶಾಸ್ತ್ರ, ಮ್ಯಾನೇಜ್‌ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ನಮ್ಮ ಬೆಳವಣಿಗೆಯ ಬಗ್ಗೆ ತೀವ್ರ ಅತೃಪ್ತಿ ಇದೆ.

● **ನಮ್ಮಲ್ಲಿ ಒಂದು ಬಲವಾದ ಪ್ರಾದೇಶಿಕ ರಾಜಕೀಯ ಪಕ್ಷದ ಅಗತ್ಯ ಇದೆಯಲ್ಲವೇ ? ಸಾಂಸ್ಕೃತಿಕವಾಗಿ–ಭಾಷಿಕವಾಗಿ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಎತ್ತಿಹಿಡಿಯಬಲ್ಲ, ನಮ್ಮ ಹಿತದೃಷ್ಟಿಯಿಂದ ಬೆಂಬಲಿಸಬಲ್ಲ ಪಕ್ಷವೊಂದು ಬೇಕಲ್ಲ ?**

ಖಂಡಿತ ಅಗತ್ಯವಿದೆ. ಮತ್ತೆ ಏಳುವ ಪ್ರಶ್ನೆ ಇದನ್ನು ಯಾರು ಮಾಡಬೇಕು ಅನ್ನೋದು. ಇದು ಹಳೇ ಮಾತು. ಈ ಹಿಂದೆ ಇಂಥಾ ಒಂದು ಅಭಿಪ್ರಾಯ ಬಂದಾಗ, ಎಂ.ಡಿ. ನಂಜುಂಡಸ್ವಾಮಿಯವರು ಕನ್ನಡ ಪಕ್ಷವೊಂದನ್ನು ಕಟ್ಟಲು ಮುಂದೆ ಬಂದರು. ನಾವು ಹೇಳಿದೆವು. ನೀವು ಪಕ್ಷ ಕಟ್ಟಿ. ನನ್ನ ಕೈಲಿ ರಾಜಕಾರಣ ಆಗಲ್ಲ. ಎಲ್ಲವನ್ನೂ ಎಲ್ಲರೂ ಮಾಡಲಿಕ್ಕಾಗದು. ರಾಜಕಾರಣಕ್ಕೆ ಅದರದ್ದೇ ಆದ ಒಂದು ಮನೋಧರ್ಮ ಹಾಗೂ ರೀತಿನೀತಿಗಳಿರುತ್ತವೆ. ಆದರೆ ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ನಾನು ಕೆಲಸ ಮಾಡಬಲ್ಲೆ. ಕರ್ನಾಟಕದ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದೇಶ ಪಕ್ಷದ

ಪ್ರಣಾಳಿಕೆಯ ಅರ್ಧಭಾಗ ನಾವು ರೂಪಿಸಿದ್ದೆವು. ಅದರ ಉದ್ಘಾಟನೆಯೂ ಆಯ್ತು. ಮುಂದೇನಾಯ್ತು ಎಲ್ಲರಿಗೂ ಗೊತ್ತಿದೆ. ಪ್ರಾದೇಶಿಕ ಪಕ್ಷ ವೊಂದು ಬೇಕು ಎನ್ನುವುದರ ಬಗ್ಗೆ ಯಾವ ಅನುಮಾನವೂ ಇಲ್ಲ.

● ಈಗ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಮಾರುಕಟ್ಟೆ ಸಂಸ್ಕೃತಿಯ ಧಾಳಿಯ ಸ್ವರೂಪ ತೀವ್ರಸ್ವರೂಪದ್ದಾಗಿದ್ದು ನಮ್ಮ ಜೀವನ ಶೈಲಿಯನ್ನೇ ಬದಲಾಯಿಸುವಷ್ಟು ಬಲ ವಾಗಿದೆ. ಈ ಧಾಳಿಯಲ್ಲಿ ನಮ್ಮ ಕನ್ನಡ ಭಾಷೆ-ಸಂಸ್ಕೃತಿಗಳನ್ನು ಉಳಿಸಿಕೊಳ್ಳೋದು ಹೇಗೆ ?

○ ಇದು ಅತಿ ಬೃಹತ್ತಾದ ಸಮಸ್ಯೆ. ಕರ್ನಾಟಕಕ್ಕೇ ಸೀಮಿತವಾದದ್ದೂ ಅಲ್ಲ. ನನ್ನ ಸ್ನೇಹಿತರು ಒಂದು ಚಿಕ್ಕ ಉದಾಹರಣೆ ಕೊಟ್ಟರು. ಈ ಕೋಕಾಕೋಲಾ ಬಂದು ನಮ್ಮ ಸಣ್ಣಸಣ್ಣ ಸೋಡಾ ಫ್ಯಾಕ್ಟರಿಗಳೆಲ್ಲಾ ನಿರ್ನಾಮವಾಗಿ ಹೋಗಿದೆ. ನಮ್ಮ ಜೀವನ ವಿಧಾನವೇ ಬದಲಾಗುತ್ತಿದೆ. ಭಾರತೀಯತೆ, ಕನ್ನಡತನಗಳು ಅರ್ಥಹೀನವಾಗಿಬಿಡುವ ಪರಿಸ್ಥಿತಿ ಬಂದಿದೆ. ಈಗ ಬಿ.ಜೆ.ಪಿ. ಸರ್ಕಾರ ಬಂದಿದೆ ; ಈ ಬಿ.ಜೆ.ಪಿ. ಮಾತುಬಂದಾಗ ನಾನು ಇವುಗಳ ಪರ (ಪಕ್ಷಪಾತಿ) ಅಂತ ಗುರುತಿಸುತ್ತಾರೆ. ಆದರೆ ನನಗೆ ಎಲ್ಲಾ ಪಕ್ಷಗಳ ಜೊತೆಗೂ ಸಮಾನವಾದ ಅಂತರ ಇದೆ ಬಿ.ಜೆ.ಪಿ. ಸ್ವದೇಶೀ ಘೋಷಣೆಯೊಂದಿಗೆ ಬಂದಿದೆ. ಅದೆಷ್ಟು ಕಾಲ ಇರುತ್ತದೋ ಗೊತ್ತಿಲ್ಲ.

ನನ್ನ ವೈಯುಕ್ತಿಕ ಅಭಿಪ್ರಾಯದಂತೆ ವಿದೇಶೀ ಕಂಪನಿಗಳು ಬಂದು ಇಲ್ಲಿ ನೆಲೆಯಾಗುವುದಕ್ಕಿಂತಲೂ, ನಮ್ಮ ಸ್ಥಳೀಯ ಕಂಪನಿಗಳನ್ನು ಪ್ರೋತ್ಸಾಹಿಸ ಬೇಕು. ನಮ್ಮಲ್ಲಿ ಪ್ರತಿಭೆಯಾಗಲೀ, ಸಂಪನ್ಮೂಲಕ್ಕಾಗಲೀ ಕೊರತೆ ಇಲ್ಲ. ವಿದೇಶೀ ಕಂಪನಿಗಳ ಹಾವಳಿ ಎಷ್ಟು ಬೇಗ ನಿಲ್ಲಲು ಸಾಧ್ಯವಾದರೆ ಅಷ್ಟೂ ಒಳ್ಳೆಯದು. ನಮ್ಮ ಐಶ್ವರ್ಯ ಒಂದು ವೇಳೆ ಕಡಿಮೆಯಾದರೂ ಪರವಾಗಿಲ್ಲ. ನಮ್ಮ ಸಂಪತ್ತು ಹೆಚ್ಚಿ ನಮ್ಮ ಸಂಸ್ಕೃತಿ ನಾಶವಾದರೆ ಅದನ್ನು ಮರಳಿ ಪಡೆಯ ಲಾಗುವುದಿಲ್ಲ. ಕಳೆಕೊಂಡ ರೂಪಾಯಿಯನ್ನು ಇವತ್ತಲ್ಲ ನಾಳೆ ಗಳಿಸ ಬಹುದು.

ಈ ಬಿ.ಜೆ.ಪಿ. ಸರ್ಕಾರ ಕೆಳಹಂತದ ಮಾತೃಭಾಷಾ ಶಿಕ್ಷಣದಿಂದ ಹಿಡಿದು ವಿದೇಶೀ ಕಂಪನಿಗಳನ್ನು ಎಷ್ಟರಮಟ್ಟಿಗೆ ತಡೆದೀತು ಎನ್ನುವುದನ್ನು ಕಾದು ನೋಡಬೇಕು. ನನಗೆ ಭಾರತೀಯತ್ವ, ಕರ್ನಾಟಕತ್ವ ಎರಡೂ ಬೇರೆಯಲ್ಲ. ನಮ್ಮ ಭಾರತೀಯ ಸನಾತನ ಸಂಸ್ಕೃತಿಯ ಒಳ್ಳೆಯ ಅಂಶಗಳ ಬಗ್ಗೆ ನನಗೆ ಶ್ರದ್ಧೆ ಇದೆ.

● ನಮ್ಮ ಎಲ್ಲ ಅಭಿವೃದ್ಧಿ ಕಾರ್ಯಗಳಿಗೂ ಬೆಂಗಳೂರೇ ಕೇಂದ್ರವಾಗಿದೆ. ಇದೇ ಮಹಾ ರಾಷ್ಟ್ರ ಅಥವಾ ತಮಿಳುನಾಡಿನ ಉದಾಹರಣೆ ಗಮನಿಸಿ. ಆಯಾ ರಾಜ್ಯಗಳ ಉದ್ದ

ಅಗಲಕ್ಕೂ ಕೈಗಾರಿಕೆ ಮುಂತಾದ ಚಟುವಟಿಕೆಗಳು ಹರಡಿವೆ. ಆದಕಾರಣ ಉದ್ಯೋಗ ಅವಕಾಶ, ಅಭಿವೃದ್ಧಿ ಸವಲತ್ತುಗಳೂ ಸಾಧ್ಯವಾಗಿವೆ.

○ ಹೌದು ಹೌದು. ನಾವು ಮಾಡಿದ ಮೂಲಭೂತ ತಪ್ಪೆಂದರೆ ಎಲ್ಲವನ್ನೂ ಬೆಂಗಳೂರಿನಲ್ಲೇ ಸ್ಥಾಪಿಸಿದ್ದು. ಈಗೀಗ ಸ್ವಲ್ಪ ವಾಸಿ ಅಂತ ಕಾಣುತ್ತದೆ. ಹುಬ್ಬಳ್ಳಿ ಮತ್ತು ಇತರ ಕೆಲವು ಸ್ಥಳಗಳಲ್ಲಿ ಸ್ವಲ್ಪ ಮಟ್ಟಿಗಿನ ಬೆಳವಣಿಗೆ ಕಾಣುತ್ತಿದೆ. ಎಲ್ಲರಿಗೂ ಬೆಂಗಳೂರೇ ಬೇಕು. ಇಲ್ಲಿ ವಿಮಾನ ನಿಲ್ದಾಣ ಇದೆ. ಹವಾ ಚೆನ್ನಾಗಿದೆ. ಆದಕ್ಕಿಂತಲೂ ಹೆಚ್ಚಾಗಿ ತಮ್ಮ ಕಡೆಯ ಜನ ಗಳನ್ನು ಯಾರನ್ನು ಕರೆಸಿಕೊಂಡರೂ ಕೇಳೋದಿಲ್ಲ. ಕರ್ನಾಟಕ ಸರ್ಕಾರ ತನ್ನ ಉದ್ದಕ್ಕೂ ಮಾಡಿದ ಸಾವಿರಾರು ತಪ್ಪುಗಳಲ್ಲಿ ಇದೂ ಒಂದು.

● ಭಾವುಕತೆ ನಿಮ್ಮ ನಡವಳಿಕೆಯ ಒಂದು ಭಾಗವಾಗಿದೆ. ನೀವು ವಿದ್ಯಾರ್ಥಿ ದೆಸೆಯಲ್ಲಿ ನಿಮ್ಮ ಪದಕ ಪುಸ್ತಕಗಳನ್ನು ಮಾರಿ ಭಾರತ–ಚೀನಾ ಯುದ್ಧದ ಸಂದರ್ಭದಲ್ಲಿ ಸೈನಿಕರಿಗೆ ಸಹಾಯ ಮಾಡಿದ್ದೀರಿ. ವಿರೂಪಾಕ್ಷನ ಮುಂದೆ ರಕ್ತದ ಪ್ರತಿಜ್ಞೆ—ಹಂಪೆಯವರೆಗೂ ಕಾಲ್ನಡಿಗೆ ಮತ್ತು ಈಚಿನ ಜಲಪ್ರವೇಶದವರೆಗೂ.......

○ ಭಾವುಕತೆ ಮತ್ತು ಕಠೋರ ವಾಸ್ತವತೆ ಇವೆರಡೂ ನನ್ನ ವ್ಯಕ್ತಿತ್ವದ ಎರಡು ಮುಖಗಳು. ನಾನು ಭಾವುಕನಾಗಿ ಯಾವುದನ್ನು ಗ್ರಹಿಸುತ್ತೇನೋ, ಆ ಆ ಸಮಯದಲ್ಲಿ ಎಂದೂ ವಿವೇಕ ಕಳಕೊಳ್ಳುವುದಿಲ್ಲ. ತುಂಗಭದ್ರಾ ನದಿಯ ಜಲಪ್ರವೇಶವೂ ಸೇರಿದ ಹಾಗೆ ನನ್ನ ವಿವೇಕವನ್ನು ಎಲ್ಲೂ ಕಳೆದುಕೊಂಡಿಲ್ಲ. ಭಾವುಕತೆಯ ಸಂದರ್ಭದಲ್ಲಿ ಅವಿಚಾರಮೂಲ ನಿರ್ಣಯವನ್ನು ನಾನು ತೆಗೆದು ಕೊಂಡಿಲ್ಲ. ಇನ್ನೊಬ್ಬರಿಗೆ ನೋವುಂಟುಮಾಡುವ ಕೆಲಸವನ್ನು ಮಾಡಲು ಅಥವಾ ಮಾಡಿಸಲು ನನ್ನಿಂದ ಸಾಧ್ಯವಿಲ್ಲ. ಒಂದು ಸಮಸ್ಯೆಯನ್ನು ತೀವ್ರ ವಾಗಿ ಪರಿಭಾವಿಸಿ ನಾನು ಅಲ್ಲೇ ನಿಲ್ಲೋದಿಲ್ಲ. ಅದರ ಆಚೆಯ ಪರಿಹಾರದ ಕಡೆಗೆ ಅಷ್ಟೇ ಮಗ್ನನಾಗುತ್ತೇನೆ. ಬಹಳಷ್ಟು ಸಲ ನಾನು ವೇದಿಕೆಯ ಮೇಲೆ ಧ್ವನಿವರ್ಧಕದ ಎದುರಿನಲ್ಲಿ ಮಾತನಾಡಿದಷ್ಟೇ ವರದಿಯನ್ನಾಗಿ ಗಮನಿಸ ಲಾಗುತ್ತದೆ. ಆ ನಿಟ್ಟಿನಿಂದ ನೋಡಿದವರು ನನ್ನನ್ನು ಅಷ್ಟೇ ಅಂತ ಭಾವಿಸು ತ್ತಾರೆ. ಆದರೆ ಬಹುಮುಖ್ಯವಾದ ವೇದಿಕೆಯ ಹೊರಗಿನ ಅನುಸರಣ ಕಾರ್ಯಗಳು ಕಾಣುವಂಥಾದ್ದಲ್ಲ. ಒಂದುಕಡೆ ಭಾವುಕತೆ ಬೇಕಾಗುತ್ತೆ. ಒಬ್ಬ ತಾಯಿ ತನ್ನ ಮಗುವಿನ ಬಗ್ಗೆ ಯಾಕೆ ಕಾಳಜಿ ವಹಿಸ್ತಾಳೆ ಅಂದ್ರೆ ಅವಳಿಗೆ ಆ ಬಗ್ಗೆ ಭಾವುಕತೆ ಇದೆ. ಆದರೆ ಇದು ಭಾವುಕತೆಗಷ್ಟೇ ನಿಲ್ಲು ವುದಿಲ್ಲ. ಕ್ರಿಯಾತ್ಮಕತೆಗೆ ವಿಸ್ತಾರಗೊಳ್ಳುತ್ತದೆ. ಭಾವುಕತೆ, ಕ್ರಿಯಾತ್ಮಕತೆ ಎರಡೂ ಬೇಕು. ಭಾವುಕತೆ ಇಲ್ಲದೆ ಕ್ರಿಯಾತ್ಮಕತೆಯೂ ಇರುವುದಿಲ್ಲ. ಹಾಗೇ ಕ್ರಿಯಾತ್ಮಕತೆಯೇ ಇಲ್ಲದ ಭಾವುಕತೆಯೂ ವ್ಯರ್ಥ.

● ನಿಮ್ಮ ಜಲಪ್ರವೇಶದ ಹಿನ್ನೆಲೆ ತಿಳಿಸಿ. ಕನ್ನಡ ಚಳುವಳಿಯ ವೈಫಲ್ಯ ಇದಕ್ಕೆ ಕಾರಣವೇ ?

○ ನಾನು ಓದಿದ ಕಂಡು–ಕೇಳಿದ ಮಹಾತ್ಮರ ಜೀವನಗಳಲ್ಲಿ ಬದುಕನ್ನು ಹೇಗೋ ಸಾವನ್ನೂ ಅಷ್ಟೇ ಸಮಾಧಾನದಿಂದ ಸ್ವೀಕರಿಸಬೇಕು ಅಂತಿದೆ. ನಮ್ಮ ಮಹಾತ್ಮರು ಬರೇ ನನ್ನ ಬುದ್ಧಿಯ ಭಾಗವಾಗಬಾರದು, ನನ್ನ ಬದುಕಿನ ಒಂದು ಭಾಗವಾಗಬೇಕು. ಸತ್ಯವನ್ನು ಹೇಳಬೇಕೆನ್ನೋದು ಒಂದು ಆಲೋಚನೆಯಾಗಿ ನನ್ನಲ್ಲಿರೋದು ಮಾತ್ರವಲ್ಲದೆ ಸತ್ಯವನ್ನು ಹೇಳುವ ಸ್ವಭಾವವೂ ನನ್ನದಾಗಬೇಕು. ಇದು ನನ್ನ ಆದರ್ಶ. ನನ್ನ ಶ್ರದ್ಧೆ, ನನ್ನ ಆಲೋಚನೆಯ ಭಾಗವಾಗದೆ ನನ್ನದೇ ವ್ಯಕ್ತಿತ್ವದ ಒಂದು ಭಾಗವಾಗಬೇಕು.

ಜಲ ಪ್ರವೇಶ ಮಾಡಬೇಕು ಎನ್ನುವ ವಿಷಯದಲ್ಲಿ ಶೇಷಗಿರಿರಾಯರಿಗೆ ಬರೆದ ಪತ್ರದಲ್ಲಿ ನನ್ನ ಸಂಶೋಧನಾ ಪ್ರಬಂಧ ಬರೆದಷ್ಟೇ ಶಾಂತವಾಗಿ ಆ ಪತ್ರವನ್ನೂ ಬರೆದಿದ್ದೇನೆ. ಮುಳುಗುತ್ತಿದ್ದ ನನ್ನ ಯಾರೋ ತಂದು ಮೇಲಿಟ್ಟಿದ್ದಾರೆ, ಇದ್ದೀನಿ. ನಾನು ಏನು ಮಾಡಿದ್ದೇನೆ ಆ ಬಗ್ಗೆ ಪಶ್ಚಾತ್ತಾಪ ಇಲ್ಲ. ಅಥವಾ ಬದುಕಿದನಲ್ಲಾ ಅಂತ ಸಂತೋಷವೂ ಇಲ್ಲ, ಶ್ರದ್ಧೆ ಇದೆ. ಆತ್ಮ ಅಮರ ಅಂತೆಲ್ಲಾ ಹೇಳಿ ದೊಡ್ಡವರ ಬದುಕುಗಳನ್ನ ಕುರಿತು ಭಾಷಣ ಮಾಡ್ತೇವೆ. ನಮ್ಮಲ್ಲಿ ಆ ಶ್ರದ್ಧೆ ಬರೋಲ್ಲ, ನನ್ನಲ್ಲಿ ಆ ಶ್ರದ್ಧೆ ಇದೆ ಇದು ಅಹಂಕಾರದ ಮಾತಲ್ಲ. ಚಳುವಳಿಕಾರನಾದರೂ ನನ್ನೊಳಗೊಬ್ಬ ದೈವೀಭಕ್ತ ಇದ್ದಾನೆ. ಹೀಗಿರುವಾಗ ಭಾವುಕತೆ ಪ್ರಶ್ನೆ ಬರೋದಿಲ್ಲ. ನಾನು ನನ್ನ ದೈವದ ಮುಂದೆ, ಅದನ್ನ ಯಾವುದೇ ಹೆಸರಿನಿಂದ ಕರೆಯಿರಿ, ಕನ್ನಡಿಗರಲ್ಲಿ ಸಾರ್ವತ್ರಿಕ ಎಚ್ಚರ ಮೂಡಿಸುವುದಾಗಿ ಸಂಕಲ್ಪತೊಟ್ಟಿದ್ದೆ. ನನ್ನಿಂದು ಅದು ಸಾಧ್ಯವಾಗದಿದ್ದಾಗ ನಾನು ಇಲ್ಲಿಗೆ (ಹಂಪಿಗೆ) ಬಂದು ತುಂಗಭದ್ರೆಗೆ ನನ್ನನ್ನ ನಾನು ಒಪ್ಪಿಸಿಕೊಳ್ತೇನೆ ಎಂದೂ ಪ್ರತಿಜ್ಞೆ ಕೈಗೊಂಡಿದ್ದೆ. ಆ ಪ್ರತಿಜ್ಞೆಯನ್ನ ನಾನು ಈಡೇರಿಸಲಿಲ್ಲ ದೈವ ನಿನ್ನ ಪ್ರತಿಜ್ಞೆ ಒಪ್ಪಿರುವೆ ಇನ್ನೂ ಸ್ವಲ್ಪ ಕಾಲ ಈ ನೆಲದ ಮೇಲೆ ಇದ್ದುಬಾ ಎಂದು ಕಳಿಸಿದೆ. ಇದು ನನ್ನ ಶ್ರದ್ಧೆಯ ವಿಷಯ, ನಾನು ಅಲ್ಲಿಂದ ಬದುಕಿ ಬಂದಮೇಲೆ ಈ ನನ್ನ ನಾಲ್ಕಾರು ತಿಂಗಳುಗಳು ವ್ಯರ್ಥವಾಗಿಲ್ಲ. ಕೆಲವು ಒಳ್ಳೆಯ ಕಾರ್ಯಗಳು ಸಾಧ್ಯವಾಗಿದೆ. ಇದರ ಬಗ್ಗೆ ನಿಮಗೆ ವಿಚಿತ್ರ ಅಂತ ಅನ್ನಿಸಿದರೂ ನನಗೆ ಹಾಗನ್ನಿಸಿಲ್ಲ. ಪ್ರತಿಯೊಬ್ಬನಿಗೂ ಅವನದ್ದೇ ಆದ ಜೀವನ ದರ್ಶನ ಉಂಟು, ಆ ಚೌಕಟ್ಟಿನಲ್ಲಿ ಅವನು ತನ್ನ ಜೀವನ ನಡೆಸುತ್ತಾನೆ. ನನಗೆ ಆಚಿನ ಲೋಕದ ಕೈಲಾಸ–ವೈಕುಂಠ ಇಲ್ಲದೇ ಇರಬಹುದು, ಆದರೆ ಶಾಶ್ವತವಾದ ಮೌಲ್ಯಗಳ ಬಗ್ಗೆ ನಂಬಿಕೆ ಇದೆ.

● **ಜೀವನ ದರ್ಶನದ ಬಗ್ಗೆ ಮಾತು ಬಂತು, ನೀವು ನಿಮ್ಮ ಜೀವನದ ದರ್ಶನ ಅಂತ ಏನನ್ನು ಗುರುತಿಸುತ್ತೀರಿ ?**

○ ನನಗೆ ನಮ್ಮ ಪರಂಪರೆ ಏನು ಕಲಿಸಿಕೊಟ್ಟಿದೆ ಅದು ಸತ್ಯ ಎನಿಸುತ್ತದೆ. ಈ ಲೋಕದ ಆಚೆಗೆ ಯಾವುದೋ ಒಂದು ಶಕ್ತಿ ಇದೆ ಅನ್ನೋದು ಸುಳ್ಳಾದರೆ ಬಸವ, ಅಲ್ಲಮ, ಬುದ್ಧ, ಏಸುಕ್ರಿಸ್ತ, ರಾಮಕೃಷ್ಣ ಇವರುಗಳನ್ನ ಚರಂಡಿ-ಗೆಸೆಯಬೇಕಾಗುತ್ತೆ. ಅವರು ಹೇಳಿದ್ದಾರೆ ನಾವು ಕಂಡಿದ್ದೀವಿ. ನನಗೆ ಆಗಿರೋ ಕೆಲವು ಅನುಭವಗಳು ಇದು ಸುಳ್ಳು ಅನ್ನಿಸುವ ಹಾಗಿಲ್ಲ. ಶಾಶ್ವತವಾದ್ದು ಅನಂತವಾದ್ದು ಯಾವುದೋ ಒಂದಿದೆ ಅದಕ್ಕೆ ನೀವು ಪ್ರಾಮಾಣಿಕವಾಗಿ ಒಪ್ಪಿಸಿಕೊಂಡಾಗ ಆಗುವ ಅನುಭವ ಇದೆಯಲ್ಲ ಅದನ್ನ ನೀವು ಭ್ರಮೆ ಅಂತ ಕರೆಯೋಕಾಗಲ್ಲ. ನನ್ನ ಸಮಾಧಾನಕ್ಕೆ ನನ್ನ ಮನಸ್ಸು ಕಲ್ಪಿಸಿಕೊಂಡಿದ್ದನ್ನ ನನ್ನ ಸಂಶೋಧನೆಗಳಲ್ಲಿ ನಾನು ಕಂಡಹಾಗೆ, ಜಗತ್ತಿನ ಮುಖ ನೋಡಿಕೊಂಡು ನಾನು ಅದರ ಹಾವ ಭಾವಕ್ಕೆ ತಕ್ಕಹಾಗೆ ಬದುಕು ನಡೆಸಿದ್ದರೆ ಆಗ್ತಿರಲಿಲ್ಲ, ಅಚಲವಾದ ಶ್ರದ್ಧೆ ಇದೆ. ಒಳ್ಳೆಯವರ ಬಗ್ಗೆ ಯಾವ ಕಾರಣಕ್ಕೂ ಕಟುವಾದ ಮಾತು ಬರುವುದಿಲ್ಲ. ಜೊತೆಗೆ ದುಷ್ಟ ಯಾವನಿದ್ದಾನೆ ಅವನನ್ನ ಹಿಂದುಮುಂದು ನೋಡದೆ ದುಷ್ಟ ಅಂತನ್ನಬಲ್ಲೆ. ಒಳ್ಳೆಯತನದ ಪಾದಕ್ಕೆ ನಮಿಸಬಲ್ಲೆ. ಯಾವನು ದರ್ಪಿಷ್ಟ ಕುಹಕಿ ಇದ್ದಾನೋ ಅವನನ್ನ ಸಹಿಸಲಾರೆ ಇದು ನಾನು ಓದಿರುವ ಸಾಹಿತ್ಯದ ಒಟ್ಟು ಸಾರ, ಅಥವಾ ನಾನು ಕಲೆತಿರುವ ದರ್ಶನ. ನಿಮಗೆ ಚಿದಾನಂದಮೂರ್ತಿ ಮಹಾತ್ಮರ ಹಾಗೆ Project ಮಾಡ್ಕೋತಿದ್ದಾರಲ್ಲ ಅನ್ನಿಸಬಹುದು, ಆ ಪ್ರಶ್ನೆಯಲ್ಲ ಒಳಗಿನ ನಂಬಿಕೆಯದ್ದು.

ನಿರೀಕ್ಷಿಸಿ; ಸಂಚಯದ ಹೊಸ ಪುಸ್ತಕ ದಿ. ಸು.ರಂ. ಎಕ್ಕುಂಡಿಯವರ ಅನುವಾದಿತ ಕವಿತೆಗಳ ಸಂಕಲನ ಅತಿ ಶೀಘ್ರದಲ್ಲೇ ಪ್ರಕಟಗೊಳ್ಳಲಿದೆ.

'ಹೊಸತು ಹೊಸತು' - ಹೇಗೆ ಹೊಸತು ?

○ ○

ಡಾ|| ಬಸವರಾಜ ಕಲ್ಗುಡಿ

ಚಿದಾನಂದಮೂರ್ತಿಯವರ 'ಹೊಸತು-ಹೊಸತು' ಲೇಖನಗಳ ಸಂಕಲನ 50 ಸಂಶೋಧನ ಲೇಖನಗಳನ್ನು ಒಳಗೊಂಡಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಈ ಸಂಶೋಧನ ಗ್ರಂಥವು ಚಿದಾನಂದಮೂರ್ತಿಯವರ ಸಂಶೋಧನೆಯ ಆಸಕ್ತಿಯ ಮುಖ್ಯ ನೆಲೆಗಳನ್ನು ಸ್ಫುಟವಾಗಿ ಎತ್ತಿ ತೋರುತ್ತದೆ. ಇಲ್ಲಿಯ ಎಲ್ಲ ಲೇಖನಗಳೂ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟವುಗಳು. ಕರ್ನಾಟಕವೆಂಬ ಸಾಂಸ್ಕೃತಿಕ ಅರ್ಥವ್ಯಾಪ್ತಿಯ ಲಕ್ಷಣಗಳನ್ನು ಇಲ್ಲಿಯ ಲೇಖನಗಳಲ್ಲಿ ಸಾಹಿತ್ಯಕ ನೆಲೆಯಲ್ಲಿ, ಭೌಗೋಳಿಕ ನೆಲೆಯಲ್ಲಿ ಹಾಗೂ ಜನಪದೀಯ ಬದುಕಿನ ವಿವರಣೆಗಳಲ್ಲಿ, ಪುನಾರಚಿಸುವ ಮುಖ್ಯ ಪ್ರಯತ್ನವು ಇಲ್ಲಿನ ಲೇಖನಗಳ ಪ್ರಮುಖ ಧಾಟಿಯಾಗಿದೆ. ಬಿಡಿ-ಬಿಡಿಯಾಗಿ ಈ ಲೇಖನಗಳನ್ನು ಓದಿದಾಗ ಹೊರಡುವ ಅರ್ಥಕ್ಕೂ, ಈ ಸಂಕಲನದಲ್ಲಿ ಆ ಲೇಖನಗಳು ಹೊರಡಿಸುವ ಸಂಶೋಧಕನ ಒಟ್ಟಾರೆ ಮನೋಧರ್ಮಕ್ಕೂ ತೀವ್ರವಾದ ಭಿನ್ನ ಆಯಾಮಗಳು ಕಂಡುಬರುತ್ತವೆ. ಕನ್ನಡತನದ ಶೋಧವು ಇಲ್ಲಿ ಪರೋಕ್ಷವಾಗಿ ಕೆಲವೆಡೆ, ಪ್ರತ್ಯಕ್ಷವಾಗಿ ಅನೇಕ ಕಡೆ ಹೀಗೆ ಮಡುಗಟ್ಟಿ ನಿಲ್ಲಲು ಹಾತೊರೆಯುವ ಆಶಯವು ಮುಖ್ಯ ಲಕ್ಷಣವಾಗಿದೆ.

ಚಿದಾನಂದಮೂರ್ತಿಯವರ ಸಂಶೋಧನೆಯು ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನತತ್ವದ ಪರವಾಗಿಯೇನೂ ಇಲ್ಲ. ವಾಸ್ತವವಾಗಿ ಈ ದಾರಿಗೆ ವಿರುದ್ಧವಾದ ದಾರಿಯನ್ನೇ ಅವರು ಸಂಶೋಧನೆಯ ಆಶಯವನ್ನಾಗಿ ಆಯ್ದು ಕೊಂಡರು. ಹೀಗಾಗಿ ದೇಸೀ ಬೇರುಗಳ ಗುರುತಿಸುವಿಕೆ ಇವರ ಸಂಶೋಧನೆಯ ಮುಖ್ಯ ಭಿತ್ತಿಯಾಯಿತು. ಕರ್ನಾಟಕದ ಬಗ್ಗೆ ಕೆಲಸ ಮಾಡಿದ ಓರಿಯಂಟಲ್ ವಿದ್ವಾಂಸರ, ಈ ಸಂಸ್ಕೃತಿ ಕುರಿತ ಭಾವನೆಗಳ ಹಾಗೂ ಗ್ರಹಿಕೆಯ, ಸ್ವರೂಪವನ್ನು ತಪ್ಪು ಎಂದು ತೋರಿಸುವ ಕೆಲಸವನ್ನು ಕನ್ನಡದ ಪ್ರಮುಖ ವಿದ್ವಾಂಸರು ಮಾಡಿದ್ದಾರೆ. ಈ ಬಗ್ಗೆ ಓರಿಯಂಟಲ್ ವಿದ್ವಾಂಸರ ವಾದ ಮುಖ್ಯವಾಗಿ 'ಮನುಷ್ಯನ ಲೌಕಿಕ ಬದುಕನ್ನು ಉನ್ನತ ಸ್ಥಾನಕ್ಕೇರಿಸುವ ವಿಶ್ವಚಿಂತನೆಯ ಸಾಮಗ್ರಿಗೆ, ಕನ್ನಡ ಚಿಂತನೆಯು ಬೆಲೆಯುಳ್ಳ ಏನನ್ನೂ ಕೊಡಲಿಲ್ಲ. ಕನ್ನಡದ ಚಿಂತನೆ ಏನೇ ಆದರೂ ಮೂಲತಃ ಧಾರ್ಮಿಕ ಪ್ರವೃತ್ತಿಯದು. ಈ ಲೋಕವನ್ನು ನಿರಾಕರಿಸುವಂಥದ್ದು,' ಎನ್ನುವುದೇ ಆಗಿದೆ. ರೈಸ್ ಸಾಹೇಬರು ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ತಮ್ಮ ದೀರ್ಘಲೇಖನದಲ್ಲಿ ಈ ಹೇಳಿಕೆಯನ್ನು ನಿರ್ಣಯ ವೆಂಬಂತೆ ಮಂಡಿಸಿದರು. ಒಂದು ನೆಲೆಯಲ್ಲಿ ಪಾಶ್ಚಿಮಾತ್ಯ ಬದುಕು ಒಪ್ಪಿಕೊಂಡಿದ್ದ

ಬದುಕಿನ ಬಗೆಗಿನ ಗ್ರಹಿಕೆಯನ್ನು ಪೌರ್ವಾತ್ಯ ಸಂಸ್ಕೃತಿಯ ಮೌಲ್ಯಮಾಪನದ ಮಾನದಂಡವನ್ನಾಗಿ ಇಲ್ಲಿ ಬಳಸಲಾಯಿತು. ರಂ. ಶ್ರೀ. ಮುಗಳಿಯವರು 'ಕನ್ನಡ ಸಾಹಿತ್ಯ ಚರಿತ್ರೆ'ಯೆನ್ನುವ ಗ್ರಂಥದಲ್ಲಿ ಈ ಅಭಿಪ್ರಾಯಗಳಿಗೆ ಉತ್ತರವನ್ನು ಕೊಟ್ಟರು. ಆದರೆ ಈ ಉತ್ತರವು ಆ ವಿದ್ವಾಂಸರು ಹೇಳಿದ ಮೌಲ್ಯವನ್ನು ಒಪ್ಪಿಕೊಂಡು, ಅದನ್ನು ಕನ್ನಡ ಸಾಹಿತ್ಯದಲ್ಲಿ ಹುಡುಕ ಹೊರಟ ಧಾಟಿಯದಾಗಿತ್ತು. ಆ ಕಾಲದಲ್ಲಿ ಹಳಗನ್ನಡ ಕಾವ್ಯಸಂಗ್ರಹಗಳನ್ನು ಮಾಡಿದ ವಿದ್ವಾಂಸರೂ ಇದೇ ಮಾದರಿಯನ್ನು ಅನುಸರಿಸಿದರು. ಹಳಗನ್ನಡ ಕಾವ್ಯದಲ್ಲಿ ಯಾವ ಭಾಗಗಳು ಕಲಾತ್ಮಕ ನಾಟಕೀಯತೆಯಿಂದ ಕೂಡಿವೆಯೋ ಅಂಥವುಗಳನ್ನು ಆಯ್ದು ಧಾರ್ಮಿಕ, ತಾತ್ವಿಕ ವಿವರಗಳ ಭಾಗಗಳನ್ನು ಸಂಗ್ರಹದಲ್ಲಿ ಕೈಬಿಡಲಾಯಿತು.

ಅದೃಷ್ಟವಶಾತ್ ಈ ನಂಬಿಕೆಯನ್ನು ನಮ್ಮ ಸಂಶೋಧನ ವಲಯ ಅಷ್ಟೊಂದು ಪ್ರಧಾನವೆಂದು ಗುರುತಿಸಲಿಲ್ಲ. ಮೊದಲ ತಲೆಮಾರಿನ ಡಿ.ಎಲ್.ಎನ್. ಗೋವಿಂದಪೈ, ತಳುಕಿನ ವೆಂಕಣ್ಣಯ್ಯ, ಹಳಕಟ್ಟಿ, ಮಾಳವಾಡ, ಬಸವನಾಳ, ಎಲ್. ಬಸವರಾಜು, ನರಸಿಂಹಾಚಾರ್ ಮೊದಲಾದವರು, ಓರಿಯಂಟಲಿಸ್ಟರ ಈ ವಾದವನ್ನು ಕನ್ನಡದಲ್ಲಿ ಒಂದು ವಾಗ್ವಾದದ ಭೂಮಿಕೆಯೆಂದು ಭಾವಿಸಲೇ ಇಲ್ಲ. ಆದ್ದರಿಂದ ಕಾವ್ಯಸಂಪಾದನೆ ಮತ್ತು ವಿವರಣೆಗಳಲ್ಲಿ ಅವುಗಳನ್ನು ಕನ್ನಡ ಬದುಕಿನ ಚಿಂತನೆಯ ಭಾಗಗಳೆಂದೇ ಗೃಹೀತ ಹಿಡಿದು ವಿವರಿಸಲಾಯಿತು. ಆಧುನಿಕತೆಯ ಉದಾರವಾದಿತ್ವ (Liberalism) ವಾತಾವರಣಕ್ಕೆ ಒಲಿಬಿದ್ದ ಜನಗ್ರಹಿಕೆಯ ನಡುವೆ ಈ ವಿದ್ವಾಂಸರ ಚರ್ಚೆ ಅರ್ಥಪೂರ್ಣವೆನ್ನಿಸುವುದು ಯಾಕೆಂದರೆ, ಕನ್ನಡ ಸಂಸ್ಕೃತಿಯ ಭಿನ್ನ ಭಿನ್ನ ಅಭಿವ್ಯಕ್ತಿಗಳೆಂದು ನಮ್ಮ ಹಳಗನ್ನಡ ಸಾಹಿತ್ಯಗಳ ಅಭಿವ್ಯಕ್ತಿಯನ್ನು ಕಂಡ ಇವರು, ಇವು ಹೊರಡಿಸುವ ಧಾರ್ಮಿಕ ನೆಲೆಗಳನ್ನು ಗುರುತಿಸಹತ್ತಿದ್ದರು. ಮತಧರ್ಮವು ಮಾಡುತ್ತಿದ್ದ ಸೀಮಿತ ಅರ್ಥದ ಚರ್ಚೆಗೂ, ಸಾಹಿತ್ಯವು ಇದನ್ನು ಮೀರಿ ಮಾಡುತ್ತಿದ್ದ ಧಾರ್ಮಿಕ ನಡಾವಳಿಯ ಅರ್ಥಪೂರ್ಣ ಚರ್ಚೆಗೂ ಇದ್ದ ಅಂತರವನ್ನು ಇವರು ಗುರುತಿಸಿದ್ದರು.

ಇಂಥ ಪರಂಪರೆಯ ಅರ್ಥಪೂರ್ಣ ವಿಶ್ಲೇಷಣೆಯ ಬೆಳವಣಿಗೆಯಾಗಿಯೇ ನಂತರದ ತಲೆಮಾರಿನ ವಿದ್ವಾಂಸರಲ್ಲಿ ಚಿದಾನಂದಮೂರ್ತಿಯವರ ಸಂಶೋಧನೆಯು ಮಹತ್ವ ಪಡೆಯುತ್ತದೆ. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದ ಕೃತಿಯಲ್ಲಿ ಶಾಸನಗಳ ಮೂಲಕ ಸಂಸ್ಕೃತಿ ವಿವರಣೆಯ ಕೆಲಸವನ್ನು ಮಾಡಲಾಗದಿದ್ದರೂ, ಕನ್ನಡ ಬದುಕಿನ ಸಂಕೀರ್ಣ ಲಕ್ಷಣಗಳನ್ನು ಅವುಗಳು ಸೆರೆಹಿಡಿಯಲಾರವೇನೋ ಅನ್ನುವ ಅತೃಪ್ತಿ ಬಹುಶಃ ಚಿದಾನಂದಮೂರ್ತಿಯವರನ್ನು ಕಾಡಿರಬೇಕು. ಏಕೆಂದರೆ ಶಾಸನಗಳ ದೃಷ್ಟಿ ಎಷ್ಟಾದರೂ ಆಳುವವರ ಪರಿವಲಯವನ್ನು ಸುತ್ತುವರಿದೇ ಕೆಲಸ ಮಾಡಬೇಕು ತಾನೇ ! ಆದ್ದರಿಂದಲೇ ಸಾಹಿತ್ಯ, ಜಾನಪದ, ಭಾಷೆಯ ಹತ್ತು ಹಲವು ವೈವಿಧ್ಯ, ಇವು ಚಿದಾನಂದಮೂರ್ತಿಯವರನ್ನು ಸಂಶೋಧನೆಗೆ ಎಳೆದ ಹಲವು

ಮೂಲಗಳು. 'ಹೊಸತು-ಹೊಸತು' ಈ ಎಲ್ಲಾ ಅಂಶಗಳನ್ನೂ ಬಳಸಿಕೊಂಡು ಕನ್ನಡದ ವೈವಿಧ್ಯತೆಯನ್ನು ವಿವರಿಸುವ ಪ್ರಯತ್ನ ಮಾಡುತ್ತದೆ.

'ಧಾರ್ಮಿಕತೆ' ಎನ್ನುವುದಕ್ಕೆ ನಮ್ಮ ಸಾಹಿತ್ಯ ಸಂಸ್ಕೃತಿಯಲ್ಲಿ ಕೊಡಲಾದ ವಿವರಣೆಯನ್ನು ಇಲ್ಲಿಯ ಹಲವು ಲೇಖನಗಳು ವಿವರಿಸುತ್ತವೆ. ಕರ್ನಾಟಕದ 'ಜೈನಧರ್ಮದಲ್ಲಿ ಯುದ್ಧ ಮತ್ತು ಅಹಿಂಸೆಗಳ ಪರಿಕಲ್ಪನೆ', 'ತಪಸ್ಸಿನ ಎರಡು ಕೋಡುಗಳು', 'ಅಂತರಜಾತೀಯ ವಿವಾಹದ ಬಗ್ಗೆ ಚನ್ನಬಸವಣ್ಣನ ಒಂದು ವಚನ' ಮೊದಲಾದ ಲೇಖನಗಳಲ್ಲಿ ಕನ್ನಡದ ಮನೋಧರ್ಮ ಲೌಕಿಕವನ್ನು ಧಾರ್ಮಿಕ ನೆಲೆಗೆ ಎತ್ತುವುದರಲ್ಲಿ ಯಾವ ವೈರುಧ್ಯಗಳಿಲ್ಲದೆ ದುಡಿಯುವುದನ್ನು ಗುರುತಿಸಲಾಗಿದೆ. 'ಶ್ರವಣಬೆಳಗೊಳ'ಕ್ಕೆ ಮೂಲ 'ಹಳೆಯ ಬೆಳ್ಗೊಳ' : 'ಶ್ರವಣಬೆಳ್ಗೊಳ : ಒಂದು ಸಾಂಸ್ಕೃತಿಕ ಕೇಂದ್ರವಾಗಿ' 'ಹಂಪೆಯಲ್ಲಿ ಹರಿಹರ ಮತ್ತು ಚಾಮರಸರ ವಾಸಸ್ಥಾನಗಳ ಶೋಧ', 'ಅಡಿಕೆಗೆ ಪ್ರಸಿದ್ಧವಾದ 'ನೆಲವತಿ' ಗ್ರಾಮ ಯಾವುದು ?' ಮೊದಲಾದ ಲೇಖನಗಳು ಭೌಗೋಳಿಕವಾಗಿ ಕನ್ನಡದ ಸಾಂಸ್ಕೃತಿಕ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಯನ್ನು ವಿವರಿಸಲು ಪ್ರಯತ್ನಿಸುತ್ತಿವೆ. ಜಾನಪದ ವಸ್ತು ವಿವರಗಳ ವಿಶ್ಲೇಷಣೆಯಲ್ಲಿ ಇಲ್ಲಿಯ ಸಂಕೀರ್ಣ ಬದುಕಿನ ಸೂಕ್ಷ್ಮ ನೆಲೆಗಳನ್ನು ಗುರುತಿಸಲಾಗಿದೆ. ಹೀಗೆ ಕನ್ನಡದ ಬದುಕಿನ ವೈವಿಧ್ಯತೆಯ ವಿವರಣೆಯ ಗ್ರಹಿಕೆಯನ್ನು ಮಾಡುತ್ತಲೇ, ಅವುಗಳೆಲ್ಲವು ಒಟ್ಟಾಗಿರುವ, ವೈವಿಧ್ಯಮಯ ಚಿತ್ರದಂತೆ ಕಾಣಿಸುವುದನ್ನು ಪರೋಕ್ಷವಾಗಿ ಲೇಖನಗಳಲ್ಲಿ ಸೆರೆಹಿಡಿಯಲಾಗಿದೆ. ಇಲ್ಲಿನ ಲೇಖನಗಳಲ್ಲಿಯ ವೈವಿಧ್ಯತೆಯ ಸ್ವರೂಪವು ಒಟ್ಟು ಕನ್ನಡ ಸಂಸ್ಕೃತಿಯ ಮೊಸಾಯಿಕ್ ಚಿತ್ರವನ್ನು ಹೇಗೆ ತೋರಿಸುತ್ತದೆ ಎನ್ನುವುದರ ಬಗ್ಗೆ ಇನ್ನಷ್ಟು ದೀರ್ಘವಾಗಿ ಬರೆಯಬಹುದು. ಆದರೆ ನನ್ನ ಮುಖ್ಯ ಉದ್ದೇಶ 'ಹೊಸತು-ಹೊಸತು' ಕೃತಿಯು ಓರಿಯಂಟಲ್ ಆಲೋಚನೆಗಳನ್ನು ಪೂರ್ವಪಕ್ಷವನ್ನಾಗಿ ಮಾಡಿಕೊಳ್ಳದೆ, ಈ ಸಂಸ್ಕೃತಿ ರಚನೆಯ ಮುಖ್ಯ ಲಕ್ಷಣಗಳನ್ನು ಇಲ್ಲಿನ ವಸ್ತುವೈವಿಧ್ಯಗಳ ವಿವರಣೆಯ ಸಂದರ್ಭದಲ್ಲಿಯೇ ಸೂಕ್ಷ್ಮವಾಗಿ ಮಂಡಿಸುವುದನ್ನು ಗುರುತಿಸುವುದೇ ಆಗಿದೆ. ಈ ಸಂಸ್ಕೃತಿಯೊಡನೆ ಆಳವಾಗಿ ಬೇರುಬಿಡದೆ, ಭಾವನಾತ್ಮಕ ಸಂಬಂಧಗಳನ್ನು ಹೊಂದದೆ ಇಂತಹ ಬರವಣಿಗೆಯು ಸಾಧ್ಯವಿಲ್ಲ. ಇಂದು ಆಧುನಿಕತೆಯ ಈ ಸಂದರ್ಭದಲ್ಲಿ ಇಂತಹ ಬರವಣಿಗೆಯ ಈ ಕ್ರಮವು ಇನ್ನಷ್ಟು ಭಿನ್ನ ಆಯಾಮಗಳೊಂದಿಗೆ ಬೆಳೆಯಬೇಕಾಗಿದೆ ಎನ್ನುವುದು ನಮ್ಮ ಹೊಸ ಸಂಶೋಧಕರು ಗಮನಿಸಬೇಕಾದ ಸಂಗತಿಯಾಗಿದೆ ಎನ್ನುವ ಕಾರಣಕ್ಕೂ 'ಹೊಸತು-ಹೊಸತು' ಒಂದು ವಿಶಿಷ್ಟ ಸಂಶೋಧನಾ ಸಂಕಲನವಾಗಿದೆ.

(ಕೃಪೆ : ಕನ್ನಡ ಕಾರ್ಯಕರ್ತರ ಬಳಗದ ಕಿರುಹೊತ್ತಿಗೆ)

"ಹಾಡೆ ಹಾದಿಯ ತೋರಿತು" ಕೆಲವು ಅನಿಸಿಕೆಗಳು

○ ○

ಎನ್. ಎಸ್. ಶ್ರೀಧರಮೂರ್ತಿ

1

ಹೆಚ್. ಎಸ್. ರಾಘವೇಂದ್ರರಾವ್ ಅವರ ಮೊದಲ ವಿಮರ್ಶಾ ಲೇಖನಗಳ ಸಂಕಲನ "ವಿಶ್ಲೇಷಣೆ" ಪ್ರಕಟವಾದದ್ದು 1981ರಲ್ಲಿ. ಈ ಸಂಕಲನದಲ್ಲಿ ಅವರೇ ಹೇಳಿರುವಂತೆ 11 ವರ್ಷದಲ್ಲಿ ಬರೆದ ವಿಮರ್ಶಾ ಲೇಖನಗಳು ಸಂಕಲಿತವಾಗಿವೆ. ಅಂದರೆ ಸುಮಾರು ಕಳೆದ ಮೂರು ದಶಕಗಳಿಂದ ವಿಮರ್ಶಾ ಕ್ಷೇತ್ರದಲ್ಲಿರುವ ಅವರ ಮಹಾಪ್ರಬಂಧ "ಹಾಡೆ ಹಾದಿಯ ತೋರಿತು" ಕುರಿತು ಮಾತನಾಡುವ ಮೊದಲು ಹೆಚ್.ಎಸ್.ಆರ್. ನಮಗೆ ಏಕೆ ಮುಖ್ಯವಾಗುತ್ತಾರೆ ಎಂಬುದನ್ನು ಗುರುತಿಸಿ ಕೊಳ್ಳಬೇಕು. ಹೆಚ್.ಎಸ್.ಆರ್. ಅವರ ವಿಮರ್ಶೆ ಎಂದಿಗೂ ಕೂದಲು ಸೀಳುವ ಬೌದ್ಧಿಕ ಸಾಹಸವಾಗಿರಲಿಲ್ಲ. ವಿಮರ್ಶೆ ಎಂಬುದು ಪಾಂಡಿತ್ಯ ಪ್ರದರ್ಶನವೂ, ಆತ್ಮರತಿಯ ವಿಸ್ತರಣವೂ ಆಗಿರುವ ಈ ದಿನಗಳಲ್ಲಿ ಹೆಚ್.ಎಸ್.ಆರ್. ಸರಳವಾಗಿ ಬರೆಯುವ ಬಗ್ಗೆಯೇ ಪ್ರಯತ್ನಿಸಿದವರು. ಸರಳವಾದರೆ ಅಗ್ಗದ ಜನಪ್ರಿಯತೆಯ ಸರಕಾಗಬಲ್ಲದು ಎಂಬ ನಂಬಿಕೆಗೆ ವಿರುದ್ಧವಾಗಿ, ಬೌದ್ಧಿಕ ನಿಖರತೆಯನ್ನು ಪ್ರಖರವಾಗಿ ಉಳಿಸಿಕೊಂಡು ಬಂದವರು. ಈ ಎರಡನ್ನೂ ಅವರು ಸಾಧಿಸಿರುವುದು ಒಂದು ಅಪರೂಪದ ಸಂಗತಿಯಾಗಿರುವುದರಿಂದಲೇ ಹೆಚ್.ಎಸ್.ಆರ್. ನಮಗೆ ತುಂಬಾ ಮುಖ್ಯವಾಗಿರುವುದು. "ವಿಶ್ಲೇಷಣೆ"ಯಲ್ಲಿ ತಮ್ಮ ವಿಮರ್ಶೆ ರೂಪನಿಷ್ಠ ವಿಮರ್ಶೆಯ ಕಡೆ ವಾಲುತ್ತಿದೆ ಎಂಬ ಅನುಮಾನ ವ್ಯಕ್ತಪಡಿಸಿದ್ದ ಅವರು ತಮ್ಮ ಮುಂದಿನ ವಿಮರ್ಶಾ ಸಂಕಲನದ "ನಿಲುವು"ಲ್ಲಿ ತಮ್ಮ ಕೆಲವು ಗಟ್ಟಿ ನಿಲುವುಗಳನ್ನು ಬರೆದಿದ್ದಾರೆ. ಅದರಲ್ಲಿ ಎರಡು ಅಂಶಗಳು, "ಹಾಡೆ ಹಾದಿಯ ತೋರಿತು" ವಿಶ್ಲೇಷಣೆಗೆ ಹಿನ್ನೆಲೆ ಒದಗಿಸಬಲ್ಲವಾದ್ದರಿಂದ ಅವನ್ನಿಲ್ಲಿ ಚರ್ಚೆಗೆ ಎತ್ತಿಕೊಂಡಿದ್ದೇನೆ. ಅದರಲ್ಲಿ ಮೊದಲನೆಯದು, ಸೃಜನಶೀಲ ಸಾಹಿತಿಗಳ ಸೃಷ್ಟಿಕಾರ್ಯವು ಯಾವುದೇ ವಿಮರ್ಶಕನ ಸಾಧನೆಗಿಂತ ಮೇಲುದರ್ಜೆಯದೆಂದು ಅವರ ನಂಬಿಕೆ. ಈ ನಂಬಿಕೆಯಿಂದಲೇ, "ಹಾಡೆ ಹಾದಿಯ ತೋರಿತು" ಮಹಾಪ್ರಬಂಧದ ಸ್ವರೂಪ ಶೀರ್ಷಿಕಾನವಾಗಿರುವುದು. ನಮ್ಮ ಅನೇಕ ವಿಮರ್ಶಕರಂತೆ "ತಾನು ತೀರ್ಪುಗಾರ" ಎಂಬ ಭ್ರಮೆ ಹೆಚ್.ಎಸ್.ಆರ್. ಅವರಿಗೆ ಇಲ್ಲದಿರುವುದರಿಂದಲೇ, ಮೂವರು ಮಹಾಕವಿಗಳ ತೌಲನಿಕ ವಿಮರ್ಶೆಯ ಸಾಹಸಕ್ಕೆ ಇಳಿಯುವುದು ಅವರಿಂದ ಸಾಧ್ಯವಾಗಿದೆ. ತುಲನಾತ್ಮಕತೆಯಲ್ಲಿನ ಸೂಕ್ಷ್ಮತೆ ಅವರಿಗಿರುವ ಸೃಜನಶೀಲ ಸಾಹಿತ್ಯದ ಬಗೆಗಿನ

ಗೌರವದಿಂದ ಬಂದಿದ್ದು, ಎರಡನೇ ಅಂಶ ವಿಮರ್ಶಕನೊಬ್ಬ ಸಾಹಿತಿಗಳೊಂದಿಗೆ ಹೊಂದಿರಬಹುದಾದ ಸಂಬಂಧಗಳ ಬಗೆಗಿನ ಅವರ ನಂಬಿಕೆ, ನಮ್ಮ ಅನೇಕ ವಿಮರ್ಶಕರು ಖಾಸಗಿಯಾಗಿ ಮಾತನಾಡುವುದಕ್ಕೂ, ಬಹಿರಂಗವಾಗಿ ಬರೆಯುವುದಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ ಎಂಬುದನ್ನು ಅವರು ಸರಿಯಾಗಿ ಗುರುತಿಸುತ್ತಾರೆ. ಇದಕ್ಕೆ ಅವರು ಸೃಜನಶೀಲ ಲೇಖಕರೊಂದಿಗೆ ಇಟ್ಟುಕೊಳ್ಳುವ ಆತ್ಮೀಯತೆ ಕಾರಣವೆಂದು, ಇದರಿಂದ ಸೃಜನಶೀಲ ಲೇಖಕರೊಂದಿಗೆ ಅತ್ಯಂತ ಕಡಿಮೆ ವೈಯಕ್ತಿಕ ಸಂಬಂಧ ಇಟ್ಟುಕೊಳ್ಳುವ ಮಾದರಿಯನ್ನು ತಾನು ಮೆಚ್ಚುವುದಾಗಿ ಅವರು ಅಭಿಪ್ರಾಯಪಡುತ್ತಾರೆ. ನನ್ನಲ್ಲೂ ಆರಂಭದಲ್ಲಿ ಅನೇಕ ಅನುಮಾನ ಹುಟ್ಟಿಸಿದ್ದ ಈ ನಿಲುವು "ಹಾಡೆ ಹಾದಿಯ ತೋರಿತು" ಓದುತ್ತಾ ಹೋದಂತೆ. ಈ ನಿಲುವೇ ಹೆಚ್.ಎಸ್.ಆರ್. ಅವರ ಶಕ್ತಿ ಎನ್ನಿಸಿತು. ಏಕೆಂದರೆ ಇಂತಹ ನಿಲುವಿನಿಂದಲೇ ಹೆಚ್.ಎಸ್.ಆರ್. ಅವರಿಗೆ ವಸ್ತುವನ್ನು ಸಮಗ್ರವಾಗಿ ಗ್ರಹಿಸುವ ಮತ್ತು ಅದನ್ನು ಸಾಹಿತ್ಯಿಕ ಅರ್ಥದಲ್ಲೇ ವಿಶ್ಲೇಷಿಸುವ ಶಕ್ತಿ ಬಂದಿದೆ. ಇಂತಹ ಸಂಕೀರ್ಣ ತಿರುವುಗಳಲ್ಲೂ ಅವರ ನಂಬಿಕೆಗಳಿಗೆ, ನಿಲುವುಗಳಿಗೆ, ಸಾಹಿತ್ಯೇತರ ಕಾರಣಗಳಿಲ್ಲ. ಅವರ ನಂಬಿಕೆಯನ್ನು ನಾವು ಒಪ್ಪದೇ ಹೋದರೂ, ಅವರ ತೀರ್ಮಾನಗಳು ನಮಗೆ ಸಮ್ಮತವಾಗದಿದ್ದರೂ, ಹೆಚ್.ಎಸ್.ಆರ್. ಅವರ ಕಾಳಜಿ ಪ್ರಶ್ನಾತೀತವಾಗುವುದರಲ್ಲಿ ಇದರ ಪಾತ್ರ ಬಹಳ ಮುಖ್ಯವಾಗಿದೆ.

2

"ಹಾಡೆ ಹಾದಿಯ ತೋರಿತು", ನವೋದಯ ಸಾಹಿತ್ಯದ ಮೂವರು ಮುಖ್ಯ ಕವಿಗಳಾದ ಕುವೆಂಪು, ದ.ರಾ. ಬೇಂದ್ರೆ, ಪು.ತಿ.ನ. ಅವರ ಕವಿತೆಗಳ ತುಲನಾತ್ಮಕ ಅಧ್ಯಯನ. ಇಷ್ಟು ಮಾತ್ರ ಹೇಳಿದರೆ ಈ ಗ್ರಂಥದ ವಿಶಿಷ್ಟತೆ ಕುರಿತು ಹೇಳಿದಂತೆ ಆಗುವುದಿಲ್ಲ. ಇಂತಹ ತುಲನಾತ್ಮಕ ಚಿಂತನೆಗಳಿಗೆ ಬೇಕಾದ ಒಂದು ಭಿನ್ನ ರಂಗ ಸಜ್ಜಿಕೆಯನ್ನು ಹೆಚ್.ಎಸ್.ಆರ್. ನಿರ್ಮಿಸಿಕೊಳ್ಳುತ್ತಾರೆ. ನೇರವಾಗಿ ತುಲನೆಗೆ ಹೊರಡುವ ಬದಲು, ಕಾವ್ಯದಲ್ಲಿ ವಿಶಿಷ್ಟತೆ ಸಾಧ್ಯವಾಗಲು ಬೇಕಾದ ಕೆಲವು ಮುಖ್ಯ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾರೆ. ಇದನ್ನು ನವೋದಯ ಸಾಹಿತ್ಯದ ಪ್ರೇರಕ ಸಂಗತಿಗಳಿಗೂ, ನವೋದಯ ಸಾಹಿತ್ಯದ ಸಾಮಾನ್ಯ ಲಕ್ಷಣಗಳಿಗೂ ಜೋಡಿಸಿ ಕೊಳ್ಳುತ್ತಾರೆ. ಇದರಿಂದ ಹೆಚ್.ಎಸ್.ಆರ್. ಅವರ ಅಧ್ಯಯನದ ಸಮಗ್ರತೆ ಅರಿವಾಗುತ್ತದೆ. ಇದನ್ನು ದಾಟಿದ ಬಳಿಕವೇ ಈ ಮೂವರು ಕವಿಗಳ ವೈಯಕ್ತಿಕ ಹಿನ್ನೆಲೆಗಳು ಕಾವ್ಯಕ್ಕೆ ನೆರವಾದ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದು, ಕಾವ್ಯದ ಸಾಂಸ್ಕೃತಿಕ ವಿಶ್ಲೇಷಣೆಯೆಂದರೆ, ಸಾಹಿತ್ಯ ಶರೀರದ ವಿಶ್ಲೇಷಣೆ ಮಾತ್ರವಲ್ಲದೆ, ಜೀವನವೃತ್ತ ಮತ್ತು ಆತ್ಮಕಥನಗಳೆರಡರಲ್ಲೂ ಮುದ್ರಿತ ಸಾಲುಗಳ ನಡುವೆ ಓದುವ ಜವಾಬ್ದಾರಿ ಎಂಬ ನಂಬಿಕೆ ಅವರಿಗಿರುವುದರಿಂದಲೇ, ಇದು ವ್ಯಕ್ತಿಚಿತ್ರಗಳಾಗದೆ, ಅವರ ಬದುಕಿನ

ಕ್ರಮ, ಕವಿತೆಗೆ ನೀಡಿದ ಪ್ರೇರಣೆ ಕುರಿತಾದ ಸೂಕ್ಷ್ಮ ವಿಶ್ಲೇಷಣೆಯಾಗಿದೆ. ಇಷ್ಟು ಹೇಳಿದರೂ, ಹೆಚ್.ಎಸ್.ಆರ್. ಅವರ ಈ ಭಾಗದ ಚಿಂತನೆ ಪೂರ್ಣ ಸಮರ್ಪಕ ಎಂದು ಒಪ್ಪುವುದು ಕಷ್ಟ. ಜೀವನದ ಸಾಲುಗಳ ನಡುವಿನ ಓದಿಗಿಂತ ಕೆಲವು ನಂಬಿಕೆಗಳಿಗೇ ಸೀಮಿತಗೊಳಿಸಿದ ವಿಶ್ಲೇಷಣೆಯ ಪ್ರಯತ್ನದಂತೆ ಭಾಸವಾಗುತ್ತದೆ. ಇವನ್ನು ಕವಿ ಮತ್ತು ಕಾವ್ಯನಿರ್ಮಿತಿ ನಡುವಿನ ಸರಳ ಚಿಂತನೆಯಾಗಿಯೇ ಬೆಳೆಸಿದ್ದರೆ ಹೆಚ್.ಎಸ್.ಆರ್. ಅವರ ವಿಮರ್ಶಾತ್ಮಕ ನಂಬಿಕೆಗಳು ಸಾಕಾರಗೊಳ್ಳುತ್ತಿದ್ದವು. ಅವರ ಮುಂದಿನ ವಿಶ್ಲೇಷಣೆ ಕಾವ್ಯತತ್ವಗಳನ್ನು ಕುರಿತ ಮೂವರು ಕವಿಗಳ ನಂಬಿಕೆಗಳನ್ನು ತುಲನಾತ್ಮಕವಾಗಿ ನೋಡುವುದು, ಕವಿ ಅನುಭವವನ್ನು ಗ್ರಹಿಸುವ ವಿಧಾನ ಮತ್ತು ಅವನ ಮನೋಸ್ಥಿತಿ, ಶಬ್ದದ ಸ್ವರೂಪಗಳ ಕುರಿತು ಕವಿಯ ನಿಲುವುಗಳು. ಕಾವ್ಯ ಪ್ರಯೋಜನ ಕುರಿತಂತೆ ಅವರ ನಿಲುವುಗಳು ಇಲ್ಲಿನ ವಿಮರ್ಶಕ ಪರಿಕರಗಳು, ಮೇಲ್ನೋಟಕ್ಕೆ ಅನಗತ್ಯ ಎನ್ನಿಸುವ ಈ ಭಾಗ, ಪುಸ್ತಕದ ಅತ್ಯಂತ ನೀರಸ ಭಾಗ. ಈ ಭಾಗವನ್ನು ಕೈಬಿಟ್ಟದ್ದರೂ, ವಿಶ್ಲೇಷಣೆ ಹದ ತಪ್ಪುತ್ತಿರಲಿಲ್ಲ.

3

ಕಾವ್ಯವಸ್ತು ಮತ್ತು ನಿರ್ವಹಣೆ ಈ ಗ್ರಂಥದ ಮುಖ್ಯವಾದ ಚಿಂತನೆ. ಹೆಚ್.ಎಸ್.ಆರ್. ಅವರ ಭಿನ್ನತೆ ಮತ್ತು ಶಕ್ತಿ ಅರಿವಾಗುವುದು ಈ ಭಾಗದಲ್ಲೇ. ಉದಾಹರಣೆಗೆ ಪು.ತಿ.ನ. ಅವರ ಕವಿತೆಗಳ ಕುರಿತು ಮಾತನಾಡುತ್ತ "........ಪು.ತಿ.ನ. ಅವರ ಒಟ್ಟು ಕವನಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮನುಷ್ಯ ಸಂಬಂಧದ ವಿವರಗಳನ್ನು ಒಂದಲ್ಲ ಒಂದು ಬಗೆಯಲ್ಲಿ ಒಳಗೊಂಡಿರುವ ಕವಿತೆಗಳು ಸುಮಾರು ಅರವತ್ತು. ಇವರ ಕವಿತೆಗಳ ಶೇಕಡಾ ಇಪ್ಪತ್ತು ಭಾಗವೂ ಈ ಕ್ಷೇತ್ರಕ್ಕೆ ಮೀಸಲಾಗಿಲ್ಲ....". ಹೀಗೆ ಮುಂದುವರಿದು ವಯಸ್ಸಾದಂತೆ ಅವರ ಕವಿತೆಗಳಲ್ಲಿ ಪ್ರಕೃತಿ ಕವಿತೆಗಳ ಹೆಚ್ಚಳವನ್ನು ಗುರುತಿಸುತ್ತಾರೆ. ಅತ್ಯಂತ ತೀಕ್ಷ್ಣಗ್ರಹಿಕೆಯಿಂದ ಬಂದ ಈ ನಿಲುವು ಪುತಿನ ಅವರ ಕವಿತೆಗಳ ಕುರಿತ ಚರ್ಚೆಯನ್ನು ಹೊಸನೆಲೆಗೆ ಕೊಂಡೊಯ್ಯುತ್ತದೆ. ಹಾಗೇ ಕುವೆಂಪು ಅವರ ಕವಿತೆಗಳ ಕುರಿತು ಮಾತನಾಡುವಾಗ, ಕುವೆಂಪು ಅವರು ಸ್ವಾನುಭವ ಕೇಂದ್ರಿತವಲ್ಲದ ಒಂದೇ ಒಂದು ಪ್ರಣಯ ಕವಿತೆಯನ್ನೂ ಬರೆದಿಲ್ಲ ಎಂಬ ಸೂಕ್ಷ್ಮವನ್ನು ಗುರುತಿಸುತ್ತಾರೆ. ಸ್ವನಿರೂಪಣೆಗೆ ಕಾವ್ಯ, ಅನ್ಯ-ನಿರೂಪಣೆಗೆ ಕಥನ ಎಂಬ ಕಟ್ಟುಪಾಡು ಹಾಕಿಕೊಂಡಂತೆ ಅವರ ಕವಿತೆಗಳಿವೆ ಎಂಬುದು ಹೊಸಚಿಂತನೆ. ಬೇಂದ್ರೆಯವರನ್ನು ಪಿತೃಕಾವ್ಯ ಪರಂಪರೆಯ ವಕ್ತಾರರು ಎನ್ನುವವರೆಗೂ ನಮ್ಮಲ್ಲಿ ವಿಮರ್ಶೆಗಳು ಬಂದಿದ್ದರೂ, ಹೆಚ್.ಎಸ್.ಆರ್. ಅವರ ಕವಿತೆಗಳು ಹೆಣ್ಣಿನ ನೆಲೆಯಿಂದ ಬಂದಾಗಲೂ ಶರಣಾಗತಿ ಭಾವವನ್ನೇ ತೋರಿಸಿವೆ ಎಂಬ ಸೂಕ್ಷ್ಮವನ್ನು ಎತ್ತಿ ತೋರಿಸಿದ್ದಾರೆ. ಕಾಮವನ್ನು "ಗೆದ್ದು ಸೋಲುವ

ಮತ್ತು ಸೋತು ಗೆಲ್ಲುವ ಗೋವಳನ ಕೊಳಲ ಪ್ರಾಣವಿಹ ಕಾಮತಂತ್ರ" ಎಂದು ವಿವರಿಸುವಾಗ ಬೇಂದ್ರೆಯವರ ಸ್ತ್ರೀಸಂವೇದನೆಯ ನೆಲೆಗಳು ಕಾಮದ ಹಂತದಲ್ಲಿ ಎಷ್ಟರಮಟ್ಟಿಗೆ "ಸ್ತ್ರೀಪರ"ವಾದುದು ಎಂಬ ಅನುಮಾನ ವ್ಯಕ್ತಪಡಿಸುತ್ತಾರೆ. ಹೀಗೆ ಬೇಂದ್ರೆ ಹೆಣ್ಣನ್ನು ಕಾಮದ ಸಂಗಾತಿಯಾಗಿ, ಪ್ರೇಮದ ಗೆಳತಿಯಾಗಿ ಹಾಗೂ ವಾತ್ಸಲ್ಯದ ಮಾತೆಯಾಗಿ ಪರಿಭಾವಿಸುವಾಗ ನೋಡುವ ದೃಷ್ಟಿಕೋನಗಳಲ್ಲಿ ಖಚಿತ ವಾದ ವ್ಯತ್ಯಾಸಗಳಿವೆ. ಇವೆಲ್ಲದರ ಸಮಗ್ರತೆಯ ಸಂಯೋಜನೆ ಬೇಂದ್ರೆಯವರ ಕವಿತೆಯಲ್ಲಿ ಸಿಕ್ಕಲಾರದು ಎಂಬುದು ಮುಖ್ಯವಾಗಿ ಬೇಂದ್ರೆ ಭಕ್ತರೆಲ್ಲ ಪುನಃ ಚರ್ಚಿಸ ಬೇಕಾದ ಮುಖ್ಯಸಂಗತಿ. ಪ್ರಕೃತಿ, ಧರ್ಮ, ಸಂಬಂಧಗಳು ಹೀಗೆ ರೂಪಿಸಿ ಕೊಂಡಿರುವ ಮುಖ್ಯ ವಿಮರ್ಶೆಯ ಪರಿಕರಗಳ ನಡುವೆ ಸಿಕ್ಕುವ ಇಂತಹ ಕುತೂಹಲಕರ ಸಂಗತಿಗಳು ಸಮಗ್ರತೆಯ ನಡುವೆ ಸೂಕ್ಷ್ಮಚಿಂತನೆಗಳನ್ನು ಹೆಚ್.ಎಸ್.ಆರ್. ಎಷ್ಟು ಮುಖ್ಯವಾಗಿ ಕಾಪಾಡಿಕೊಂಡು ಬಂದಿದ್ದಾರೆ ಎಂಬುದನ್ನು ತೋರಿಸುತ್ತದೆ.

ಕವಿತೆಯ ವಿಶ್ಲೇಷಣೆ ಸಂದರ್ಭದಲ್ಲಿ ಪ್ರಕಾರ, ಶೈಲಿ, ಪರಿಕರ, ಛಂದಸ್ಸು-ಇಂತವುಗಳ ಚರ್ಚೆ ಎಂಬ ಪ್ರಶ್ನೆ ಇಲ್ಲಿಯೂ ಬರುತ್ತದೆ. ಕವಿತೆಗೆ ಇವು ಬೇಕೆನ್ನಲಿ ಬೇಡವೆನ್ನಲಿ ಪರಿಶೀಲನೆಗೆ ವಸ್ತುಗಳಾಗುತ್ತವೆ ಎಂಬ ನಿಲುವಿಗೆ ಹೆಚ್.ಎಸ್.ಆರ್. ಬರುತ್ತಾರೆ. ಇದರ ಚರ್ಚೆ ಸಾಧ್ಯವಾಗದೆ ಕಾವ್ಯದ ಸಮಗ್ರ ಶರೀರವನ್ನು ಪ್ರವೇಶಿಸಲಾಗುವುದಿಲ್ಲ ಎಂಬುದು ಅವರ ನಿಲುವು, ಇದನ್ನು ಅವಲಂಬಿಸಿಯೇ ಅವರ ಮುಂದಿನ ಚರ್ಚೆ ಬೆಳೆಯುತ್ತದೆ. ಸಾವನ್ನು ಮೂರು ಕವಿಗಳು ಬೇರೆ ಬೇರೆ ಪ್ರತಿಮೆಗಳನ್ನಾಗಿ ಹೇಗೆ ವಿಶ್ಲೇಷಿಸುತ್ತಾರೆ ಎಂಬುದು ಪುಸ್ತಕದ ಸೊಗಸಾದ ಭಾಗ ಗಳಲ್ಲಿ ಒಂದು. ಪು.ತಿ.ನ. ಅವರ ನಿಲುವು ಹಿಂದೂ ಧರ್ಮದ ಮೃತ್ಯು ಸಂಬಂಧೀ ನಿಲುವನ್ನು ಪೂರ್ಣವಾಗಿ ಒಪ್ಪಿ ರೂಪುಗೊಂಡಿದ್ದು, ಬೇಂದ್ರೆಯವರಿಗೂ ಮೃತ್ಯು ವನ್ನು ಕುರಿತ ಆಧ್ಯಾತ್ಮಿಕ ನಂಬಿಕೆಗಳಿದ್ದರೂ, ಅವರ ಪ್ರತಿಮಾ ನಿರ್ಮಾಣ ಸಾವಿನ ನೋವಿನ ಅನಿರೀಕ್ಷಿತತೆಯನ್ನು ವೈವಿಧ್ಯಮಯವಾಗಿ ಉಳಿಸಿವೆ. ಈ ಕವಿ ಸಾವಿಗೆ ಹೆದರುವವನೂ ಅಲ್ಲ, ನಿರ್ಲಿಪ್ತನೂ ಅಲ್ಲ. ಕುವೆಂಪು ಅವರು ಸಾವನ್ನು ಕುರಿತು ತಲೆಕೆಡಿಸಿಕೊಂಡವರೇ ಅಲ್ಲ. ಅವರ ಕವಿತೆಗಳಲ್ಲಿ ಸಾವಿನ ಬಗೆಗೆ ಬಂದರೂ, ಅದು ಕಥನದ ಒಂದು ಭಾಗವಾಗಿಯೇ ಬರುತ್ತದೆ. ಈ ಹೋಲಿಕೆಯೇ ಕವಿಗಳ ಚಿಂತನೆ ಯಲ್ಲಿನ ಪರಸ್ಪರ ವ್ಯತ್ಯಾಸವನ್ನು ಹೇಳುತ್ತದೆ.

ಕೊನೆಯ ಭಾಗ, ಮೂವರ ಕೆಲವು ಮುಖ್ಯ ಕವಿತೆಗಳ ವಿಶ್ಲೇಷಣೆಯನ್ನು ಒಳಗೊಂಡಿದೆ. ಕವಿತೆಯನ್ನೇ ಕುರಿತ ಕುವೆಂಪು ಅವರ 'ತಾವರೆಯ ತಾಯಿ', ಪು.ತಿ.ನ. ಅವರ 'ನನ್ನ ಹಾಡು' ಮತ್ತು ಬೇಂದ್ರೆಯವರ 'ಭಾವಗೀತ' ಇಲ್ಲಿ ತೌಲನಿಕವಾಗಿ ಅಧ್ಯಯನಗೊಂಡಿದೆ. ಎರಡನೆಯ ಭಾಗದಲ್ಲಿ ಪ್ರಕೃತಿ ಕುರಿತ ಈ ಮೂವರ 'ಬೆಳಗು', 'ನವೋದಯಂ', 'ದೇವರು ರುಜುಮಾಡಿದನು' ತೌಲನಿಕವಾಗಿ

ಚರ್ಚಿತವಾಗಿದೆ. ಮುಂದಿನ ಭಾಗಗಳಲ್ಲಿ ಮುಂದುವರೆಯುವ ಈ ಬಿಡಿ ಕವಿತೆಗಳ ವಿಶ್ಲೇಷಣೆ ಇಷ್ಟು ಆಕರ್ಷಕವಾಗಿಲ್ಲ. ಅದರಲ್ಲೂ 'ಕಲ್ಕಿ', 'ಕುರುಡು ಕಾಂಚಾಣ' ವನ್ನು ಇದಾದ 50 ವರ್ಷಗಳ ನಂತರ ಬಂದ 'ಹೆಸರೇ ಇಲ್ಲದವರು' ಕವಿತೆಯೊಂದಿಗೆ ಚರ್ಚಿಸುವ ಅಗತ್ಯವಿರಲಿಲ್ಲ. ಎಲ್ಲಾ ಮಾದರಿಯಲ್ಲೂ ತೌಲನಿಕ ವಿಮರ್ಶೆ ಆಗಲೇ ಬೇಕೆನ್ನುವುದು, ನಮ್ಮ ಪ್ರಾಚೀನ ಕಾವ್ಯಗಳ ಅಷ್ಟದಶ ವರ್ಣನೆಯಂತಹ ಒಣ ಪಾಂಡಿತ್ಯವಾಗುತ್ತದೆ.

ವಿಶ್ಲೇಷಣೆ ಗಾತ್ರಕ್ಕೆ ತೀರಾ ಕಿರಿದು ಎನಿಸುವ 'ಸಮಾರೋಪ', ಪರಿಶೀಲನೆಯ ಹಂತದಲ್ಲಿ ಮೂಡಿಬರುವ ತೀರ್ಮಾನಗಳು, ಅಧ್ಯಯನದ ವಿವಿಧ ಹಂತದಲ್ಲಿಯೇ ಸಮರ್ಥವಾಗಿ ಮಂಡಿತವಾಗಬೇಕೆಂಬ ಹೆಚ್.ಎಸ್.ಆರ್. ಅವರ ನಿಲುವಿಗೆ ಅನುಗುಣವಾಗಿದೆ. ಆದರೆ ಹೆಚ್.ಎಸ್.ಆರ್. ಪ್ರತಿಯೊಂದು ಧ್ವನಿಗೆ ಅದರದ್ದೇ ಆದ ಅನನ್ಯತೆ ಇದೆ ಎಂದು ಮಾತ್ರ ಹೇಳುತ್ತಾರೆಯೇ ಹೊರತು ತುಲನಾತ್ಮಕ ವಾಗಿಯಾದರೂ ಒಂದು ಖಚಿತ ತೀರ್ಮಾನಕ್ಕೆ ಬರುವುದಿಲ್ಲ. ತೀರ್ಮಾನ ಹೇಳ ಬಾರದೆನ್ನುವ ಹೆಚ್.ಎಸ್.ಆರ್. ಅವರ ಸೌಜನ್ಯವೇ ಇದಕ್ಕೆ ಕಾರಣವಿರಬಹುದು.

4

'ಹಾಡೆ ಹಾದಿಯ ತೋರಿತು'ವಿನಲ್ಲಿ ಬರುವ ಹೆಚ್.ಎಸ್.ಆರ್. ಅವರ ವಿಮರ್ಶೆಯ ವರ್ಗದ ಕುರಿತು ಕೆಲವು ಮುಖ್ಯ ಗ್ರಹಿಕೆಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

1) ಹೆಚ್.ಎಸ್.ಆರ್. ಅವರ ನಿಲುವು, ವಿಮರ್ಶೆ ಎಲ್ಲರಿಗೂ ಎನ್ನು ವಂತಹುದು. ಇದು ಕೆಲವರ ಬೌದ್ಧಿಕ ಕಸರತ್ತಾಗದೆ, ಚರ್ಚೆಗೆ ಎಲ್ಲರನ್ನೂ ಸೆಳೆಯು ಬೇಕು ಎನ್ನುವ ಮಾದರಿಯದು. ಹೀಗಾಗಿ ಇಲ್ಲಿ ವಿಸ್ತಾರ ಹೆಚ್ಚು. ಪುನರಾವರ್ತನೆ ಗಳು ಏನೂ ಅಪರೂಪವಲ್ಲ. ಆದರೆ ಎಲ್ಲಿಯೂ ಚಿಂತನೆಗಳು ಸರಳ ರೇಖಾತ್ಮಕ ವಾಗಿರುವುದಿಲ್ಲ.

2) ಹೆಚ್.ಎಸ್.ಆರ್. ಅವರ ವಿಮರ್ಶೆಯ ಸ್ವರೂಪ ದೊಡ್ಡದು. ಪ್ರತಿ ಪರಿಕರಕ್ಕೂ ಅವರು ಒದಗಿಸುವ ಸಾಮಗ್ರಿಗಳು ಅಪರಿಮಿತ. ಇದರಿಂದ ಹೆಚ್.ಎಸ್.ಆರ್. ಅವರ ನಿಲುವನ್ನು ಒಪ್ಪದಿದ್ದವರೂ, ಅವರ ನಿಲುವನ್ನು ಹಾರಿಕೆ ಯೆನ್ನಲಾಗುವುದಿಲ್ಲ. ವಸ್ತುವಿನ ಒಂದು ಮಗ್ಗುಲನ್ನು ಹೆಚ್.ಎಸ್.ಆರ್. ಎಂದಿಗೂ ತೋರಿಸುವುದಿಲ್ಲ.

3) ಹೆಚ್.ಎಸ್.ಆರ್. ಅವರ ನಿಲುವು ವ್ಯಕ್ತಿಪೂಜೆಯ ಅಪಾಯಕ್ಕೆ ಎಲ್ಲೂ ಸಿಕ್ಕುವುದಿಲ್ಲ. ಅವರ ನೋಟ ಎಂದಿಗೂ ಸಾಹಿತ್ಯೇತರ ವಿಷಯಗಳೊಂದಿಗೆ ಬೆರೆಯುವುದಿಲ್ಲ. ಸಾಹಿತ್ಯಿಕವಾಗಿ ತಾವು ಕಂಡದ್ದನ್ನು ಪ್ರಾಮಾಣಿಕವಾಗಿ ನಿರೂಪಿಸುವುದಕ್ಕಷ್ಟೇ ಅವರ ಒಲವು.

4) ಹೆಚ್.ಎಸ್.ಆರ್. ಅವರದು ಸೌಜನ್ಯದ ಮಾರ್ಗ. ವ್ಯಂಗ್ಯ, ಕಟಕಿಗಳು ಅವರ ಬರವಣಿಗೆಯಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಕಟು ವಿಮರ್ಶೆಯ ಸಂದರ್ಭಗಳು ಬಂದರೆ ಪರೋಕ್ಷವಾಗಿ ಸೂಚಿಸುವ ಸೌಜನ್ಯ ಅವರದು.

5) 'ಸಮಗ್ರ ಸಾಂಸ್ಕೃತಿಕ ವಿಮರ್ಶೆ' ಎಂದು ಅವರೇ ಹೇಳಿಕೊಂಡರೂ ಅವರದ್ದು ಪೂರ್ಣ ಸಾಹಿತ್ಯಿಕ ಮಾರ್ಗ, ಸಾಹಿತ್ಯ ಧ್ಯಾನಸ್ಥಿತಿಯಲ್ಲಿ ರಚಿತವಾಗುವುದು ಎಂಬ ಬಗೆಯದು. ಸಾಹಿತ್ಯದೊಂದಿಗಿನ ಇತರ ಶಾಸ್ತ್ರಗಳಿಗೆ ಇರುವ ಸಂಬಂಧವನ್ನು ಅವರು ಚರ್ಚೆಗೆ ಹೆಚ್ಚಾಗಿ ಎತ್ತಿಕೊಳ್ಳುವುದಿಲ್ಲ. ಸಮಾಜದ ಜತೆಗಿನ ಸಂಬಂಧವೂ ಅವರಿಗೆ ಮುಖ್ಯವಾಗುವುದಿಲ್ಲ. ಅದು ಸಾಹಿತ್ಯದ ವರ್ತುಲದಲ್ಲಿ ಹುಟ್ಟಿ, ಸಾಹಿತ್ಯದಿಂದ ಸಾಹಿತ್ಯಕ್ಕಾಗಿ, ಸಾಹಿತ್ಯವೇ ದಾರಿಯಾದ ಮಾರ್ಗ.

ಸಮಗ್ರವಾಗಿ 'ಮನುಷ್ಯ'ನನ್ನು ಅರ್ಥೈಸಿಕೊಳ್ಳುವ ಸವಾಲು ಸಾಹಿತ್ಯಕ್ಕೆ ಎಲ್ಲ ಕಾಲದಲ್ಲಿಯೂ ಇರುವಂಥದು, ಇರಬೇಕಾದ್ದು. ಆದುದರಿಂದಲೇ ಯಾವ ಕಾಲದ ಸಾಹಿತಿಯೇ ಆದರೂ ಈ ಹೊತ್ತಿಗೂ ಅವನು ಶ್ರೇಷ್ಠನೆನಿಸಿದಾಗ ಮಾತ್ರ ಅರ್ಥಪೂರ್ಣನಾಗುತ್ತಾನೆ. ಕೇವಲ ವರ್ತಮಾನಕ್ಕೆ ಒತ್ತುಕೊಟ್ಟು, ಭೂತಕಾಲವನ್ನು ಉಪೇಕ್ಷಿಸುವ ಅಥವಾ ಭವಿಷ್ಯದ ಕನಸುಗಾರಿಕೆಯಲ್ಲಿ ಮಾತ್ರ ವಿಹರಿಸುವಂತಾದರೆ ಆ ಸಾಹಿತ್ಯ ಶ್ರೇಷ್ಠವಾಗುವುದಿಲ್ಲ. ವರ್ತಮಾನ ಸಾಧ್ಯತೆಗಳಿಗೆಲ್ಲಾ ಅದು ನೀಡಬಹುದಾದ ಅನುಭವ ಸಮಸ್ಯೆಗಳಿಗೆಲ್ಲಾ ಮನಸ್ಸನ್ನು ಮುಕ್ತವಾಗಿ ತೆರೆಯುವುದರ ಜೊತೆಗೆ ಪರಂಪರೆಯಿಂದ ಪಡೆದದ್ದನ್ನು ಅರ್ಥಪೂರ್ಣವಾಗಿ ಇದರೊಂದಿಗೆ ಕರಗಿಸಿಕೊಳ್ಳುವ ಚೈತನ್ಯ ಸಂವೇದನಾಶೀಲನಾದ ವ್ಯಕ್ತಿಯ ಸಂದರ್ಭದಲ್ಲಿ ಪ್ರಕಟವಾದಾಗ ಅದು ಇಂದಿನ ಮತ್ತು ಮುಂದಿನ ಮನುಷ್ಯ ಸಮಸ್ತರಿಗೂ ಅರ್ಥಪೂರ್ಣವಾದ ರೀತಿಯಲ್ಲಿ ಫಲಿಸುತ್ತದೆ.

—ಜಿ. ಹೆಚ್. ನಾಯಕ್

ಡೊಂಬರ ಹುಡುಗಿ

○ ○

ಮರಾಠಿ ಮೂಲ : **ಕಿಶೋರ ಶಾಂತಾಬಾಯಿ ಕಾಳೆ**

ಕನ್ನಡಕ್ಕೆ : **ಚಂದ್ರಕಾಂತ ಪೋಕಳೆ**

ನನ್ನವ್ವ ಶಾಂತಾಬಾಯಿ ಕುಣಿಯುವ ಹೆಂಗಸು. ಆಕೆ ಕುಣಿತ ಬಿಟ್ಟಳು. ಆಕೆಯ ಕಾಲಿನ ಗೆಜ್ಜೆ ಹರಿದು ಬಿಡುಗಡೆ ಪಡೆದಳು. ನಾನು ಮಾತ್ರ ಹರಿದ ಗೆಜ್ಜೆಯಂತೆ ಈ ಕೊಲ್ಹಾಟಿ ಸಮಾಜದಲ್ಲಿ ಉಳಿದುಕೊಂಡೆ. ಜೀಜ ಆಶ್ರಯ ನೀಡಿದಳು. ಜೀಜಿಯ ನಿಜವಾದ ಹೆಸರು ತಾರಾಬಾಯಿ. ನಾವಷ್ಟೇ ಅಲ್ಲ, ಇಡೀ ಊರೇ ಆಕೆಯನ್ನು ಜೀಜಿ ಎಂದು ಕರೆಯುತ್ತಿತ್ತು.

ಜೀಜಿಯಿಂದಲೇ ಈ ಕಥೆ ಆರಂಭವಾಗುತ್ತದೆ. ಜೀಜಿ ಸಾಳಿ ಸಮಾಜದವಳು. ಜೀಜಿ, ಆಕೆಯ ಅವ್ವ ಲಕ್ಷ್ಮಿ ಹಾಗೂ ತಮ್ಮ ಗಂಗಾರಾಮ ಇವರೆಲ್ಲ ಸೊಲ್ಲಾಪುರದಲ್ಲಿರುತ್ತಿದ್ದರು. ಲಕ್ಷ್ಮಿ ಭೋಳೆ ಹೆಂಗಸು, ಆಕೆಯ ಗಂಡ ಮಾತ್ರ ಅರೆಹುಚ್ಚ. ಅತ್ತೆ, ನಾದಿನಿ ಸೇರಿ ಲಕ್ಷ್ಮಿಗೆ ಹೊಡೆದು ಬಡಿದು ಹೈರಾಣಗೊಳಿಸುತ್ತಿದ್ದರು. ಹಗಲೂ ರಾತ್ರಿ ದುಡಿಸಿಕೊಳ್ಳುತ್ತಿದ್ದರು.

ಅರೆ ಹುಚ್ಚನಾದ ಗಂಡ ಮಹಾದೇವನನ್ನು ಹೊಡೆಯುತ್ತಿದ್ದರು. ಒಂದು ದಿನ ಮಹಾದೇವ ಓಡಿಹೋದ. ವರ್ಷ ಕಳೆದರೂ ಮರಳಿ ಬರಲಿಲ್ಲ. ಹೀಗಾಗಿ ಲಕ್ಷ್ಮಿ ತನ್ನೆರಡು ಮಕ್ಕಳನ್ನು – ಗಂಗಾರಾಮ ಹಾಗೂ ತಾರಾಬಾಯಿ – ಕರೆದುಕೊಂಡು ಗಂಡನನ್ನು ಹುಡುಕುತ್ತ ಹೊರಟಳು. ಆಗ ಗಂಗಾರಾಮನಿಗೆ ಹನ್ನೆರಡು, ತಾರಾಳಿಗೆ ಹತ್ತು ವರ್ಷ, ಲಕ್ಷ್ಮಿ ಕರಮಾಳಾ ಎಂಬೂರಿಗೆ ಬಂದಳು. ಬಸ್‌ಸ್ಟಾಂಡಿನ ಮೂಲೆಯಲ್ಲಿ ಕೂತಳು. ಅಕ್ಕ - ಪಕ್ಕದಲ್ಲಿ ಎರಡು ಕೋಳಿ ಮರಿಗಳು ! ಹಸಿವೆಯಿಂದ ಕಂಗಾಲಾದ ಲಕ್ಷ್ಮಿ ಹಾಗೂ ಆಕೆಯ ಮಕ್ಕಳು ಸುತ್ತಲೂ ಮಿಕಿ ಮಿಕಿ ನೋಡುತ್ತಿದ್ದರು.

ಕೃಷ್ಣ ಕೋಲ್ಹಾಟಿ ಎಂಬ ತರುಣ ಅಲ್ಲೇ ಬಸ್‌ಸ್ಟಾಂಡಿನಲ್ಲಿ ಸುತ್ತಾಡುತ್ತಿದ್ದ. ಬಸ್‌ಸ್ಟಾಂಡಿನ ಪಕ್ಕದಲ್ಲೇ ಕೊಲ್ಹಾಟಿಗಳ ಡೊಂಬರಾಟ ನಡೆದಿತ್ತು. ಅವರ ವಸತಿಯೂ ಸ್ಟಾಂಡಿನ ಸನಿಹದಲ್ಲೇ ಇತ್ತು. ಕೃಷ್ಣನ ಕಣ್ಣಿಗೆ ಉದಾಸೀನಳಾಗಿ ಕೂತ ಲಕ್ಷ್ಮಿ ಕಾಣಿಸಿದಳು. ಅವನು ಆಕೆಗೆ ಪ್ರಶ್ನಿಸಿದ, "ಎಲ್ಲಿಗ ಹೊಂಟಿಯವ್ವಾ ?", ಭೋಳೆಯಾದ ಲಕ್ಷ್ಮಿ ಹಾಗೂ ಆಕೆಯ ಎರಡೂ ಮಕ್ಕಳನ್ನು ಕೃಷ್ಣ ಹೋಟೆಲಿಗೆ ಕರೆದೊಯ್ದು, ಹೊಟ್ಟೆ ತುಂಬ ತಿನ್ನಿಸಿದ. ಲಕ್ಷ್ಮಿ ಕೃಷ್ಣನ ಸವಿಯಾದ ಮಾತಿಗೆ ಮರುಳಾಗಿ ಅವನ ವಶವಾದಳು.

ಕೃಷ್ಣನಿಗೆ ಹೆಂಡತಿ, ಮಗ (ಅವನ ಹೆಸರು ಕೊಂಡಿಬಾ) ಇದ್ದರೂ, ಲಕ್ಷ್ಮಿ ಕೃಷ್ಣನ ಹೆಂಡತಿಯಾಗಿ ಆತನೊಂದಿಗೆ ಇರಲಾರಂಭಿಸಿದಳು. ಅನಂತರ ಅವಳು ಸೊಲ್ಲಾಪುರಕ್ಕೆ ಹೋಗಲೇ ಇಲ್ಲ. ಗಂಡ ಮಹಾದೇವನೂ ಭೇಟಿಯಾಗಲಿಲ್ಲ.

ಡೊಂಬರ ಜೊತೆಸೇರಿ ಗಂಗಾರಾಮ ಡೋಲು ಬಾರಿಸಲು ಕಲಿತ, ಜೀಜಿ ಕುಣಿತ, ದೊಂಬರಾಟ ಹಾಗೂ ಉಳಿದ ಕಲೆ ಕಲಿತಳು. ಕೋಂಡಿಬಾ ಕೂತು ತಿನ್ನುತ್ತಿದ್ದ. ಅವನು ಮೊದಲ ಹೆಂಡತಿ ಮಗನಲ್ಲವೇ! ಜೀಜಿಯ ಮದುವೆ ಮಾಡಿಸ ಬೇಕೆಂಬ ಇಚ್ಛೆ ಲಕ್ಷ್ಮಿಯದು. ಆದರೆ ಕೃಷ್ಣನಿಗೆ ಚಿನ್ನದ ತತ್ತಿ ಕೊಡುವ ಕೋಳಿ ಸಿಕ್ಕಿತ್ತು. ಅವನು ಜೀಜಿಯ ಮದುವೆಗೆ ಒಪ್ಪಲಿಲ್ಲ. ಸಾಳಿ ಸಮಾಜದ ಜೀಜಿ ಕೊಲ್ಹಾಡಿ ಸಮಾಜಕ್ಕೆ ಸೇರಿದಳು. ಊರೂರು ತಿರುಗಾಡುತ್ತಾ ದೊಂಬರಾಟ ಮಾಡುತ್ತ, ಕೊಲ್ಹಾಡಿ ಜನ ಅಲೆದಾಡುತ್ತಿದ್ದರು. ಅವರೊಂದಿಗೆ ಜೀಜಿಯೂ ತಿರುಗಾಡಬೇಕಾಯಿತು. ಜೀಜಿಯ ಮೂಗು, ಮುಖ ಆಕರ್ಷಕವಾಗಿತ್ತು. ರೂಪ ಮೋಹಕವಾಗಿತ್ತು, ಆಕೆ ಡೊಂಬರಾಟದಲ್ಲಿ, ತಂತಿ ಕಸರತ್ತಿನಲ್ಲಿ ನಿಪುಣೆಯಾಗಿದ್ದಳು. ಜೀಜಿಯ ಆಟ ಕುಣಿತ ನೋಡಲು ಅಸಂಖ್ಯ ಜನ ಸೇರುತ್ತಿದ್ದರು.

ಕರಮಾಳಾ ತಾಲ್ಲೂಕಿನ ನೇರಲೆ ಎಂಬೂರಿನಲ್ಲಿ ಇವರ ಡೊಂಬರಾಟ ನಡೆದಿತ್ತು. ನೇರಲೆಯ ಮಾಧವರಾವ ಪಾಟೀಲ ಡೊಂಬರಾಟ ನೋಡಲು ಬಂದರು, ಗಂಗಾರಾಮ ಡೋಲು ಬಾರಿಸುತ್ತಿದ್ದ. ಜೊತೆಗೆ ಇಬ್ಬರು ಸಾಥಿದಾರರಿದ್ದರು. ಜೀಜಿ ಕೈಯಲ್ಲಿ ಕರವಸ್ತ್ರ ಹಿಡಿದು ಡೋಲಿನ ತಾಳಕ್ಕೆ ಅನುಗುಣವಾಗಿ ಕುಣಿಯುತ್ತಿದ್ದಳು. ನೂರಾರು ಜನ ಆಟ ನೋಡಲು ಬಂದಿದ್ದರು. ಕೆಲವರು ಸೀಟಿ ಹೊಡೆಯುತ್ತಿದ್ದರು. ಕೆಲವರು ರೂಪಾಯಿ, ಎರಡು ರೂಪಾಯಿ ನೋಟು ಜೀಜಿ ಮೇಲೆ ಎಸೆಯುತ್ತಿದ್ದರು. ಮಾಧವರಾವ ಪಾಟೀಲ ಜೀಜಿಯ ಮೋಹಕ ರೂಪಕ್ಕೆ ಮರುಳಾದ. ಆಟ ಮುಗಿದ ನಂತರ ಕೃಷ್ಣನನ್ನು ತಮ್ಮ ವಾಡೇಗೆ ಕರೆಸಿಕೊಂಡ. ತಾರಾಬಾಯಿ ಊರೂರು ಅಲೆದಾಡುವುದನ್ನು ನಿಲ್ಲಿಸಬೇಕೆಂದ. ಊರೂರು ಅಲೆದಾಡಿ ಗಳಿಸುವದಕ್ಕಿಂತ ಇಲ್ಲೆ ಹೊಟ್ಟೆ ತುಂಬಾ ತಿನ್ನಲು ಸಿಕ್ಕರೆ ಯಾಕೆ ಒಪ್ಪಿಕೊಳ್ಳಬಾರದೆಂದೆನಿಸಿತು ಕೃಷ್ಣನಿಗೆ ಅವನು ಜೀಜಿಯನ್ನು ಪಾಟೀಲನ ವಾಡೇಗೆ ಕಳಿಸಲು ಒಪ್ಪಿದ.

ಮಾಧವರಾವ್ ಪಾಟೀಲ ಜೀಜಿಯನ್ನು ತನ್ನ ವಾಡೇದಲ್ಲಿ ತಂದಿಟ್ಟುಕೊಂಡ. ಜೀಜಿ ಪಾಟೀಲನ ಹೆಂಡತಿಯಾಗಿ ಬದುಕಲಾರಂಭಿಸಿದಳು. ಊರಿನ ಜನರೂ ಸಹ ಆಕೆಯನ್ನು ಪಾಟೀಲನ ಪ್ರಿಯ ಹೆಂಡತಿಯೆಂಬ ಗೌರವ ಕೊಡುತ್ತಿದ್ದರು. ಪಾಟೀಲನಿಗೆ ಈ ಮೊದಲಿನ ಇಬ್ಬರು ಹೆಂಡಂದಿರಿದ್ದರೂ ಮಕ್ಕಳಿರಲಿಲ್ಲ. ಜೀಜಿಗೆ 25 ಎಕರೆ ಹೊಲ ಕೊಟ್ಟ. ಕೃಷ್ಣಾ ಕೊಲ್ಹಾಟಿಗೆ ವಾಸಿಸಲು ಅಂಕಣದ ಮನೆ ಕಟ್ಟಿಸಿಕೊಟ್ಟ. ಗಂಗಾರಾಮನಿಗೆ ಡೋಲು ಬಾರಿಸುವುದು ತಪ್ಪಿದರೂ ಹೊಲದಲ್ಲಿ ಮೈಮುರಿದು ದುಡಿಯಬೇಕಾಯಿತು. ಅವನು ದನ ಕಾಯುತ್ತಿದ್ದ. ಗಂಗಾರಾಮನಿಗೆ ಮಾಲರೋಗ ಬಂದಿತ್ತು. ಕೋಂಡಿಬಾ ಮೊದಲಿನಂತೆ ಕೂತು ತಿನ್ನುತ್ತಿದ್ದ.

ಒಮ್ಮೆ ಗಂಗಾರಾಮ ದನಗಳಿಗೆ ನೀರು ಕುಡಿಸಲು ಹಳ್ಳಕ್ಕೆ ಹೋದಾಗ, ಹಳ್ಳದ ದಂಡೆಯ ಮೇಲೆಯೇ ಅವನಿಗೆ ಮಲರೋಗದ 'ಜಟಕೆ' ಬಂದು, ಅವನು ನೀರಿನಲ್ಲಿ ಮುಳುಗಿ ಸತ್ತ.

ದೊಂಬರಾಟ ಮಾಡುವ ಕೊಲ್ಹಾಟಿ ಕುಟುಂಬದವರು ಜೀಜಿಯ ಆಧಾರ ದಿಂದ ನೇರ್ಲೆಗೆ ಬಂದು ನೆಲೆಸಲಾರಂಬಿಸಿದವು. ಹೀಗೆ ಕೊಲ್ಹಾಟಿಯ ಹಲವಾರು ಕುಟುಂಬಗಳಾದುವು. ಪಾಟೀಲರಿಂದ ಜೀಜಗೊಂದು ಹೆಣ್ಣುಮಗು ಹುಟ್ಟಿತು. ಆದರೆ ಬಾಲ್ಯದಲ್ಲೇ ಅದು ಸತ್ತುಹೋಯಿತು. ಕೋಂಡಿಬಾ ಬಾರಾಮತಿಯ ಹೆಣ್ಣನೊಂದಿಗೆ ಮದುವೆ ಮಾಡಿಕೊಂಡ. ಆಕೆಯ ಹೆಸರು ಬಾರಾವತಿ, ಕೋಂಡಿಬಾನಿಗೆ ಮುಂದೆ ಐದು ಹೆಣ್ಣು, ಮೂರು ಗಂಡು ಹುಟ್ಟಿದವು. ಮೊದಲನೆ ಯವಳೇ ಶಾಂತಾ, ಈಕೆಯೇ ನನ್ನವ್ವ. ಅನಂತರದವರು ಶಾಲನ, ಸುಶೀಲಾ, ರಂಭಾ, ಪೋಪಟ, ರಾಜು, ಅಂಕುಶ, ಕೆಲಕಾಲದ ನಂತರ ಕೃಷ್ಣ ಕೋಲ್ಹಾಟಿ, ಲಕ್ಷ್ಮಿ ಮತ್ತು ಮೊದಲ ಹೆಂಡತಿ ರಮಾರವರು.

ಈ ಮನೆಯಲ್ಲಿ ಮಾಧವರಾವ್ ಪಾಟೀಲನ ದರ್ಬಾರು. ಅವರ ಆಸರೆ ಯಿಂದಲೇ ಕೃಷ್ಣಾಕೋಲ್ಹಾಟಿಯ ಸಂಸಾರ ನಡೆಯುತ್ತಿತ್ತು. ಈ ಕೊನೆಯ ಒಂದೂ ಹೆಣ್ಣು ದೊಂಬರಾಟ, ಕುಣಿತ ಮಾಡಬಾರದೆಂಬ ವಿಚಾರ ಪಾಟೀಲರದ್ದು. ಹೀಗಾಗಿ ಕೋಂಡಿಬಾ ತನ್ನ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸಿದ. ನನ್ನವ್ವ ಶಾಂತಾ 6ನೇ ಕ್ಲಾಸಿನವರೆಗೆ ಕಲಿತಳು. ಬೀರಗಾಂವ್ ಜಿಲ್ಹಿಂಗ್ ಖಾತೆಯವನೊಂದಿಗೆ ಆಕೆಯ ಮದುವೆಯನ್ನು ನಿಶ್ಚಯಿಸಿದ. ಅವರ ಹೆಸರು ಅಂಬಾದಾಸರಾವ್ ವಾಘಮೋರೆ. ಮಾಧವರಾವ್ ಕೋಂಡಿಬಾನನ್ನು ಹೊಲಕ್ಕೆ ಕಳಿಸಲಾರಂಭಿಸಿದ. ಕೋರ್ಟು-ಕಚೇರಿಯ ವ್ಯವಹಾರವನ್ನು ಅವನಿಂದಲೇ ಮಾಡಿಸುತ್ತಿದ್ದರು. ಮಾಧವ್‌ರಾವ್ ಊರಿನ ಪಾಟೀಲರಾಗಿದ್ದರಿಂದ ಇಡೀ ಊರೇ ಅವರಿಗೆ ಅಂಜುತ್ತಿತ್ತು. ಮಾಧವರಾವ್ ಹಾಗೂ ಜೀಜಿ ಅರಂಕಣದ ವಾಡೇ ಪ್ರವೇಶಿಸಿದರೆ ಸಾಕು, ಉಳಿದವ ರ್‍ಯಾರೂ ಹೊರಗೆ ಕಾಣುತ್ತಿರಲಿಲ್ಲ. ಶಾಂತಾಳನ್ನು ತಮ್ಮ ಮಗಳೆಂಬಂತೆ ಬಹಳ ಪ್ರೀತಿಸುತ್ತಿದ್ದರು.

ಆದರೆ ಒಂದು ದಿನ ದುರ್ಘಟನೆ ನಡೆಯಿತು. ಮಾಧವರಾವ್ ಆಕಸ್ಮಿಕವಾಗಿ ಸತ್ತರು. ಯಾರೋ ಅವರಿಗೆ ವಿಷ ಹಾಕಿದರೆಂದು ಹೇಳುತ್ತಾರೆ. ಜೀಜಿ ವಿಧವೆ ಯಾದಳು. ಅವಳ ಹಣೆಯ ಕುಂಕುಮ ಅಳಿಸಿಹೋಯಿತು. ಕೊರಳ ಮಂಗಳ ಸೂತ್ರ ಹರಿಯಿತು. ನಂತರ ಜೀಜಿ ಯಾರೊಂದಿಗೂ ಸಂಬಂಧ ಬೆಳೆಸಲಿಲ್ಲ. ಮಾಧವರಾವ್ ಅವಳಿಗೆ ಯಾವುದಕ್ಕೂ ಕೊರತೆ ಬೀಳದಂತೆ ನೋಡಿಕೊಂಡಿದ್ದ. ಬೇರೆ ಯಾವುದೇ ಹೆಂಗಸಾಗಿದ್ದಿದ್ದರೆ ತನ್ನ ಮಗುವಿಗಾಗಿ ಎರಡನೇ ಮದುವೆ ಮಾಡಿ ಕೊಳ್ಳುತ್ತಿದ್ದಳು. ಅಥವಾ ಬೇರೆಯವರೊಂದಿಗೆ ಕೂಡಿ ಬಾಳಬಹುದಾಗಿತ್ತು.

ಆದರೆ ಜೀಜ ಕುಣಿವ ಡೊಂಬರ ಹೆಂಗಸಾಗಿಯೂ ಓರ್ವ ವಿಧವೆಯಂತೆ ಬದುಕು ಸವೆಸಿದಳು.

* * *

ಮಾಧವರಾವ್ ಸತ್ತ ನಂತರ ಮನೆಯಲ್ಲಿ ಹಣದ ಕೊರತೆ ಆರಂಭವಾಯಿತು. ಈಗ ಕೋಂಡಿಬಾನದೇ ದರ್ಬಾರು. ಈ ಮೊದಲು ಜೀಜ ಹೇಳಿದಂತೆ ಮನೆ ನಡೆಯುತ್ತಿತ್ತು. ಈಗ ಕೋಂಡಿಬಾನದೇ ಅಧಿಕಾರ. ಅಲ್ಲದೇ ಜೀಜಗೆ ಮಕ್ಕಳೂ ಇರಲಿಲ್ಲ. ಕೋಂಡಿಬಾ ಹೇಳಿದಂತೆ ಆಕೆ ಕೇಳಬೇಕಾಯಿತು. ಪಾಟೀಲನ ಮನೆಯಲ್ಲಿರಬೇಕಾದರೆ ಪಾಟೀಲನ ಬಂಧುಗಳು ವಿಷಹಾಕಿ ಕೊಂದಾರೆಂಬ ಭಯ. ತಮ್ಮನ ಹಾಗೂ ಅವನ ಮಕ್ಕಳ ಆಧಾರ ಸಿಗಬಹುದೆಂಬ ಆಸೆಯಿಂದ ಜೀಜಿ ಕೋಂಡಿಬಾ ಹೇಳದಂತೆ ಕೇಳಲಾರಂಭಿಸಿದಳು. ಪಾಟೀಲ ಇದ್ದಾಗ ಜೀಜಿ ಮನೆಯಿಂದ ಹೊರಬೀಳುತ್ತಿರಲಿಲ್ಲ. ಪರದೆಯೊಳಗೇ ವಾಸಿಸುತ್ತಿದ್ದಳು. ಈಗ ಹೊಲ ಕಾಯಲು ಹೋಗಲಾರಂಭಿಸಿದಳು.

ಪಾಟೀಲನ ಸಾವಿನ ನಂತರ ಕೋಂಡಿಬಾನಿಗೆ ಮಜಾ ಮಾಡಲು ಹಣ ಸಿಗುತ್ತಿರಲಿಲ್ಲ. ಮನೆಯಲ್ಲಿ ಹಣದ ಕೊರತೆ. ಶಾಂತಾಳ ಮದುವೆ ನಿಶ್ಚಯಿಸಿತ್ತಷ್ಟೇ. ಮದುವೆ ಮಂಟಪದಲ್ಲಿ ಶಾಂತಾಳ ಬದಲು ಶಾಲನಳನ್ನು ಕೂಡ್ರಿಸಿದ. ಅಂಬಾದಾಸರಿಗೆ ಈ ವಿಷಯ ಗೊತ್ತಿರಲಿಲ್ಲ. ಕೊಲ್ಹಾಟಿ ಸಮಾಜದಲ್ಲಿ ಹೆಣ್ಣು ಕಪ್ಪಾಗಿದ್ದರೆ, ವಿರೂಪವಾಗಿದ್ದರೆ, ಅವಳ ಮದುವೆ ಮಾಡುತ್ತಾರೆ. ಸುಂದರವಾಗಿದ್ದರೆ ಕುಣಿಯಲು ಹಚ್ಚುತ್ತಾರೆ. ಶಾಲನ ಕಪ್ಪಾಗಿದ್ದಳು. ಶಾಂತಾ ಸುಂದರವಾಗಿದ್ದಳು. ಹೀಗಾಗಿ ಕೋಂಡಿಬಾ ಮಾಡಿದ ಹುನ್ನಾರವಿದು.

ಮದುವೆಯಾದ ನಂತರ ಈ ಮೋಸ ಅಂಬಾದಾಸರಿಗೆ ಗೊತ್ತಾಯಿತು. ಆದರೂ ಆ ಸಭ್ಯಗೃಹಸ್ಥ ಶಾಲನಳ ಕೈಬಿಡಲಿಲ್ಲ. ಶಾಂತಾಳ ಬದುಕು ಏಕೆ ಹಾಳು ಮಾಡಿದೆ ? ಎಂದು ಕೋಂಡಿಬಾನೊಂದಿಗೆ ಆಗಾಗ ಜಗಳವಾಡಲಾರಂಭಿಸಿದ. 'ನೀನೇ ನನ್ನ ಹೆಂಡತಿಯಾಗಿದ್ದಿದ್ದರೆ ನಾನೆಷ್ಟೋ ಹಾಯಾಗಿರುತ್ತಿದ್ದೆ' ಎಂದು ಅಂಬಾದಾಸ ನನ್ನವ್ವನಿಗೆ ಹೇಳುತ್ತಿದ್ದ. ಅವ್ವ ಅವನೆದುರಿಗೆ ಹೋಗಲು ಹೆದರುತ್ತಿದ್ದಳು. ಅಂಬಾದಾಸ ಬರಬರುತ್ತ ಸೆರೆ ಕುಡಿಯಲಾರಂಭಿಸಿದ. ತನ್ನ ಇಡೀ ಬದುಕನ್ನೇ ಹೆಂಡದಲ್ಲಿ ಕಳೆದ. ಕೊನೆಗೆ ಹೆಂಡದಲ್ಲೇ ಸತ್ತ. ಶಾಲನ ವಿಧವೆಯಾದಳು. ಆಕೆಯ ಮಕ್ಕಳು ಬೇವಾರ್ಸಿಗಳಾದರು. ಗಂಡನ ಪೆನ್ಷನ್ ಮೇಲೆ ತನ್ನ ಜೀವನ ಸಾಗಿಸಲಾರಂಭಿಸಿದಳು.

ಕೋಂಡಿಬಾ, ನನ್ನವ್ವನ ಅಪ್ಪ, ಅಂದರೆ ನನ್ನಜ್ಜ. ಕುಣಿಯುವಂತೆ ನನ್ನ ಅವ್ವನನ್ನು ಒತ್ತಾಯಿಸುತ್ತಿದ್ದ. ಕೆಲವೊಮ್ಮೆ ಹೊಡೆಯುತ್ತಲೂ ಇದ್ದ. 7ನೇ ಕ್ಲಾಸಿನಲ್ಲಿ ಕಲಿಯುತ್ತಿದ್ದ ನನ್ನ ಅವ್ವನನ್ನು ಶಾಲೆ ಬಿಡಿಸಿದ. ನಂತರ ಅವ್ವನ ವಿಚಿತ್ರ

ಹಾಗೂ ಹೊಸ ಜೀವನ ಆರಂಭವಾಯಿತು. ಅಜ್ಜ ಆಕೆಯನ್ನು ಕುಣಿತ ಕಲಿಯಲು ಚಂದ್ರಕಲಾಬಾಯಿಯ ಜಲಸಾ ಪಾರ್ಟಿಗೆ ಸೇರಿಸಿದ. ಆ ಕಾಲಕ್ಕೆ ಚಂದ್ರಕಲಾ ಬಾಯಿಯ ಪಾರ್ಟಿ ತುಂಬಾ ಪ್ರಸಿದ್ಧವಾಗಿತ್ತು. ಕೊಲ್ಹಾಟಿಯ ಪಾರ್ಟಿ ಎಂದರೆ ಐದಾರು ಜನ ಕುಣಿಯುವ ಹೆಂಗಸರಿರುತ್ತಾರೆ. ಅವರಲ್ಲೊಬ್ಬಾಕೆ ಮುಖ್ಯಸ್ಥೆ. ಒಬ್ಬಾತ ಡೋಲಕಿಯವನು, ಇನ್ನೊಬ್ಬ ತಬಲಾವಾದಕ, ಹಾರ್ಮೋನಿಯಂವಾಲ, ಸಲಾಕೆ ಬಾರಿಸುವವ ಹಾಗೂ ಅಡಿಗೆ ಹೆಂಗಸು, ಇದರ ಜೊತೆಗೆ ಕುಣಿಯುವ ಹೆಂಗಸರ ಮಕ್ಕಳನ್ನು ನೋಡಿಕೊಳ್ಳಲು ಕೆಲವು ಜನ, ಸ್ವಂತ ಮಕ್ಕಳನ್ನು ನೋಡಿ ಕೊಳ್ಳಲು ಅವರಿಗೆ ಪುರುಸೊತ್ತು ಇರುವದಿಲ್ಲವಲ್ಲ! ಚಂದ್ರಕಲಾಬಾಯಿ ಪಾರ್ಟಿ ಜನ ಊರೂರಿನ ಜಾತ್ರೆಗೆ ಹೋಗಿ ಕುಣಿಯುತ್ತಿದ್ದರು. ಜಾತ್ರೆಯ ದಿನ ಒಂದು ಟೆಂಟ್ ಕಟ್ಟುತ್ತಿದ್ದರು. ಆ 'ತಂಬು'ವಿನಲ್ಲಿ ಅವರ ಕುಣಿತ ನಡೆಯುತ್ತಿತ್ತು. ಕುಣಿತ ನೋಡಲು ಟಿಕೆಟ್ ಮಾರಾಟದ ವ್ಯವಸ್ಥೆಯೂ ಇರುತ್ತಿತ್ತು. ಕಂಧಾರ, ಪರಭಣಿ, ಸಾಂಗಲಿ, ಕೊಲ್ಲಾಪುರ, ಸತಾರಾ ಮುಂತಾದ ಸ್ಥಳಗಳಿಗೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಮೊದಲಿನಂತೆ ಕೋಲ್ಹಾಟಿ ಜನರ ಡೊಂಬರಾಟ ಈಗಿಲ್ಲ. ಈಗ ಬರೇ ಕುಣಿತವಷ್ಟೇ ಈ ಪಾರ್ಟಿಯ ಉದ್ಯೋಗ.

ಕುಣಿತ ಆರಂಭವಾದ ಕೂಡಲೇ ಈ ಹೆಂಗಸರ ಮೈಮೇಲೆ ಕೆಲವು ಜನ ಹರಳಿನಂತಹ ಕಲ್ಲು ಒಗೆಯುತ್ತಿದ್ದರು. ಕೆಲವರು ಕಣ್ಣು ಹೊಡೆಯುತ್ತಿದ್ದರು, ಕುಣಿತ ಸರಿಯಾಗಿರದಿದ್ದರೆ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದರು. ಸಲಾಕೆ ಬಾರಿಸುವವ ಹಣ ಸಂಗ್ರಹಿಸುತ್ತಿದ್ದ. ಅವ್ವನಿಗೆ ಸರಿಯಾಗಿ ಕುಣಿಯಲು ಬರುತ್ತಿರ ಲಿಲ್ಲ. ಯಾಕೆಂದರೆ ದೊಡ್ಡವಳಾದ ಬಳಿಕ, ಆಕೆ ಈ ಪಾರ್ಟಿ ಸೇರಿದ್ದಳು. ಹೀಗಾಗಿ ಅವಳ ದೇಹ ಮಣಿಯುತ್ತಿರಲಿಲ್ಲ. ಆದರಾಕೆ ನೋಡಲು ಸುಂದರವಾಗಿದ್ದಳು. ಒಮ್ಮೊಮ್ಮೆ ಪಾರ್ಟಿಯಲ್ಲಿ ಕುಣಿಯುವವರು ಯಾರಾದರೂ ಗೈರು ಹಾಜರಿದ್ದರೆ ಆಕೆ ಕುಣಿಯಬೇಕಾಗುತ್ತಿತ್ತು. ಸರಿಯಾಗಿ ಕುಣಿಯದಿದ್ದರೆ "ಕುಣಿಯಾಕೆ ಬರದಿದ್ದರೆ ಯಾಕ ಬಂದಿ ?" ಎಂದು ಪ್ರೇಕ್ಷಕರು ಬೊಬ್ಬೆ ಹಾಕುತ್ತಿದ್ದರು. ಅವ್ವನಿಗಂತೂ ಈ ಜೀವನ ಹಿಡಿಸಿರಲಿಲ್ಲ. ಕೋಲ್ಹಾಟಿ ಸಮಾಜದಲ್ಲಿ ಕುಣಿಯಲು ಹೆಣ್ಣುಮಕ್ಕಳನ್ನು ಕಳಿಸುವದಿದ್ದರೆ ಎರಡನೇ - ಮೂರನೇ ಕ್ಲಾಸು ಮುಗಿಸಿದ ಕೂಡಲೇ ರವಾನಿಸು ತ್ತಿದ್ದರು ಮನೆಯಲ್ಲೇ ಪಾಟಿಯಿದ್ದರೆ ಅಲ್ಲೇ ಸೇರುವುದು. ತಬಲಾವಾದಕ ವಸ್ತಾದ (ಗುರು) ಕುಣಿತ ಕಲಿಸುತ್ತಾನೆ. ಪಿಯಾನೋವಾದಕ ಮಾಸ್ತರ್ ಹಾಡು ಕಲಿಸುತ್ತಾನೆ. ಸಿನೆಮಾ ಹಾಡು ಸ್ಟೇಜಿನ ಮೇಲೆ ಹಾಡುವುದಿದ್ದರೆ ಎಲ್ಲರೂ ಒಂದೆಡೆ ಕೂತು ಪ್ರಾಕ್ಟೀಸ್ ಮಾಡುತ್ತಿದ್ದರು. ಚೆನ್ನಾಗಿ ಹಾಡಲು, ಕುಣಿಯಲು ಬಂದಾಗಲೇ ಅದರ ಪ್ರಯೋಗ.

ಊರಲ್ಲಿ ಕುಣಿವ ಪಾರ್ಟಿ ಬಂದರೆ ಸಾಕು, ಅಬಾಲವೃದ್ಧರಾದಿಯಾಗಿ ಎಲ್ಲರೂ ನೋಡುತ್ತಿದ್ದರು. ಕುಣಿಯುವ ಹೆಂಗಸರು ಸೀರೆಯ ಅಥವಾ ತಗಡಿನ ಮರೆಯಲ್ಲಿ

ಸ್ನಾನ ಮಾಡುತ್ತಿದ್ದುದು. ತರುಣರು ದೂರದಿಂದಲೇ ನೋಡುತ್ತ "ಅವನವ್ವನ, ಈಕಿ ಮೈಯೇನ ಛಂದ ಐತೋ. ಎಷ್ಟು ರೊಕ್ಕ ತಗೋಬೌದು !" ಎಂದು ಜೋರಾಗಿ ನಗುತ್ತಿದ್ದರು. ಇದು ಎಲ್ಲರಿಗೂ ಕೇಳಿಸುತ್ತಿತ್ತು. ಆಗ ಅರ್ಧ-ಮರ್ಧ ಸ್ನಾನ ಮಾಡಿದ ಹೆಂಗಸರು ನಾಚಿ ತಂಬೂವಿನೊಳಗೆ ಓಡಿ ಹೋಗುತ್ತಿದ್ದರು. ಸಂಜೆ ಐದಕ್ಕೆ ಅವರಿಗೆ ಬೆಳಕು ಹರಿಯುತ್ತಿತ್ತು. ಹೆಂಗಸರು ಎದ್ದು ಕೈಕಾಲು ತೊಳೆದು ಮೇಕಪ್‌ಗೆ ಕೂಡುತ್ತಿದ್ದರು. ಪೌಡರ್, ಕಾಡಿಗೆ, ಲಿಪ್‌ಸ್ಟಿಕ್, ಸ್ನೋ, ಎಲ್ಲ ಮುಖಕ್ಕೆ ಬಳಿದು ಕೊಳ್ಳುತ್ತಿದ್ದರು. ಹಗಲಿಡೀ ಸಿಕ್ಕಿಸಿದ ಹೇರ್ ಕ್ಲಿಪ್ಪು ತೆಗೆಯುತ್ತಿದ್ದರು. ಈ ಕ್ಲಿಪ್ಪಿನಿಂದ ಕೂದಲು ದಪ್ಪ-ಓರಣವಾಗಿ ಕೂಡ್ರುತ್ತಿತ್ತು. ಕುಣಿಯುವಾಗ ಕೂದಲನ್ನು ತುರುಬಿನಂತೆ ಕಟ್ಟಬೇಕಾಗುತ್ತಿತ್ತು. ತುರುಬಿನ ಮೇಲೊಂದು ಹೂವಮಾಲೆ, ಒಂಭತ್ತು ವಾರಿನ ಕಚ್ಚೆ ಸೀರೆ ಉಡುತ್ತಿದ್ದರು. ಕಾಲಿಗೆ ದಪ್ಪಬಟ್ಟೆಯ ಪಟ್ಟಿ ಬಿಗಿದು ಅದರ ಮೇಲೆ ಗೆಜ್ಜೆ ಕಟ್ಟಿಕೊಳ್ಳುತ್ತಿದ್ದರು. ಅನಂತರ ಕುಣಿತ. ಸಂಗ್ರಹಗೊಂಡ ಹಣವನ್ನು ಎಲ್ಲರೂ ಪಾಲು ಹಂಚಿಕೊಳ್ಳುತ್ತಿದ್ದರು.

* * *

ಚಂದ್ರಕಲಾಬಾಯಿಯದು ಮೋಹಕ ರೂಪ. ಆಕೆಯನ್ನು ಬಹಳ ಜನ ಕೇಳಿದ್ದರು. "ನೀವ್ ಕುಣಿಯೋದನ್ನು ಬಿಟ್ಟು ಖಾಯಂ ಆಗಿ ನಮ್ಮ ಹಂತ್ಯಾಕನ ಯಾಕಿರಬಾರ್ದು?", ಆಕೆಯ ರೂಪಕ್ಕೆ ಬಹಳ ಜನ ಮರುಳಾಗಿದ್ದರು. ಆದರಾಕೆ ಯಾರ ಕೈಗೂ ಹತ್ತಿರಲಿಲ್ಲ. ಸವಿಯಾದ ಮಾತಿನಿಂದ ಪ್ರೇಕ್ಷಕರನ್ನು ಆಕರ್ಷಿಸು ತ್ತಿದ್ದಳು. ಆದರೂ ಕಡೆಗೊಮ್ಮೆ ಆಕೆ ಗೋವಿಂದರಾವ್ ಪಾಟೀಲನ ಬಲೆಗೆ ಬಿದ್ದಳು. ಗೋವಿಂದರಾವ್ ಆಕೆಗೆ ಜಮೀನು ಕೊಡಿಸಿದ. ಬೆಳ್ಳಿ-ಬಂಗಾರ ತಂದು ನಿಲ್ಲಿಸಿ, ಖಾಯಂ ಆಗಿ ಆಕೆಯನ್ನು ತಂದಿಟ್ಟುಕೊಂಡ. ಕೋಲ್ಹಾಟಿಯ ಹೆಂಗಸರೆಲ್ಲ ಕೆಲವು ಕಲೆಗಾಗಿ ಕುಣಿದರೆ, ಕೆಲವರು ಹೊಟ್ಟೆಪಾಡಿಗಾಗಿ ಕುಣಿಯುತ್ತಾರೆ. ಅಂಥ ಹೊಟ್ಟೆಪಾಡಿಗಾಗಿ ಕುಣಿವ ಹೆಂಗಸರಿಗೆ ಯಾರಾದರೂ ಆಶ್ರಯ ನೀಡುತ್ತೇನೆಂದರೆ ಅಂಥವರು ಕುಣಿತ ಬಿಡಲು ಸಿದ್ಧರಾಗುತ್ತಾರೆ. ಶಾಶ್ವತ ಆಶ್ರಯ ಬೇಕೆನ್ನುವುದು ಅವರ ಅಪೇಕ್ಷೆ. ಕಲೆಗಾಗಿ ಕುಣಿಯುವ ಹೆಂಗಸರು ಮಾತ್ರ ಮುದುಕಿಯರಾಗುವ ತನಕ ಕುಣಿಯುತ್ತಲೇ ಇರುತ್ತಾರೆ. ಚಂದ್ರಕಲಾಬಾಯಿ ಮನೆ ಮಾಡಿದ್ದರಿಂದ ಉಳಿದ ಕಲಾವಿದರು ಪಾರ್ಟಿ ಸೇರಬೇಕಾಯಿತು. ಅವ್ವನೂ ಮನೆಗೆ ಬರಬೇಕಾಯಿತು.

ಅಜ್ಜ ಕೋಂಡಿಬಾ ಮಾತ್ರ ಅವ್ವನಿಗೆ ಪಾರ್ಟಿ ಸೇರುವಂತೆ ಬಲವಂತ ಪಡಿಸು ತ್ತಿದ್ದ. ಆದರೆ ಅವ್ವ ಸಿದ್ಧಳಿರಲಿಲ್ಲ. ಆಕೆಗೆ ಆ ವಾತಾವರಣ ಕಂಡು ಹೇಸಿಗೆ ಯಾಗಿತ್ತು. ಆಕೆಗೆ ಕುಣಿತ ಸೇರುತ್ತಿರಲಿಲ್ಲ. ಆಕೆ ಅಳುತ್ತ ತನ್ನ ಕಷ್ಟವನ್ನು ಅಜ್ಜನೆದುರಿಗೆ ತೋಡಿಕೊಳ್ಳುತ್ತಿದ್ದಳು. ಅಂಥ ಅನುಭವ ಆಕೆಗೆ ಬಂದಿತ್ತು.

ಜಾತ್ರೆಯ ಜಲಸಾದಲ್ಲಿ ಕುಣಿಯುವಾಗ ಜನ ಅವ್ವನ ಕೈಹಿಡಿದೆಳೆದಿದ್ದರು. ಒಬ್ಬ
ದಾದಾ ಆಕೆಯನ್ನು ಹೊತ್ಕೊಯ್ಯಲು ಪ್ರಯತ್ನಿಸಿದ್ದ. ಆಗ ಚಂದ್ರಕಲಾಬಾಯಿಯ
ಸೋದರ ಜಗಳ ಮಾಡಿ ಅವ್ವನನ್ನು ಬಿಡಿಸಿದ್ದ. ಇಲ್ಲದಿದ್ದರೆ ಅವ್ವ ದಾದಾನ
ಕಾಮಕ್ಕೆ ಬಲಿಯಾಗುತ್ತಿದ್ದಳು. ಪೋಲೀಸನೂ ಸಹ ಅವ್ವನ ಅಪಹರಣ ಮಾಡುವ
ದಾಗಿ ಬೆದರಿಸಿದ್ದ. ಹೀಗಾಗಿ ಅವ್ವ ಜಲಸಾ ಪಾರ್ಟಿ ಸೇರಲು ಹೆದರುತ್ತಿದ್ದಳು.
ತಾನು ಕುಣಿಯಲಾರೆನೆಂದು ಆಕೆ ಅಜ್ಜನಿಗೆ ಅಳುತ್ತ-ಅಳುತ್ತ ಹೇಳುತ್ತಿದ್ದಳು. ಆಕೆಗೆ
ಶಿಕ್ಷಕಿಯಾಗುವ ಬಯಕೆಯಿತ್ತು. ಆದರೆ ಅಜ್ಜ ಕೇಳಲು ತಯಾರಿರಲಿಲ್ಲ. ಹಣ ಅವನ
ಕಣ್ಣನ್ನು ಕುರುಡಾಗಿಸಿತ್ತು. ಅವನ ಹೃದಯ ಕಲ್ಲಾಗಿತ್ತು. ಪಂಜರದೊಳಗಣ
ಗಿಳಿಯಂತೆ ಆಕೆ ಸೊರಗಿದ್ದಳು. ತಾನೀಗ ಇಲ್ಲಿಂದ ಓಡಿ ಹೋಗಬೇಕೆಂದು ಆಕೆ
ಗನಿಸಿದರೂ, ಎಲ್ಲಿಗೆ ಎಂಬ ಪ್ರಶ್ನೆ ಕಾಡುತ್ತಿತ್ತು. ಅವಳನ್ನು ಮದುವೆಯಾಗುವು
ದಾದರೂ ಯಾರು ? ಅದೂ ಕುಣಿಯುವವಳೊಂದಿಗೆ, ಕಾಲಿನ ಗೆಜ್ಜೆ ಆಕೆಯ ಪಾಲಿಗೆ
ಸಂಕೋಲೆಯಾಗಿತ್ತು. ಕೊಳಚೆಯೊಳಗೆ ಒಮ್ಮೆ ಸಿಕ್ಕಿಕೊಂಡರೆ ಅದರಿಂದ ಹೊರ
ಬರುವುದು ಅಸಾಧ್ಯವೆನ್ನುವರಲ್ಲ, ಹಾಗಾಯ್ತು.

ಕರಮಾಳೆಯ ಶಾಸಕ ನಾಗದೇವರಾವ ಜಗತಾಪ ಒಂದು ದಿನ ಮತ ಬೇಡಲು
ಚುನಾವಣೆಯ ಕಾಲಕ್ಕೆ ನೇರ್ಲೆಗೆ ಬಂದಿದ್ದರು. ಅವರ ಕಣ್ಣಿಗೆ ಅವ್ವ ಬಿದ್ದಳು.
ಶಾಸಕ ಅಜ್ಜನಿಗೆ ಹೇಳಿದ "ಕೋಂಡಿಬಾ, ನಿನಗೇನಬೇಕ ಹೇಳು, ಆದ್ರ ನಿನ್ನ
ಮಗಳನ್ನು ನನ್ನ ಕಡಿ ಕಳಿಸ". ಅವರು ಶಾಸಕರಾಗಿದ್ದರಿಂದ ಅಜ್ಜ ತುಟಿ ಪಿಟಿಕ್ಕೆನ್ನ
ಲಿಲ್ಲ. ಆದರೂ ಹೇಳಿದರು. "ನಿಮ್ಮ ಬಿಟ್ಟು ಬೇರೆ ಯಾರಿಗೂ ಬರಾಕ ಕೊಡ
ಲಾಕಿಲ್ಲ. ಆಕಿ ಕುಣಿಯೋದನ್ನು ಬಿಡ್ತಾಳ. ಶಾಂತಾ ಮನ್ಯಾಗ ಇರ್ತಾಳೆ. ನೀವು
ಆಗಾಗ ಬಂದು ಹೋಗ್ರಿ".

ಶಾಸಕ ಅವ್ವನ 'ಚೀರಾ' ಇಳಿಸಿದ. ಚೀರಾ ಅಂದರೆ ಮದುವೆಯಂಥ ಕಾರ್ಯ
ಕ್ರಮ. ಕುಣಿಯುವವಳ ಜೀವನದಲ್ಲಿ ಮೊಟ್ಟ ಮೊದಲು ಯಾವ ಗಂಡಸು ಬರು
ತ್ತಾನೋ ಅವನು ಆ ಕುಣಿವ ಹೆಂಗಸಿನ ಸಂಬಂಧಿಕರು ಬೇಡಿದ ರಕಮು ಕೊಡ
ಬೇಕಾಗುತ್ತದೆ. ಅಥವಾ ರಕಮು ಎಷ್ಟು ಎಂಬುದನ್ನು ನಿರ್ಧರಿಸಲಾಗುತ್ತದೆ. (ಈ
ರಕಮು ಬಂಗಾರ, ಹಣ, ಜಮೀನಿನ ರೂಪದಲ್ಲಿರಬಹುದು) ಮೊದಲ ರಾತ್ರಿ
ಕುಣಿಯುವವಳನ್ನು ಶೃಂಗರಿಸಲಾಗುತ್ತದೆ. ಆಕೆ ನೆಂಟರಿಷ್ಟರ ಕಾಲಿಗೆ ಬಿದ್ದು
ನಮಸ್ಕರಿಸಬೇಕು. ದೇವರಪೂಜೆ ನಡೆಯುತ್ತದೆ. ಕೊರಳಲ್ಲಿ ಮಂಗಳಸೂತ್ರ, ಕಾಲಿಗೆ
ಹೊಸ ಚಪ್ಪಲಿ ಧರಿಸಬೇಕು, ಬಂಗಾರದ ಆಭರಣವಿದ್ದರೆ ಅದನ್ನು ತೊಡಿಸುತ್ತಾರೆ,
ಸುಹಾಗರಾತ್ರಿ ಕೋಣೆಯನ್ನು ಅಲಂಕರಿಸಲಾಗುತ್ತದೆ. ಕುಣಿಯುವವಳ 'ಚೀರಾ'
ಯಾರು ಇಳಿಸುತ್ತಾನೋ ಅವನಿಗೆ ಗಂಡನ ಸ್ಥಾನ ಸಿಗುತ್ತದೆ. ಈ ಕೆಲಸ ಸ್ವೇಚ್ಛೆ
ಯಿಂದಲೇ ನಡೆಯಲಿ ಅಥವಾ ಬಲವಂತದಿಂದಲೇ ನಡೆಯಲಿ ಎಲ್ಲಿವರೆಗೆ ಆ ವ್ಯಕ್ತಿ
ಆಕೆಯನ್ನು ನೋಡಿಕೊಳ್ಳುತ್ತಾನೋ ಅಲ್ಲಿಯವರಿಗೆ ಆಕೆ ಬೇರೆಯವರೊಂದಿಗೆ

ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳುವುದಿಲ್ಲ. ಚೀರಾ ಇಳಿಸಿದವನಿಗೆ ಮಾಲಕ (ಕೊಲ್ಹಾಟಿ ಭಾಷೆಯಲ್ಲಿ 'ಕಜಾ') ಎನ್ನುತ್ತಾರೆ.

ಅಜ್ಜ ತನ್ನ ಪರಂಪರೆಯನ್ನು ಮುಂದುವರೆಸಿದ, ಮುತ್ತಜ್ಜ ಕೃಷ್ಣಾಕೊಲ್ಹಾಟಿ ಜೇಜಿಯನ್ನು ಮಾರಿದ್ದ. ಜೇಜಿ ಕೃಷ್ಣಾ ಕೋಲ್ಹಾಟಿಯ ಮಗಳಲ್ಲ. ಆದರೆ ಕೋಂಡಿಬಾ ತನ್ನ ಸ್ವಂತ ಮಗಳನ್ನೇ ಮಾರಿದ.

ಅವ್ವನ ಚೀರಾ ಇಳಿಸಿದ ಶಾಸಕ ನೇರ್ಲೆಗೆ ಬರಲಾರಂಭಿಸಿದ. ಶಾಸಕ ತನ್ನ ಮನೆಗೆ ಬರುತ್ತಾನೆಂಬ ಅಭಿಮಾನ ಅಜ್ಜನಿಗಿತ್ತು. ಅವನು ಅವ್ವನನ್ನು ಈಗ ಪ್ರೀತಿಯಿಂದ ಕಾಣಲಾರಂಭಿಸಿದ. ಯಾಕೆಂದರೆ ಹಣ ಈಗ ಮನೆ ಬಾಗಿಲಿಗೆ ಬಂದು ಬೀಳುತ್ತಿತ್ತು. ಪ್ರತಿ ದಿನ ಹೆಂಡ ಮಾಂಸದ ಸಮಾರಾಧನೆ, ಶಾಸಕನಿಂದ ಅವ್ವ ಗರ್ಭಿಣಿಯಾದಳು. ಎರಡು ಮೂರು ತಿಂಗಳಲ್ಲೇ ಶಾಸಕ ಹೇಳಿದ: "ಶಾಂತಾಳನ್ನು ನನ್ನ ಕಡಿ ಕರಮಾಳಿಗೆ ಕಳಿಸು", ಅಜ್ಜ ಹೇಳಿದ: "ನನ್ನ ಮಗಳನ್ನು ಕರಮಾಳಿಗೆ ಕಳಿಸೋ ಹಾಂಗಿಲ್ಲ. ಆಕಿ ಇಲ್ಲೇ ಇರ್ತಾಳ", ಚಂದ್ರಕಲಾಬಾಯಿ ಪಾಟೀಲನ ಮನೆ ಸೇರಿದ ಕೆಲವೇ ದಿನಗಳಲ್ಲಿ ಯಾರೋ ಆಕೆಗೆ ವಿಷ ಕೊಟ್ಟು ಕೊಂದಿದ್ದರು. ಇಂಥ ಎಷ್ಟೋ ಉದಾಹರಣೆಗಳು. ಸವಿಯಾಗಿ ಮಾತಾಡಿ ಕುಣಿಯುವ ಹೆಂಗಸರನ್ನು ಕರೆದೊಯ್ಯುತ್ತಾರೆ. ಅನಂತರ ಅವರನ್ನು ಸುಡುತ್ತಿದ್ದರು, ಇಲ್ಲವೇ ವಿಷ ನೀಡಿ ಕೊಲ್ಲುತ್ತಿದ್ದರು. ಅಥವಾ ಮಾರಾಟ ಮಾಡಿಬಿಡುತ್ತಿದ್ದರು. ಆದ್ದರಿಂದ, ಅಜ್ಜ ಅವ್ವನನ್ನು ಎಲ್ಲೂ ಕಳಿಸುತ್ತಿರಲಿಲ್ಲ. ಅವ್ವ ಸಾಯಬಾರದೆಂದು ಅಜ್ಜ ಅದೆಷ್ಟು ಕಾಳಜಿ ತೆಗೆದುಕೊಳ್ಳುತ್ತಿದ್ದ ! ಆದರೆ ಅಷ್ಟೇ ಕಾಳಜಿ ಅವಳ ಬದುಕಿನ ಬಗ್ಗೆ ಮಾಡುತ್ತಿರಲಿಲ್ಲ. ಅವ್ವ ಚಿಂತೆ ಮಾಡಿ-ಮಾಡಿ ಸೊರಗಿದಳು. ಅಜ್ಜ ಅವನನ್ನು ಸಾಯಲು ಬಿಡುತ್ತಿರಲಿಲ್ಲ. ಬದುಕಲೂ ಅವಕಾಶ ಕೊಡುತ್ತಿರಲಿಲ್ಲ.

ಶಾಸಕ ಅವ್ವನ ಹತ್ತಿರ ಬರುವುದನ್ನು ಬಿಟ್ಟ. ಈ ಸಂಬಂಧ ಎಷ್ಟು ಸುಲಭವಾಗಿ ಹರಿಯಿತು ! ಎಷ್ಟೆಂದರೂ ಕುಣಿಯುವಾಕೆ ಬಜಾರಿನ ವಸ್ತು ಅಲ್ಲವೇ ! ಅವ್ವ ಕೆಲದಿನ ಶಾಸಕನ ಹಾದಿ ಕಾದಳು. ಶಾಸಕ ಬಂದೇ ಬರುತ್ತಾನೆಂದು ಆಕೆಯ ಆಸೆ ! ಎರಡು ತಿಂಗಳು ಕಳೆದರೂ ಅವನು ಬರಲಿಲ್ಲ. ಅವ್ವನ ಹೊಟ್ಟೆಯಲ್ಲಿ ಗರ್ಭ ಬೆಳೆಯುತ್ತಿತ್ತು. ಈಗೇನು ಮಾಡಬೇಕೆಂಬ ಬಗ್ಗೆ ಅವ್ವ ಗೊಂದಲದಲ್ಲಿ ಬಿದ್ದಳು. "ಇನ್ನ ಆಮದಾರ ಬರಾಂಗಿಲ್ಲ. ಹೊಟ್ಟೆ ಕೆಡವಿ ಬಿಡು" ಎಂದು ಅಜ್ಜ ತಿಳಿಸಿದ. ಸೂಲಗಿತ್ತಿ ದುರಪದಿ ಅವ್ವನ ಹೊಟ್ಟೆಯನ್ನು ತಿಕ್ಕಲಾರಂಭಿಸಿದಳು. ಹೊಟ್ಟೆ ತಿಕ್ಕುವಾಗ ಅವ್ವ ಚೀರುತ್ತಿದ್ದಳು. ಆಗಾಕೆ ಹೊಟ್ಟೆ ತಿಕ್ಕುವುದನ್ನು ನಿಲ್ಲಿಸಿ, ಅಜ್ಜನಿಗೆ ಹೇಳಿದಳು. "ಹೊಟ್ಟೆಯೊಳಗೆ ಮೂರು ತಿಂಗಳ ಕೂಸೈತಿ. ಹೊಟ್ಟೆ ಕೆಡವಾಕೆ ಬರಾಂಗಿಲ್ಲ. ಶಾಂತಾ ಸತ್ತಾಳು". ಆಕೆ ಕಳಕಳಿಯಿಂದ ಹೇಳಿದಳು. ಕುಣಿಯುವವಳ ಭಾವನೆ, ಮನಸ್ಸು, ಜೀವನದೊಂದಿಗೆ ಕೊಲ್ಹಾಟಿ ಸಮಾಜಕ್ಕೆ ಯಾವ ಸಂಬಂಧವೂ ಇಲ್ಲ. ಮಕ್ಕಳು ಹುಟ್ಟಿದರೆ ಕುಣಿಯುವಾಕೆಯ ಕಿಮ್ಮತ್ತು ಇಳಿಯುತ್ತದಲ್ಲ.

ಅವ್ವನ ಹೊಟ್ಟೆಯಲ್ಲಿ ಗರ್ಭ ಬೆಳೆಯಲಾರಂಭಿಸಿದ್ದರೂ ಆಕೆ ತನ್ನ ತಮ್ಮ, ಮತ್ತು ಅಪ್ಪನ ಬದುಕಿಗೆ ತೇಪೆ ಹಚ್ಚಲು ಮತ್ತೆ ಕುಣಿಯಲು ಹೋದಳು. ಅವಳು ಕುಣಿಯದಿದ್ದರೆ ಕೋಂಡಿಬಾನ ಕುಟುಂಬ ಉಪವಾಸ ಸಾಯಬೇಕಾಗುತ್ತಿತ್ತು. ಭಿಕ್ಷೆ ಬೇಡುವಷ್ಟೂ ತೊಂದರೆ ಅವರಿಗೆ ಬೇಕಿಲ್ಲ. ಕೆಲಸದ ಮಾತಂತೂ ದೂರವೇ. ದುಡಿದು ತಿನ್ನುವುದನ್ನು ಅವರು ಪಾಪವೆಂದು ಪರಿಗಣಿಸುತ್ತಿದ್ದರು. ಇದು ಬರೀ ಕೋಂಡಿಬಾನ ಮನೆಯ ಕಥೆಯಲ್ಲ. ಇಡೀ ಕೊಲ್ಹಾಟಿ ಸಮಾಜದ ದುರಂತ ಗಾಥೆ. ಹೆಣ್ಣು ಗಳಿಸದಿದ್ದರೆ ಬರಗಾಲ ಬೀಳುತ್ತದೆ ಎಂಬ ಭಾವನೆ.

ಗರ್ಭ ಬೆಳೆಯುತ್ತಿತ್ತು. ಅವ್ವ ಕುಣಿಯುತ್ತಿದ್ದಳು. ಎಂಟು ಎಂಟೂವರೆ ತಿಂಗಳ ಗರ್ಭ ಬೆಳೆಯುವ ತನಕ. ರಾತ್ರಿಯಿಡೀ ಜಾಗರಣೆ ಮಾಡುತ್ತ, ಎತ್ತಿನಗಾಡಿ ಪ್ರವಾಸದಿಂದ ಮೈಕೈ ನೋವು. ಒಂಭತ್ತು ತಿಂಗಳು ತುಂಬಿದ ಬಳಿಕ ಅವ್ವ ನೇರ್ಲೆಗೆ ಬಂದಳು. ಅಲ್ಲೇ ನನ್ನ ಜನ್ಮವಾಯಿತು.

ನಾನು ಹುಟ್ಟಿ ಒಂದೆರಡು ತಿಂಗಳಾಗುವಷ್ಟರಲ್ಲಿ ಅವ್ವ ಮತ್ತೆ ಕುಣಿಯಲು ಹೊರಟಳು. ಆ ಕಾಲಕ್ಕೆ ಅವ್ವನೊಂದಿಗೆ ನನ್ನನ್ನು ನೋಡಿಕೊಳ್ಳಲು ಜೀಜಿಯೂ ಸಹ ಮಾಲನದ ಪಾರ್ಟಿ ಸೇರಿದಳು. ಜೀಜಿ ಈ ಪಾರ್ಟಿ ಸೇರಲು ಅಜ್ಜನೇ ಕಾರಣ. ಸಾಳಿ ಜಾತಿಗೆ ಸೇರಿದ ಜೀಜಿ ಕೊಲ್ಹಾಟಿ ಜಾತಿಯಲ್ಲಿ ಶಾಮೀಲಾದಳು. ಕೊಲ್ಹಾಟಿಯ ಜೀಜಿ ಪಾಟೀಲಬಾಯಿಯಾದಳು. ಪಾಟೀಲರ ಪರದೆಯೊಳಗೇ ವಾಸಿಸುವ ಜೀಜಿ ಜಲಸಾ ಪಾರ್ಟಿ ಸೇರಿ ಮಕ್ಕಳನ್ನೂ ನೋಡಿಕೊಳ್ಳಬೇಕಾಯಿತು. ಅವ್ವ ಒಂದೆಡೆ ವಿಧವೆಯಂತೆ, ಮತ್ತೊಂದೆಡೆ ಬಂಜೆಯಂತೆ ಬದುಕುತ್ತಿದ್ದಳು. ಇಡೀ ರಾತ್ರಿ ಕುಣಿತ, ಹಗಲಿಡೀ ನಿದ್ದೆ. ಆಗಾಗ ಬಂದುಹೋಗುವ ಜನರಿಂದಾಗಿ ಅವ್ವನಿಗೆ ನನ್ನ ಕಡೆ ಲಕ್ಷ್ಯಕೊಡಲು ಪುರುಸೊತ್ತೂ ಇರಲಿಲ್ಲ. ಅವಕಾಶ ಸಿಕ್ಕರೆ ಮೊಲೆಹಾಲು ಕುಡಿಸುತ್ತಿದ್ದಳು. ಒಮ್ಮೊಮ್ಮೆ ಅದೂ ಇಲ್ಲ. ಆಗ ಜೀಜಿಯೇ ಹಾಲಿನಲ್ಲಿ ಬಟ್ಟೆ ಒದ್ದೆಮಾಡಿ ಕುಡಿಸುತ್ತಿದ್ದಳು. ನನ್ನ ಅಳು ಲೆಕ್ಕಿಸದೇ ಅವ್ವ ಕುಣಿಯಲು ಸ್ಟೇಜಿಗೆ ಧಾವಿಸುತ್ತಿದ್ದಳು. ನನ್ನ ಅಳು ಪ್ರೇಕ್ಷಕರಿಗೆ, ಅವ್ವನಿಗೂ ಕೇಳಿಸುತ್ತಿತ್ತು. ಅವ್ವ ಮನದಲ್ಲೇ ರೋಧಿಸುತ್ತಿದ್ದಳು, ಬಹಿರಂಗದಲ್ಲಿ ನಗುತ್ತಿದ್ದಳು. ಆದರೆ ಆ ನಕಲಿ ನಗುವಿನ ಹಿಂದೆ ಎಂಥ ವೇದನೆ ಅಡಗಿದೆ ಎಂಬುದು ಜನರಿಗೇನು ಗೊತ್ತು ! ನಾನು ಬಹಳ ಅತ್ತರೆ, ಅವಸರದಲ್ಲಿ ಧಾವಿಸಿ ಬಂದು ಹಾಲು ಕುಡಿಸುತ್ತಿದ್ದಳು. ಆಗ ಜನರ ಕಿರುಚಾಟ. ಮತ್ತೆ ಅವ್ವ ಸ್ಟೇಜಿಗೆ ಧಾವಿಸಿ ಕುಣಿಯಲಾರಂಭಿಸುತ್ತಿದ್ದಳು. ಅವ್ವ ಹೊರಬರಲು ವಿಳಂಬವಾದರೆ ಜನ ಕಲ್ಲು ತೂರಾಡುತ್ತಿದ್ದರು. ಆಗ ಅಳುವ ನನ್ನನ್ನು ಜೀಜಿ ತನ್ನ ತೊಡೆಯ ಮೇಲೆ ಮಲಗಿಸಿ ತಟ್ಟುತ್ತಿದ್ದಳು.

ಧೇಬೇಗಾಂವಿಗೆ ಜಾತ್ರೆ ದಿನ ಮಾಲನಳ ಪಾರ್ಟಿ ಬಂತು. ಆಗ ನನ್ನ ವಯಸ್ಸು ನಾಲ್ಕೈದು ತಿಂಗಳು, ಜೀಜಿ ನನ್ನನೆತ್ತಿಕೊಂಡು ನಿಲ್ಲುತ್ತಿದ್ದಳು. ಕಿಸನ ಪಾಟೀಲ

ಹೆಂಡದ ನಿಶೆಯಲ್ಲಿ ಕುಣಿಯುತ್ತಿದ್ದ ಅವ್ವನ ಕೈಹಿಡಿದೆಳೆದ, ಅವ್ವ ಕೆಳಗೆ ಬಿದ್ದಳು. ಜೀಜಿ ತಕ್ಷಣ ನನ್ನ ಅಳು ಲೆಕ್ಕಿಸದೆ, ಕೆಳಗಿಳಿಸಿ ಕಿಸನ ಪಾಟೀಲನನ್ನು ಹಿಡಿದೆಳೆದು ಚಪ್ಪಲಿಯಿಂದ ಹೊಡೆದಳು. "ಭಾಡಕೋ, ಈಕಿ ಕುಣಿಯುವ ಹೆಂಗಸು, ವೇಶ್ಯಾ ಅಲ್ಲ", ಪಾಟೀಲನ ನಿಶೆ ತಕ್ಷಣ ಇಳಿಯಿತು. ಅವನು ಕೆರಳಿ ಹೇಳಿದ "ನಾಳಿ ನಿನ್ಗೇನು ಮಾಡ್ತಿನೋ ನೋಡುವಂತೆ, ಹ್ಯಾಂಗ ಕುಣಿತಿಯೋ ನೋಡ್ತಿನಿ".

ಮಾಲನ ತಂಬು ಬಿಡಿಸಿದರು. ಗಂಟು-ಮೂಟೆ ಗಾಡಿಗೆ ಹೇರಿ ರಾತ್ರಿಯೇ ಊರು ಬಿಟ್ಟು ಸಾಂಗಲಿಗೆ ಬಂದರು. ಇಲ್ಲಿ ತಂಬು ಎದ್ದು ಕುಣಿತ ನಡೆದ ಕೆಲ ದಿನಗಳಲ್ಲಿ ಸಾಂಗಲಿಯ ಜಮೀನ್ದಾರ ಆಗಿದ್ದ ಗೂಂಡಾನು ಗುಂಡಪ್ಪ ಜೀಜಿಗೆ "ಶಾಂತಾಳನ್ನು ನನ್ನ ಕಡಿ ಕಳಿಸು" ಎಂದ. ಜೀಜಿ ಹೇಳಿದಳು : "ನನ್ನ ಕೈಯಾಗ ಏನಿಲ್ಲ. ಅವರ ಅಪ್ಪಗೆ ಒಂದು ಮಾತು ಕೇಳ್ತೀನಿ". ಅವನು ಗೂಂಡಾ ಆಗಿದ್ದರಿಂದ ಅವ್ವನಿಗೆ ಗಾಬರಿ. ಜೀಜಿ ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು. ಆದರೆ ಗುಂಡಪ್ಪಾ 5–6 ಜನ ಗೂಂಡಾಗಳನ್ನು ಕರೆತಂದ. ಮತ್ತೆ ಜೀಜಿಗೆ ಹೇಳಿದ : "ಒಂದ್ ರಾತ್ರಿ ಆಕಿನ್ನ ಕಳಿಸು. ಇಲ್ಲದಿದ್ರೆ ಆಕೀನ ಹೊತ್ತುಕೊಂಡೇ ಹೋಗ್ತೇವಿ. ಆಕಿ ಎಲುಬು ಕೂಡಾ ನಿಮ್ಗೆ ಸಿಗಲಿಕ್ಕಿಲ್ಲ." ಜೀಜಿ ಹೆದರಿ ಒಪ್ಪಿದಳು. ಈಗೇನು ಮಾಡಬೇಕೆಂಬ ಚಿಂತೆ ಆಕೆಗೆ. ಓಡಿಹೋದರೆ ಹೇಗೆ ? ಇಡೀ ರಾತ್ರಿ ಹೊಲದ ಬೆಳೆಯಲ್ಲಿ ಅಡಗಿ ಕೂತು, ಬೆಳಗ್ಗೆ ಅಲ್ಲಿಂದೆದ್ದು ಓಡಿಹೋಗುವುದೆಂದು ಮಾಲನ ತಮ್ಮ ಶಿರ್ಸಾ ನಿಶ್ಚಯಿಸಿದ. ಅವ್ವ, ಜೀಜಿ ಸಂಡಾಸದ ನೆಪದಿಂದ ಹೊರಗೆ ಬಂದರು. ನಾನು ಅಳಲಾರಂಭಿಸಿದ್ದೆ. ನನ್ನ ಅಳು ಕೇಳಿಸಬಾರದೆಂದು ಜೀಜಿ ನನ್ನ ಬಾಯಿ ಮುಚ್ಚುವ ಪ್ರಯತ್ನ ಮಾಡುತ್ತಿದ್ದಳು. ಇಬ್ಬರೂ ಅತ್ತು ಅತ್ತು ಸೋತರು. ನಸುಕಿನ ಬಸ್ ಹಿಡಿದು ಜೀಜಿ, ಅವ್ವ ನೇರಲೆಗೆ ಬಂದರು. ಅವ್ವನಿಗೆ ಈಗ ಯಮುನ ಕೈಯಿಂದ ತಪ್ಪಿಸಿಕೊಂಡಂತಾಗಿತ್ತು.

ಕೊಲ್ಹಾಟಿಗರ ಪಾರ್ಟಿ ಈಗ ಊರೂರು ಅಲೆದಾಡುವುದನ್ನು ನಿಲ್ಲಿಸಿದೆ. ಈಗ ಊರಿನಲ್ಲೇ ಒಂದು ಥೀಯೇಟರ್ ಕಟ್ಟಿಸುತ್ತಾರೆ. ಅದರ ಪಕ್ಕದಲ್ಲೇ ಕಲಾವಿದರ ವಾಸಕ್ಕಾಗಿ 5–6 ಕೋಣೆಗಳನ್ನು ಕಟ್ಟಿಸುತ್ತಾರೆ. ಸ್ನಾನಗೃಹದ ವ್ಯವಸ್ಥೆಯನ್ನೂ ಮಾಡುತ್ತಾರೆ. ಯಾರು ಥಿಯೇಟರ್ ಕಟ್ಟಿಸುತ್ತಾನೋ ಅವನೇ ಅದರ ಮಾಲೀಕ. ಥಿಯೇಟರ್ ಎದುರಿಗೆ ಟಿಕೆಟ್ ಮಾರುವ ಕೋಣೆಯೂ ಇರುತ್ತದೆ. ಎದುರಿಗೆ ಚಹಾ–ನಾಸ್ಟಾದ ಪುಟ್ಟ ಹೋಟೆಲು, ಪಕ್ಕದಲ್ಲೇ ಪಾನ್ ಅಂಗಡಿ. ಒಂದು ಥಿಯೇಟರಿನಲ್ಲಿ ಐದರಿಂದ ಆರು ಪಾರ್ಟಿಗಳು ಬಂದಿಳಿಯುತ್ತವೆ. ಪ್ರತಿಯೊಂದು ಪಾರ್ಟಿಗೆ ವಾಸಕ್ಕೊಂದು ಕೋಣೆ. ಪ್ರತಿಯೊಂದು ಪಾರ್ಟಿಗೆ ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆಯವರೆಗೆ ಅವಕಾಶ. ಮೊದಲು ಆಟ ಆರಂಭಿಸಿದ ಪಾರ್ಟಿಗೆ ಕೊನೆಗೆ ಮತ್ತೊಂದು ಸಲ ಕುಣಿಯಲು ಅವಕಾಶ ನೀಡುತ್ತಾರೆ. ಯಾಕೆಂದರೆ ಮೊದಲ ಆಟ ಆರಂಭವಾದಾಗ ರಾತ್ರಿ 8 ಅಥವಾ 9. ಅಷ್ಟು ಬೇಗ ಜನ

ಬರುವುದಿಲ್ಲ. ಅದಕ್ಕಾಗಿ ಈ ಅವಕಾಶ. ಮೊದಲ ಪಾರ್ಟಿಯ ಮುಕ್ಕಾಲು ಗಂಟೆ ಮುಗಿದ ತಕ್ಷಣ ಬೆಲ್ಲಾಗುತ್ತದೆ. ಮೊದಲ ಪಾರ್ಟಿ ಸ್ಟೇಜನಿಂದ ಇಳಿದ ಕೂಡಲೇ 2ನೇ ಪಾರ್ಟಿಯ ಕುಣಿತ ಆರಂಭ. ಹೀಗೆ ಪ್ರತಿ ಮುಕ್ಕಾಲು ಗಂಟೆಗೊಮ್ಮೆ ಗಂಟೆ ಬಾರಿಸಲಾಗುತ್ತದೆ.

ಕುಣಿತ ಮುಗಿದ ಕೂಡಲೇ ಪ್ರತಿಯೊಂದು ಪಾರ್ಟಿ ತಂತಮ್ಮ ತಬಲಾ-ಹಿಯಾರ್ನ್ ಪೆಟ್ಟಿಗೆಯ ಪೂಜೆ ಮಾಡುತ್ತಾರೆ. ಅದಕ್ಕೆ ಹೂವಿನ ಹಾರ ಹಾಕುತ್ತಾರೆ. ಈ ನಾಲ್ಕೈದು ಪಾರ್ಟಿಯವರ ಕುಣಿತದ ಕಾರ್ಯಕ್ರಮ ಮುಗಿಯಲು ರಾತ್ರಿ 1 ಗಂಟೆಯಾದರೂ ಆಗುತ್ತದೆ. ರಾತ್ರಿ 1 ಗಂಟೆ ನಂತರ ಬೈಠಕ್ ಆರಂಭವಾಗುತ್ತದೆ. 5 ಜನರದ್ದೊಂದು ಗುಂಪು. ಬೈಠಕ್ ಎಂದರೆ ಕೆಲವೇ ನಿರ್ದಿಷ್ಟ ಪ್ರೇಕ್ಷಕರಿಗಾಗಿ ಮಾಡಿದ ವಿಶೇಷ ವ್ಯವಸ್ಥೆ. ಈ ಗುಂಪು ಹೆಚ್ಚಿನ ಹಣ ನೀಡಿ ವಿಶಿಷ್ಟ ಪಾರ್ಟಿಯ ಇಲ್ಲವೇ ಕಲಾವಿದೆಯ ಕುಣಿತ ವೀಕ್ಷಿಸುತ್ತಾರೆ. ಇಂಥ ಬೈಠಕ್‌ಗೆ ರಾತ್ರಿ 1ರ ನಂತರ ರಂಗೇರುತ್ತದೆ. ಈ ಬೈಠಕ್ ರೇಟು 300ಕ್ಕಿಂತಲೂ ಹೆಚ್ಚು. ಈ ಬೈಠಕ್‌ಗೆ ಅವರ 5-6 ಮಿತ್ರರಿಗೆ ಮಾತ್ರ ಅವಕಾಶ. ಇವರ ಹಾಡು ಕುಣಿತದ ಪ್ರೋಗ್ರಾಂ ನಸುಕಿನ 5 ಗಂಟೆಯವರೆಗೆ ನಡೆಯುತ್ತದೆ. ಅನಂತರ ಆ ಗುಂಪು ಹೊರಟುಹೋಗುತ್ತದೆ. ಈ ಬೈಠಕ್ ಅವರವರ ಕೋಣೆಯಲ್ಲೂ ನಡೆಯಬಹುದು. ಇಲ್ಲವೇ ಸ್ಟೇಜಿನ ಮೇಲೂ ನಡೆಯಬಹುದು. ಈ ಬೈಠಕ್‌ನಲ್ಲಿ ನಿರ್ಧರಿಸಿದ ಹಣದ ಅರ್ಧ ರಕಮು ಥೇಟರ್ ಮಾಲೀಕನಿಗೆ. ಉಳಿದರ್ಧವನ್ನು ಪಾರ್ಟಿಯ ಜನ ಪಾಲು ಹಂಚಿಕೊಳ್ಳುತ್ತಾರೆ. ಕುಣಿವ ಹೆಂಗಸರು ಇಡೀ ರಾತ್ರಿ ಕುಣಿ-ಕುಣಿದು ಸೋತು ಹೋಗುತ್ತಾರೆ.

ಸ್ಟೇಜಿನ ಮೇಲೆ ಕುಣಿತ ನಡೆವಾಗಲೇ ಜನ ಕುಣಿಯುವವಳಿಗೆ ಹಣ ಕೊಡುತ್ತಾರೆ. ಸಲಾಕೆ ಬಾರಿಸುವ ವ್ಯಕ್ತಿ ಜನರಿಂದ ಹಣಪಡೆದು ಕುಣಿಯುವವಳಿಗೆ ಕೊಡುತ್ತಾನೆ. ಹಣ ಸ್ವೀಕರಿಸುವಾಗ ಕುಣಿಯುವ ಹೆಂಗಸು ಬೇರೆ ಬೇರೆ ಪದಗತಿ ಭಂಗಿಯಲ್ಲಿ ಕುಣಿದು ಸ್ವೀಕರಿಸಬೇಕಾಗುತ್ತದೆ. ಅಂಥದರಲ್ಲಿ ಒಂದು ಭಂಗಿ ಕುದುರೆಯದು. ಈ ಕುದುರೆಯ ಕುಣಿತಕ್ಕೆ ಬಹಳ ಕಷ್ಟಪಡಬೇಕಾಗುತ್ತದೆ. ಕುದುರೆಯ ಕುಣಿತವೆಂದರೆ ಕುಕ್ಕರಗಾಲಿನಲ್ಲಿ ಕೂತು, ಕುದುರೆಯ ಭಂಗಿಯಲ್ಲಿ ಕುಣಿಯುವುದು ಈ ಕುಣಿತದಿಂದ ಮೊಣಕಾಲುಗಳು ಬಹಳ ನೋಯುತ್ತದೆ. ಒಮ್ಮೊಮ್ಮೆ ಬಗ್ಗಿ ರೂಪಾಯಿ ನಾಣ್ಯವನ್ನು ಹಣೆಯಿಂದ ಎತ್ತಿಕೊಳ್ಳಬೇಕಾಗುವುದು. ಇದರಿಂದಾಗಿ ಸೊಂಟ ಬಹಳ ನೋಯುತ್ತದೆ. ಯಾವುದೇ ಒಬ್ಬ ಪ್ರೇಕ್ಷಕನಿಗೆ ಓರ್ವ ಕುಣಿಯುವ ಹೆಂಗಸು ಇಷ್ಟವಾದರೆ ಅವನು ಸಲಾಕೆ ಬಾರಿಸುವವನ ಬಳಿಗೆ ಒಂದೊಂದರ ಎರಡು ನೂರು ಬಿಡಿ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಪ್ರತಿಸಲ ಅಂದರೆ ಎರಡು ನೂರು ಸಲ ಓಡಿ ಒಂದು ಬಿಡಿ ರೂಪಾಯಿ ಸ್ವೀಕರಿಸಬೇಕು. ಈ ತುದಿಯಿಂದ ಸ್ಟೇಜಿನ ಇನ್ನೊಂದು ತುದಿಯವರೆಗೆ ಓಡಾಡಿ ಆಕೆ ಹೈರಾಣಾಗುತ್ತಾಳೆ. ಸಲಾಕೆ ಬಾರಿಸುವವನು ಕೆಳಗೆ ಸ್ಟೇಜಿನ ಎದುರಿಗೆ ನಿಲ್ಲುತ್ತಾನೆ. ಆ ಹೆಂಗಸು ಒಂದೊಂದೇ

ಭಂಗಿಯಲ್ಲಿ ಪ್ರತಿಸಲ ಬಂದಾಗಲೂ ಡೋಲು ಹಾಗೂ ತಬಲವಾದಕ ಭಂಗಿಗೆ ತಕ್ಕಂತೆ ಬಾರಿಸುತ್ತಾರೆ. ಉಳಿದ ಹೆಂಗಸರು ಗೆಜ್ಜೆ ಕುಣಿಸಿ ಸಹಕರಿಸುತ್ತಾರೆ. ಆಗ ಸ್ಟೇಜಿನ ಮೇಲೆ ಗೊಂದಲವೋ ಗೊಂದಲ. ಸುಮಾರು 15 ರಿಂದ 20 ನಿಮಿಷಗಳವರೆಗೆ ಕುಣಿಯುವಾಕೆ ಈ ಕಸರತ್ತು ಮಾಡಬೇಕಾಗುತ್ತದೆ. ಕೊನೆಗೆ ಕುಣಿವ ಹೆಂಗಸು ಸೋತು ಹೈರಾಣಾಗುತ್ತಾಳೆಯೇ ವಿನಾ ಹಣ ಕೊಡುವ ಪ್ರೇಕ್ಷಕನಲ್ಲ. ಇದೂ ಒಂದು ರೀತಿಯ ಆನಂದದ, ರೂಪಾಯಿಯ ಉನ್ಮಾದ! ಹಣ ಮನುಷ್ಯನನ್ನು ಕುಣಿಸುತ್ತದೆ ಅಂತಾರಲ್ಲ ಅದು ಹೀಗೆ! O

ಸಂಗ್ರಹ: ಮಂಗ್ಳೂರ ವಿಜಯ
ಕೃಪೆ: ಸಂಬುದ್ಧ

ಈ ಸಂಚಯದ ಲೇಖಕರು...

- **ಎಸ್. ಜಿ. ಸಿದ್ಧರಾಮಯ್ಯ,** ಹೊಂಬೆಳಗು, ನಳಂದ ಶಾಲೆಯ ಹತ್ತಿರ ರಾಘವೇಂದ್ರ ನಗರ, ತುಮಕೂರು-572102
- **ಎಲ್ಸಿ. ನಾಗರಾಜ್,** ಫಾರಂ-ಹೌಸ್ ಸೊಂಡೇಕೊಪ್ಪ, ನೆಲಮಂಗಲ ತಾ॥ ಬೆಂಗಳೂರು ಗ್ರಾ.-562 130
- **ಡಾ॥ ಬಸವರಾಜ ಕಲ್ಗುಡಿ,** ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಮೈಸೂರು ರಸ್ತೆ, ಬೆಂಗಳೂರು.
- **ಎನ್. ಎಸ್. ಶ್ರೀಧರಮೂರ್ತಿ,** 25/1, ಹೆಚ್.ಎನ್. ಲೇಔಟ್ 11ನೇ ಕ್ರಾಸ್, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560 003
- **ಪಿ. ಚಂದ್ರಿಕಾ,** 2791, 13ನೇ ಮೇನ್, 'E' ಬ್ಲಾಕ್, ರಾಜಾಜಿನಗರ ಎರಡನೇ ಹಂತ, ಬೆಂಗಳೂರು-560 010
- **ಡಾ॥ ಎಂ. ಚಿದಾನಂದಮೂರ್ತಿ,** ಮಿಂಚು ೬-ಎ, ೪ನೇ ಅಡ್ಡರಸ್ತೆ ೧೧ನೇ ಮುಖ್ಯರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು-೫೬೦ ೦೪೦

ಪಿ. ಚಂದ್ರಿಕಾ ಅವರ ಕವಿತೆಗಳು

ಚಿಟ್ಟೆ

ಬಾಗಿಲನು ತಟ್ಟಿ ಹೊರಗೆ ಬಾ
ಎಂದು ಯಾರೋ ಕರೆದಾಗ,
ನಾಚಿ ಮೂಲೆಗೆ ಮುದುಡಿ
ಕೆಂಪುಲಂಗವ ಪಾದ ಕಾಣದ ಹಾಗೆ ಮುಚ್ಚಿ
ಅರ್ಧ ಅತ್ತು, ಅರ್ಧ ನಕ್ಕು ಯಾರಿಗೂ ಕೇಳದ ಹಾಗೆ
ಗೊಣಗಿದ್ದು ಸ್ವಲ್ಪ ತಡಿ.

ಸಿಕ್ಕಲ್ಲಿ ಅಂಟಿ ಬಿಡುವ ಚಪಲ
ತೆರೆಯುದ ಕಣ್ಣು, ತಗ್ಗಿದ ತಲೆ,
ಒಳಗೆ ತುಡಿತ!
ಮೈಯ ಮೃದು ತನಕೆ ಬೆದರಿ
ಇನ್ನಷ್ಟು ಮುದುಡಿದಾಗ
ಮತ್ತೆ ಕೇಳಿದ ಕರೆಗೆ
ಭೋರೆಂದು ಸುರಿದ ಮಳೆ
ಮೆಲ್ಲುಲಿಗಳಲಿ ಕನಸಗೂಡೊಡೆದು
ಇಣುಕಿ ನೋಡಿ ಮುಗುಳುನಗೆ ಸೂಸಿ,
ಕಾಲಿಟ್ಟ ಮರುಕ್ಷಣವೇ
ಬಿಸಿಲ ಜಳಕೆ ಬೆದರಿ
ಮೈತುಂಬಾ ಮುಳ್ಳಾಗಿ
ಕಣ್ಣ ಬಿಡಿಸಿ
ಹೊರ ಬರಲು ಆಮೆ ನಡಿಗೆ.

ಇಗೋ ಬಂದೆ ಎಂದು ಹೇಳಿದ್ದು
ಸ್ವಲ್ಪ ಜೋರು.
ಹಗಲು ರಾತ್ರಿಯ ತುಂಬಾ
ಚೈತ್ರಯಾತ್ರೆಯ ಯತ್ನ
ನಕ್ಕ ವಸಂತನ ಎದೆಯೊಳಗೆ ಬಣ್ಣಬಣ್ಣ.

ಹಳದಿ, ಬಿಳಿ, ಕೇಸರಿ, ಕಪ್ಪು ಹತ್ತು ಹಲವು
ಹೇಗೆ ಬಂದವು ರೆಕ್ಕೆಗಳು ಹೆಗಲ ತುಂಬಾ !
ಯಾವ ಯೋಚನೆ ಹೇಳು,
ಯಾವ ಕರೆ ಕೇಳದೆಯೆ
ಗಾಳಿ ಹಾರಿದಡೆ ಜಗಿದಾಗ,
ನಕ್ಕು
ಕೈಬೀಸಿ ಕರೆಯುತಿತ್ತು
ಪುಟ್ಟ ಹೂ.

ಆ ದಡವ ಮುಟ್ಟಿಲ್ಲ

ಆ ದಡಕ್ಕೆ ಪಯಣ ಬೆಳೆಸಬೇಕಿದೆ ಇನ್ನೂ
ತರೆಕೊರೆದ ಕಲ್ಲುಗಳ
ನಿರ್ಲಿಪ್ತ
ಕಡೆಯು
ಗೆರೆಯು ದಂಡೆ.

ಅಲ್ಲಿ ಮೌನಕೆ ಆವರಿಸಬಹುದಾದ
ಜೀವಶಕ್ತಿಯು ಮೊರೆತ
ಸೂಜಿಗಲ್ಲಿನ ಹಾಗೆ ಸೆಳೆಯುತ್ತಿದೆ
ಸಪೂರ ತೆರೆಗಳ ಹಿಂದೆ
ಸಾಗಿ ಬರುವ ಎಂಥದೋ ಗೀತೆ
ಮತ್ತೆ ಕರೆಯುತ್ತದೆ.

ನಿಜ ಪ್ರೀತಿಯೆಂದರೆ
ಮಧುರನಾದದ ಅಲೆಯೊಂದು
ಒಳಗೊಳಗೆ ಕದಲಿದಂತೆ
ಭ್ರಮೆಗೆ ಕಡೆದಿಟ್ಟ ಮತ್ತೊಂದು ಕನಸಿನಂತೆ
ಮಾರವಾಡಿಯಂಗಡಿಯ ನಯವಾದ
ಬಿಳಿ ಹುಡುಗನಂತೆ
ಸಂಜೆ ಬೆಳಕು

ಕಣ್ಣ ಒಳಗೆಲ್ಲೋ ಬಿಂಬಿಸಿ
ದೀಪ ಹಚ್ಚಿದಂತೆ.

ಪೊದೆಯಾಚೆ ಅರಳಬೇಕಿದ್ದ ಹೂವ
ಪಿಸುನುಡಿ
ಜೀವಕ್ಕೆ ಝಿಲ್ಲೆಂದ
ಕಡುವಾಸನೆಯ ಉಸಿರು
ಬೆಚ್ಚನೆಯ ಹೊದಿಕೆಯಾದವನನ್ನು
ಮಳೆಯಲ್ಲಿ ಕೊಡೆಯಾಗು ಎಂದು ಕೇಳಬೇಕೆನ್ನಿಸುತ್ತದೆ
ಸಣ್ಣ ದೀಪವ ಕತ್ತಲಲ್ಲಿ ಹಿಡಿದಾಗ
ಅಲುಗಿಸುವ ತೆಳುಗಾಳಿ
ನಗೆಯ ನೆರಳಿನಲ್ಲಿ
ಏನೋ ಹರಡುತ್ತದೆ.

ಕಿಟ್ಟು ತಿರುವುಗಳಲ್ಲಿ
ಝೂಡಮಾಲಿಗೆ ಕಾದ ತಲೆಗಳಲ್ಲಿ
ತಟ್ಟನೆ ತೆರೆದಿಟ್ಟ ಗಲ್ಲಿಗಳಲ್ಲಿ
ಸಣ್ಣಗೆ ಕುಣಿಯುತ್ತವೆ.

ಆ ದಡದಲ್ಲಿ ಕಾಣುತ್ತದೆ
ಕಾರ್ತೀಕದ ವೈಭವದ ರಾತ್ರಿ,
ನೂರು ದೀಪಗಳು ಒಮ್ಮೆಗೇ ನಕ್ಕಂತೆ
ಕಣ್ಣಕಾಂತಿ ದಂಗು ಬಡಿಸುತ್ತದೆ
ಇಲ್ಲಿ ಕುಳಿತಿರುವ
ಹಾದಿಗೆ
ಪರಿಮಳವ ಕಂಡೆರಚುತ್ತದೆ :

ಕಲ್ಲು ಕಣ್ಣಿನ ಹುಡುಗ

ಹಕ್ಕಿ ಗರಿ ಕಟ್ಟುತಿದೆ
ಮುಗಿಲ ಹೂಮುಂಚಿಕೆ
ಹರಿಬಿಟ್ಟ ಹಂಬಲಕೆ
ಅರಳು ಮೊಗ್ಗುಗಳ ಹಿಂದೆ

ದಳ ದಳಹೂ ಬಿಡಿಸಿಟ್ಟಾಗ
ತಟಕ್ಕನೆ ಕಂಡ ಪರಾಗದೆಸಳು
ಮರುಕಳಿಸಿದ ಪ್ರಶ್ನೆಗೆ
ಆಕಳಿಸಿ ಮಲಗಿದೆ ಈ ಭೂಮಿ
ಈ ಹೆಣ್ಣು, ನೀರು
ಹರಿದೆಡೆಯೆಲ್ಲಾ ಪಾತ್ರೆ ತುಂಬುವ ಸುಗುಣ
ಕಣ್ಣ ಸನ್ನೆಯ ಒಳಗೇ ನುಡಿಯುತ್ತಾಳೆ
ಏನೋ ಆಗಬಹುದು
ಈ ಹುಡುಗ ಶಾಪಗ್ರಸ್ತ, ಕಲ್ಲಾಗಿ ನಿಂತಾಗ
ಮೈಯ ಕಸುವಿನಲಿ ತೆರೆದಿಟ್ಟ
ಮಾಯಕತೆಯ ಚಿಟ್ಟೆಗಳ ಹರಿಸಿ
ಕಚಗುಳಿ ಇಡಿಸಿ ಹೂವ ಮಾಡಿದಳು
ಮೈಸವರಿ ಮುಖಕ್ಕೆ ಮುತ್ತಿಟ್ಟಾಗ
ಎಚ್ಚೆತ್ತ ಹುಡುಗನ ಕಣ್ಣುಕಲ್ಲು
ಚಿಟ್ಟೆ ಹೆದರಿ ಹಾರಿದಾಗ
ನೀಲಾಕಾಶದಲಿ ಸಣ್ಣ ಗುಡುಗು
ಈ ಹುಡುಗ ಶಾಪಗ್ರಸ್ತ
ಮತ್ತೆ ನೆನಪಿಸಿಕೊಂಡಾಗ
ಹುಡುಗಿ ಎಲ್ಲ ಒಪ್ಪಿಕೊಳ್ಳುವ ಚಿತ್ತಿನಿ
ಕಣ್ಣು ಮುಚ್ಚಿ
ಎಲ್ಲವನ್ನೂ ಕೈಗಿಡುವ ಹಸ್ತಿನಿ
ರಾತ್ರಿ ಕರಗಿಸಿದ ಕನಸು
ತೆರೆತೆರೆಯ ಸೆಳವಿನಲಿ
ತೇಲಿಸಿದರೂ ಕೂಡಾ
ಕರಗಲಾಗದ ಕಣ್ಣು
ಪ್ರೀತಿಸುವುದೊಂದು ಮೋಜು
ಗೆಲ್ಲುವುದು ಮಾತ್ರ ಜೂಜು
ಘಸಲ ಕಟಾವಿನ ನಂತರ
ಉಳಿವ ಅನಂತ ಬಯಲು
ಮಂಜುತೆರೆಯ ಈ ಹುಡುಗಿ
ಆಪ್ತತೆಗೆ ಸುಖಕೊಡುವ

ಕೈಬೆರಳ ಸ್ಪರ್ಶದ
ಮೋಹಕತೆಗೆ ಕರಗಿ
ಮುದ್ದಾಗಿ ಎಲೆಮೇಲೆ ಮೈ ಚೆಲ್ಲುತ್ತಾಳೆ
ಬಿಸಿಲ ಕಾಯಿಸಲೆಂದು ಇಬ್ಬನಿಯಾಗಿ
ತನ್ನೊಡಲ ಕಣಕಣವನ್ನೂ
ನುಂಗುವ ಶಾಖಕ್ಕೆ ಮುಲುಗುತ್ತಾ
ಮರಳಿಸುತ್ತಾಳೆ
ಜಡಹೂವ ಗೊಂಚಲುಗಳ ಹಿಡಿದ ಕೊಂಬೆಗಳಿಗೆ
ತಂಪನೆಯ ಗಾಳಿಯ
ಕರಗಲಾರದ ಕಣ್ಣು
ಹನಿಹನಿಗೆ ಬಯಸುತ್ತಾ
ಆವಿಯಾಗುತ್ತಾ

ಪಿ. ಚಂದ್ರಿಕಾ ಹುಟ್ಟಿದ್ದು ಚಳ್ಳಕೆರೆಯಲ್ಲಿ (1970). ಶಿವಮೊಗ್ಗೆಯ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆದಿದ್ದಾರೆ. ಕಾಲೇಜು ದಿನಗಳಲ್ಲೇ ಕ್ರೈಸ್ಟ್ ಕಾಲೇಜಿನ ಬೇಂದ್ರೆ ನೆನಪಿನ ಕಾವ್ಯಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದಾರೆ. ಜೊತೆಗೆ DYSFನ ರಾಜ್ಯಮಟ್ಟದ ಕಾವ್ಯ ಸ್ಪರ್ಧೆಯಲ್ಲೂ ಇವರ ಕವಿತೆ ಬಹುಮಾನ ಪಡೆದಿದೆ. ತಮ್ಮ ಪತಿ ನ. ರವಿಕುಮಾರ್ ಜೊತೆಗೆ ಪ್ರಕಾಶನ ಮತ್ತು ಅಭಿನವ ಪತ್ರಿಕೆಯಲ್ಲಿ ಸಕ್ರಿಯವಾಗಿ ತೊಡಗಿರುವ ಚಂದ್ರಿಕಾ ಅವರು, ತಮ್ಮ ಮೊದಲ ಕವನ ಸಂಕಲನ ಹೊರ ತರುವ ತಯಾರಿಯಲ್ಲಿ ತೊಡಗಿದ್ದಾರೆ.

ಪುಸ್ತಕ ಪರಿಚಯ

ಹುಳಿಮಾವಿನ ಮರ ಪಿ. ಲಂಕೇಶ್ ಆತ್ಮಕಥೆ

ಪತ್ರಿಕೆ ಪ್ರಕಾಶನ, ಬೆಂಗಳೂರು-4

'ಹುಳಿಮಾವಿನ ಮರ' ಪುಸ್ತಕವು ಇತ್ತೀಚೆಗೆ ಬಹುವಾಗ್ಯಿಚರ್ಚಿತವಾದ ಕೃತಿ ಮತ್ತು ಎರಡೇ ತಿಂಗಳಲ್ಲಿ ಎರಡನೇ ಮುದ್ರಣ ಕಂಡ ಪುಸ್ತಕ ಎಂಬ ಎಲ್ಲಾ ಪ್ರಭಾವಳಿಗಳನ್ನ ಹೊತ್ತುಕೊಂಡೇ ನಮ್ಮನ್ನ ಎದುರುಗೊಳ್ಳುತ್ತದೆ. ಇದೇ ಕಾರಣಗಳು ನಮ್ಮ ಕುತೂಹಲಕ್ಕೂ ಓದಿಗೂ ಕಾರಣವಾಗಬಲ್ಲದು.

ಲಂಕೇಶ್ ಒಬ್ಬ Stratagic ಲೇಖಕ ಎನ್ನುವುದು ಎಲ್ಲರೂ ಒಪ್ಪುವ ಮಾತು. ರಾಮಚಂದ್ರದೇವ ಗುರುತಿಸಿದ್ದಂತೆ: ಅವರ ಬಗ್ಗೆ ನಡೆದಿರುವ ವಿಮರ್ಶೆ ಒಂದೋ ಅದು ದ್ವೇಷದಿಂದ ಕೂಡಿದ್ದು ಮತ್ತೊಂದು ಅವರ ಆಸ್ಥಾನ ವಿದ್ವಾಂಸರದ್ದಾಗಿರುತ್ತದೆ. ಜೊತೆಗೆ ಇವರ ಸಾಹಿತ್ಯಕ ಭಯೋತ್ಪಾದಕ ಕೃತ್ಯಗಳ ಕಾರಣಕ್ಕೆ ಸಮ ಮನಸ್ಸಿನ ಎಳೆ ಎಲ್ಲೋ ಕಳೆದುಹೋಗಿರುತ್ತದೆ. ಲಂಕೇಶ್ ಸಾಹಿತ್ಯ ಕುರಿತು ಸರಿಯಾದ ವಿಮರ್ಶೆಯಾಗಲೀ ಸಮ ಮನಸ್ಸಿನ ಚರ್ಚೆಯಾಗಲೀ ನಮ್ಮಲ್ಲಿ ನಡೆದೇ ಇಲ್ಲ.

ಲೇಖಕನೊಬ್ಬ ತನ್ನ ವಿಶಾಲವಾದ ಬದುಕನ್ನ ಕೆಲವು ಪುಟಗಳ ಮಿತಿಯಲ್ಲಿ ಹಿಡಿದಿಡಲು ಹೊರಟಾಗ ಅವನಿಗೆ ಆಯ್ಕೆಯ ಪ್ರಶ್ನೆ ಬಹುಮುಖ್ಯವಾಗುತ್ತದೆ. ಅಗಾಧ ಬದುಕಿನ ವಿವರಗಳಲ್ಲಿ ಲೇಖಕನೊಬ್ಬನ ಆಯ್ಕೆಯೇ ಆತ್ಮಕಥೆಯ ಯಶಸ್ಸಿನ ಬಹುಮುಖ್ಯ ಭಾಗವಾಗುತ್ತದೆ. ಬಾಲ್ಯದ ಬಗ್ಗೆ ಬರೆಯುವಾಗ ಲಂಕೇಶರ ಲೇಖನಿಯಲ್ಲಿ ಹಳ್ಳಿ ಹುಡುಗನೊಬ್ಬ ವಿವಿಧ ಬದಲಾವಣೆಗಳಿಗೆ ಎದುರಾಗುವ ಹಾಗೂ ಬೆಳೆಯುವ ರೀತಿ ಅತಿ ಆಕರ್ಷಕವಾಗಿ ಮೂಡಿಬಂದಿದೆ. ಹುಳಿಮಾವಿನ ಮರದ ಮುಖ್ಯ ಆಕರ್ಷಣೆ ಹಾಗೂ ಯಶಸ್ವೀ ಭಾಗ ಅವರ ಬಾಲ್ಯದ ಜೀವನದ ದಟ್ಟ ನಿರೂಪಣೆಯಾಗಿದೆ. ಆದರೆ ಅದೇ ತಾರುಣ್ಯದ ಹಾಗೂ ನಂತರದ ದಿನಗಳ ಬಗ್ಗೆ ಬರೆಯುವಾಗ ಲಂಕೇಶರಿಗೆ ಇನ್ನಿಲ್ಲದ ಅವಸರ ಹಾಗೂ ಸಂಕ್ಷಿಪ್ತತೆ ಕಾಡಿದೆ. ನಮ್ಮ ನವ್ಯ ಲೇಖಕರಲ್ಲೆಲ್ಲಾ ಬಹುಮುಖ್ಯವಾಗಿ ಕಾಡಿದ ವಿಕ್ಷಿಪ್ತತೆ ಈ ಪುಸ್ತಕದ ಬಹುಮುಖ್ಯ ಅಂಶ. ಈ ವಿಕ್ಷಿಪ್ತತೆ ಅತಂತ್ರ ಸ್ಥಿತಿಗಳ ಪ್ರಭಾವಗಳನ್ನ ಬಿಡಿಸಿಟ್ಟ ತಣ್ಣನೆಯ ಕ್ಷಣಗಳಲ್ಲಿ ಅನ್ನಿಸುವುದು ಲಂಕೇಶ್ ತಮ್ಮ ಬಾಲ್ಯದ ಬಗ್ಗೆ ಬರೆದಷ್ಟು ತೀವ್ರವಾಗಿ ನಂತರದ ದಿನಗಳ ಬಗ್ಗೆ ಯಾಕೆ ಬರೆಯಲಿಲ್ಲ ಎಂದು. ತಮ್ಮ ಅನೇಕ ಪ್ರಯೋಗಗಳ ಬಗ್ಗೆ ಹೇಳುವಾಗಲೂ ಬಹಳ Stratagic ಆಗಿ ತಮ್ಮ ಜಾಣ ಜಾಣೆಯರಿಗೆ ಮೆಚ್ಚುಗೆಯಾಗುವ ಹಾಗೆ ತಮ್ಮ ಆಯ್ಕೆಗಳನ್ನ ಹೆಚ್ಚು ಯೋಚಿಸಿ ನಿರೂಪಿಸಿದ್ದಾರೆ. ಅದಕ್ಕೇ ಪುಸ್ತಕದ ಮೊದಲರ್ಧದ ಜೀವಂತಿಗೆ ಹಾಗೂ ತನ್ಮಯತೆ ಎರಡನೇ ಭಾಗದಲ್ಲಿ ನಾಪತ್ತೆಯಾಗುತ್ತದೆ.

ಬಹುಮುಖ್ಯವಾಗಿ ಪತ್ರಿಕೆಯನ್ನ ರೂಪಿಸುವಾಗಿನ ಅನುಭವವಾಗಲೀ ಇತರ ಪ್ರಯೋಗಗಳಿಂದ ಪಡೆದ ಒಳನೋಟಗಳಾಗಲೀ ಬೆಳೆದ ರೀತಿಯನ್ನಾಗಲೀ ಹೆಚ್ಚು

ಹೇಳುವುದಿಲ್ಲ (ಅವರ ಸಿನಿಮಾ ಪ್ರಯೋಗದ ಬಗ್ಗೆ ಈ ಮಾತಿಗೆ ಅಪವಾದದ ಹಾಗಿದೆ). ಒಟ್ಟಾರೆ ಪತ್ರಿಕೆ ಮೂಲಕ ತೆರೆದಿಟ್ಟುಕೊಂಡ ಲಂಕೇಶರನ್ನ ಈ ಪುಸ್ತಕ ದಲ್ಲಿ ಹುಡುಕ ಹೊರಟರೆ ಸಿಗುವುದು ಸ್ವಲ್ಪ ಕಷ್ಟವೇ. ತಮ್ಮ ಹರೆಯದ ಲೈಂಗಿಕ ಒತ್ತಡಗಳು ಹಾಗೂ ವಿವಾಹೇತರ ಸಂಬಂಧಗಳ ಬಗ್ಗೆ ಬರೆದಾಗಲೂ ಲಂಕೇಶ್ ಇದರಲ್ಲಿ ತಾವು ಅನುಭವಿಸಿದ್ದೇನೂ ಇಲ್ಲ ಅದು ಹಾಗಾಯಿತಷ್ಟೇ ಅದರಿಂದಾಗಿ ತನ್ನಲ್ಲಿ ಹುಟ್ಟಿದ ತಳಮಳಗಳಾಗಲೀ ಅನುಭವಗಳಾಗಲೀ ಏನೂ ಇಲ್ಲವೇನೋ ಎಂಬಂತೆ ನಿರೂಪಿಸುತ್ತಾರೆ. ಇದೂ ಕೂಡಾ ಇವರ Stratagic ಗುಣದ ಭಾಗ ವಾಗಿ ಓದುಗರನ್ನ ಬೆಚ್ಚಿಬೀಳಿಸುವ ಪ್ರಯತ್ನದ ಹಾಗೇ ಕಾಣುತ್ತದೆ. ಈ ವಿವರ ಗಳನ್ನ ಬಿ. ಎಸ್. ವೆಂಕಟಲಕ್ಷ್ಮಿ ಕೂಡಾ ಗುರುತಿಸಿದ್ದಾರೆ. ಅದೇ ಕಾರಣಕ್ಕೆ ಹುಳಿಮಾವಿನ ಮರದ ಮೊದಲರ್ಧ ಚಪ್ಪರಿಸುವ ಹುಳಿ ಹೊಂದಿದ್ದರೆ ಕೊನೆಯರ್ಧ ಮುಖ ಸಿಂಡರಿಸುವಷ್ಟು ಹುಳಿಯಾಗಿದೆ

ಇಷ್ಟೆಲ್ಲವನ್ನೂ ಮೀರಿ ಅಪ್ಪಟ ಹಳ್ಳಿ ಮನುಷ್ಯನ ಹಾಗೆ ಒಮ್ಮೊಮ್ಮೆ ಕಾಡು ಪ್ರಾಣಿಯ ಹಾಗೆ ವರ್ತಿಸುವ ಲಂಕೇಶ್ ನಮ್ಮ ಅಕೆಡೆಮಿಕ್ ಲೇಖಕರ ಬುದ್ಧಿ ವಂತಿಕೆಯ ಕೂದಲು ಸೀಳುವ, ತೌಡು ಕುಟ್ಟುವ ರೀತಿಯ ಆಲೋಚನೆಗಳಿಂದ ದೂರ ಇರುವವರು. ತನ್ನ ಹುಚ್ಚಾಟ ದೌರ್ಬಲ್ಯ ಇವುಗಳೆಲ್ಲದರ ಬಗ್ಗೆ ಹೇಳಿಕೊಳ್ಳುತ್ತಲೇ ವಿಭಿನ್ನರಾಗುತ್ತಾರೆ. ಅದೇ ಕಾರಣಕ್ಕೆ ನಮ್ಮ ಮಧ್ಯೆ ಮುಖ್ಯರೂ ಆಗುತ್ತಾರೆ.

ಈ ಭೂಮಿ ಈ ಸಸ್ಯ ಎಲ್. ನಾರಾಯಣರೆಡ್ಡಿ, ಕೃಷಿ ವಿಚಾರಗಳು
ನಿರೂಪಣೆ : ಬಂದಗದ್ದೆ ರಾಧಾಕೃಷ್ಣ, ಪ್ರ : ಭಾರತಿ ಕಲಾವಿದರು ಕೆಳದಿ,
ಕೃಷಿ ವಿಕಾಸ ಕೇಂದ್ರ, ಬೆಳೆಯೂರು

ಸಹಜ ಕೃಷಿಯ ಬಗ್ಗೆ ಈಚಿನ ದಿನಗಳಲ್ಲಿ ಹೆಚ್ಚು ಚರ್ಚೆ ಹಾಗೂ ಪ್ರಯತ್ನಗಳು ಸಾಗುತ್ತಿವೆ. ಈ ವಿಶಿಷ್ಟ ಪುಸ್ತಕದಲ್ಲಿ, ಕೃಷಿ ಕ್ಷೇತ್ರದಲ್ಲಿರುವ ಎಲ್. ನಾರಾಯಣರೆಡ್ಡಿ ಅವರ ಅನುಭವಗಳನ್ನ ಅವರ ಮಾತುಗಳಲ್ಲೇ ನಿರೂಪಿಸಲಾಗಿದೆ. ಫುಕೋವುಕಾನ ಪ್ರಭಾವದಿಂದ ಸಾವಯವ ಕೃಷಿಗೆ ತಮ್ಮನ್ನು ಒಡ್ಡಿಕೊಂಡ ನಾರಾಯಣರೆಡ್ಡಿ ಯವರಲ್ಲಿಗೆ ಅನೇಕ ದೇಶ ವಿದೇಶಗಳ ಕೃಷಿ ತಜ್ಞರು ವಿದ್ಯಾರ್ಥಿಗಳು ಕಲಿಯಲು ಬರುತ್ತಾರೆ. ಇವರ ಅಪಾರವಾದ ಮಾಗಿದ ಅನುಭವ ಹಾಗೂ ವಿಭಿನ್ನ ದೃಷ್ಟಿ ಕೋನಗಳು ಈ ಪುಸ್ತಕದಲ್ಲಿ ದಾಖಲಿಸಲಾಗಿದೆ. ಅನೇಕ ಕಡೆಗಳಲ್ಲಿ ಅಸ್ಪಷ್ಟ ಹಾಗೂ ಅಪೂರ್ಣ ನಿರೂಪಣೆಗಳಿದ್ದರೂ ಕುತೂಹಲಕರವಾಗಿದೆ.

ಸಮಸ್ಯೆಯೊಂದನ್ನ ಬಿಡಿಬಿಡಿಯಾಗಿ ಗ್ರಹಿಸುವ ಆಧುನಿಕ ವಿಜ್ಞಾನದ ವಿಧಾನ ರೆಡ್ಡಿಯವರು ಒಪ್ಪುವುದಿಲ್ಲ. ತುಂಬಾ ಸಾಮಾನ್ಯವಾದ ಜ್ಞಾನ ಎನ್ನಿಸಬಲ್ಲ ಸಮಗ್ರ ಆಲೋಚನೆಗಳನ್ನು ಅವರು ಮುಂದಿಡುತ್ತಾರೆ. ಗಿಡವೆಂಬುದು ಇಡಿಯಾದ ಒಂದು ಜೀವ. ಅದು ಭೂಮಿಯ ಜೊತೆಗೂ ಹಾಗೂ ಭೂಮಿಯು

ಇಲ್ಲಿನ ಗಾಳಿ, ನೀರು ಹಾಗೂ ಗ್ರಹಗಳ ಚಲನೆಯ ಜೊತೆಗೂ ಇರುವ ಪರಸ್ಪರ ಸಂಬಂಧ ಸಮಗ್ರತೆ ಗುರುತಿಸುತ್ತಾರೆ. ನಮ್ಮ ಅನೇಕ ಪರಂಪರಾಗತ ಕೃಷಿ ತಂತ್ರಗಳು ಹಾಗೂ ಅವುಗಳ ಔಚಿತ್ಯದ ಬಗ್ಗೆ ರೆಡ್ಡಿಯವರು ತಮ್ಮದೇ ಆದ ಕಾರಣ ಗಳನ್ನು ಕೊಡುತ್ತಾರೆ. ಹಾಗೂ ಅವುಗಳ ಪ್ರಯೋಜನದ ಬಗ್ಗೆ ವಿವರಿಸುತ್ತಾರೆ. ಆಧುನಿಕ ಮನೋಭಾವದ ಅಸಂಬದ್ಧಗಳ ಬಗ್ಗೆ ಹಾಗೂ ಆಧುನಿಕ ಜೀವನ ಶೈಲಿಯ ಒಂದು ಪರ್ಯಾಯ ವ್ಯಾಖ್ಯೆಯ ಪುಟ್ಟ ರೂಪು ಈ ಪುಸ್ತಕದಲ್ಲಿದೆ.

ಸರಳವಾದ ಭಾಷೆ–ನಿರೂಪಣೆಗಳ ಮೂಲಕ ಮಾತಿನಿಂದ ಅಕ್ಷರಕ್ಕೆ ರೆಡ್ಡಿ ಯವರ ವಿಚಾರಗಳನ್ನು ಹೊರತಂದಿರುವ ಬಂದಗದ್ದೆ ರಾಧಾಕೃಷ್ಣ ಅವರ ಪ್ರಯತ್ನ ಕೆಲವು ಮಿತಿಗಳ ಜೊತೆಗೂ ಯಶಸ್ವಿಯಾಗಿದೆ.

ಒಂದು ಹಿಡಿ ಹಸಿರು (ಕವನ ಸಂಕಲನ) ಸಂ : ಕೆ. ರಾಘವೇಂದ್ರ ಭಟ್ಟ, ಕೆ. ಪಿ. ಮಂಜುನಾಥ್ ಪ್ರ : ಸಾಹಿತ್ಯ ಕಿರಣ ವೇದಿಕೆ, ಬೆಂಗಳೂರು

ಸಾಹಿತ್ಯ ಕಿರಣ ವೇದಿಕೆಯವರು ನಡೆಸಿದ ಸಾಹಿತ್ಯ ಸ್ಪರ್ಧೆಯಲ್ಲಿ ಬಂದ ಸುಮಾರು ಏಳುನೂರು ಕವಿತೆಗಳಲ್ಲಿ ಇಪ್ಪತ್ತೆರಡು ಕವನಗಳನ್ನು ಆಯ್ದು ಒಂದು ಹಿಡಿ ಹಸಿರನ್ನು ಸಿದ್ಧಗೊಳಿಸಲಾಗಿದೆ. ಕ್ರೈಸ್ಟ್ ಕಾಲೇಜಿನ ಪ್ರತಿವರ್ಷದ ಕಾವ್ಯ ಸ್ಪರ್ಧೆಯ ಪ್ರಕಟಣೆಯ ಎಲ್ಲ ಛಾಪುಗಳೂ ಇಲ್ಲಿ ಕಾಣಸಿಗುತ್ತವೆ. ವಿನ್ಯಾಸ, ಅಚ್ಚುಕಟ್ಟುತನ ಹಾಗೂ ಕವನಗಳ ಗುಣಮಟ್ಟದಲ್ಲೂ ಎದ್ದುಕಾಣುವಂಥ ವ್ಯತ್ಯಾಸ ಗಳಿವೆ. ಉದಯೋನ್ಮುಖರ ಪ್ರೋತ್ಸಾಹದ ಹೆಸರಿನಲ್ಲಿ ಹೊರಬರುವ ರಾಶಿರಾಶಿ ಜೊಳ್ಳುಗಳಿಗಿಂತಾ, ಭರವಸೆ ಮೂಡಿಸಬಲ್ಲ ಕೆಲವೇ ಕೆಲವು ಕವಿಗಳ ಕವಿತೆಗಳನ್ನು ಒಳಗೊಂಡ ಈ ಪುಸ್ತಕ ಕುತೂಹಲಕರವಾಗಿದೆ. ಮೊದಮೊದಲು ಕವಿತೆ ಬರೆಯ ಹೊರಟವರ ಉತ್ಸಾಹ ಹಾಗೂ ವಸ್ತುವಿನ ನಿರೂಪಣೆಗಳಲ್ಲಿರುವ ಎಳಸುತನಗಳು ಎದ್ದುಕಂಡರೂ, ಒಂದು ಹಿಡಿ ಹಸಿರು ಒಂದು ಸ್ವಾಗತಾರ್ಹ ಪ್ರಯತ್ನ. ವರ್ಷ ವೊಂದಕ್ಕೆ ಸಾಲುಗಟ್ಟುವ ಇಂಥ ಅನೇಕ ಪ್ರಯತ್ನಗಳಲ್ಲಿ ಕವನ ಸಂಕಲನಗಳೇ ಅತಿ ಹೆಚ್ಚು. ಅದೇ ಕಥಾ ಸಂಕಲನಗಳಾಗಲೀ, ಪ್ರಬಂಧ ಸಂಕಲನಗಳಾಗಲೀ ಕಾಣ ಬರುವುದು ಅಪರೂಪ. ಒಂದು ಕಡೆ ಕಾವ್ಯಕ್ಕೆ ಓದುಗರಿಲ್ಲವೆನ್ನುವ ಹುಯಿಲು, ಮತ್ತೊಂದು ಕಡೆ ಬೆಳೆಯುತ್ತಲೇ ಇರುವ ಹೊಸ ಕವಿಗಳ ಸಾಲು. ಕನ್ನಡ ಕಾವ್ಯ ಜಗತ್ತಿನ ವಿಚಿತ್ರ ಸ್ಥಿತಿ ಇದೆನ್ನಬಹುದೇ ?

ಕಳೆದು ಹೋಗುತ್ತೇವೆ (ಕವನ ಸಂಕಲನ) ಲೇ : ಡಿ. ಬಿ. ರಜಿಯಾ, ಪ್ರ : ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಇದು ಡಿ.ಬಿ ರಜಿಯಾ ಅವರ ಎರಡನೆಯ ಕವನ ಸಂಕಲನ. ನಲವತ್ತೊಂದು ಕವನಗಳನ್ನು ಸಂಕಲಿಸಿರುವ ಈ ಪುಸ್ತಕದಲ್ಲಿ ಒಂದೆರಡು ಕವನಗಳನ್ನು ಬಿಟ್ಟರೆ ಉಳಿದವು ಗದ್ಯರೂಪದ ಹೇಳಿಕೆಗಳಾಗೇ ನಿಲ್ಲುತ್ತವೆ. ವಸ್ತುವೊಂದನ್ನು ನಮ್ಮ

ಈಚಿನ ಅನೇಕ ಕವಿಯಿತ್ರಿಯರು ನೋಡುವಂತೆ ಕಪ್ಪು-ಬಿಳುಪು ಚಿತ್ರಗಳಾಗಿಯೇ ರಜಿಯಾ ಕಾಣುತ್ತಾರೆ. ವಸಂತದ ಬಗ್ಗೆ ಶೋಷಣೆಯ ಬಗ್ಗೆ ತೀರಾ ಸಾಮಾನ್ಯವಾದ ಬದುಕಿನ ಏರಿಳಿತಗಳ ಬಗ್ಗೆ, ಅದೇ ಅದೇ ಹೂವು ಚಂದ್ರ ಸಮುದ್ರಗಳ ಪ್ರತಿಮೆಗಳು ಇಲ್ಲಿ ಕಾಣಸಿಗುತ್ತವೆ, ನಮ್ಮ ಮಹಿಳಾ ಕವಯತ್ರಿಯರು ಹೊಸದಾಗಿ ಬರೆಯುತ್ತಿದ್ದಾರೆ. ಅದರಲ್ಲೂ ಮುಸ್ಲಿಂ ಮಹಿಳೆಯರು ಬರೆಯತೊಡಗುವುದೇ ಅಪರೂಪ. 'ಮುಸ್ಲಿಂ ಸಮಾಜದಿಂದ ಬಂದ ಮೊದಲ ಕನ್ನಡ ಕವಿಯಿತ್ರಿ' ಎಂಬ ಲಕ್ಷ್ಮೀನಾರಾಯಣಭಟ್ಟರ ಬಾಲಿಶ, ದಾರಿತಪ್ಪಿಸುವ ಹೇಳಿಕೆಗಳು ನಿಜಕ್ಕೂ ಆತಂಕಕಾರಿ. ಕಾವ್ಯ ಬರೆಯುವವರು ಮಹಿಳೆಯಾಗಿರಲಿ ಅಥವಾ ಪುರುಷನಾಗಿರಲಿ ಯಾವುದೇ ಜಾತಿ, ಮತ-ಧರ್ಮಕ್ಕೆ ಸೇರಿರಲಿ, ಮೊದಲಿಗೆ ಅವರು ಬರೆದಿರುವುದು ಕಾವ್ಯವಾಗಿದೆಯೇ ಎನ್ನುವುದು ಮುಖ್ಯ. ಅವರ ಹಿನ್ನೆಲೆಗಳಲ್ಲ. ಇವರ ಮೊದಲ ಕಾವ್ಯಸಂಕಲನ 'ಛಾಯೆ' ಕುರಿತ ಕೆಲವು ಹಿರಿ-ಕಿರಿಯ ಲೇಖಕರ ಅಭಿಪ್ರಾಯಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಹುಡುಕಹೊರಟರೆ ಈ ಸಂಕಲನದಲ್ಲಿ ಅಂಥಾ ಆಶಾದಾಯಕ ಪ್ರಯತ್ನಗಳು ಕಾಣಬರದು.

ಬಹುಮಾನಿತ ಲೇಖನಗಳು, ಲೇ : ಬಿ. ಎಸ್. ಜಯಪ್ರಕಾಶ ನಾರಾಯಣ, ಬಾಲಕೃಷ್ಣ ಹೊಸಂಗಡಿ, ಪ್ರಭು ಅಂಗಡಿ
ಪ್ರ : ಕ್ರೈಸ್ತ ಕಾಲೇಜು ಕನ್ನಡ ಸಂಘ, ಬೆಂಗಳೂರು.

ಅ.ನ.ಕೃ. ಅವರ ನೆನಪಿಗೆ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಕ್ರೈಸ್ತ ಕಾಲೇಜು ಕನ್ನಡ ಸಂಘ ಲೇಖನ ಸ್ಪರ್ಧೆಗಳನ್ನು ನಡೆಸುತ್ತಿದೆ. ಪ್ರತಿವರ್ಷವೂ ಬಹುಮಾನ ಪಡೆದ ವಿದ್ಯಾರ್ಥಿಗಳ ಬಹುಮಾನಿತ ಲೇಖನಗಳನ್ನು ಪುಟ್ಟ ಪುಸ್ತಕದ ರೂಪದಲ್ಲೂ ಪ್ರಕಟಿಸುತ್ತಿವೆ.

ಅಂತರ ಜಾತೀಯ ವಿವಾಹಗಳನ್ನು ಕುರಿತು ಬಿ. ಎಸ್. ಜಯಪ್ರಕಾಶ ನಾರಾಯಣ ಅವರ ಲೇಖನ ಸಮಚಿತ್ತದ ವಿಶ್ಲೇಷಣೆಯಾಗಿದೆ. ಇತಿಹಾಸದ ಉದ್ದಕ್ಕೂ ನಡೆದು ಬಂದಿರುವ ಜಾತಿಯ ಕಟ್ಟಳೆ ಕೇವಲ ಭಾವುಕತೆ ಹುಂಬ ಆದರ್ಶಗಳಿಂದ ಬದಲಾಗಲಾರದೆಂಬ ವಿವೇಕ ಹಾಗೂ ಎಚ್ಚರಗಳು ಅವರ ಬರಹದಲ್ಲಿ ಮುಖ್ಯವಾಗಿದೆ.

ಗಿರೀಶ್ ಕಾರ್ನಾಡರ ನಾಟಕ ಯಯಾತಿ ಕುರಿತಂತೆ ಉಳಿದ ಎರಡು ಲೇಖನಗಳು ಚರ್ಚಿಸಿವೆ. ಬಾಲಕೃಷ್ಣ ಹೊಸಂಗಡಿಯವರ ವಿಶ್ಲೇಷಣೆಗೆ ಆದಷ್ಟು ಸಮಗ್ರವಾಗಿ ಮೂಲ ಮಹಾಭಾರತದ ಕಥೆ ಹಾಗೂ ಗಿರೀಶರ ಯಯಾತಿಯ ಪ್ರಸ್ತುತತೆಗಳನ್ನು ತಳಕು ಹಾಕಿ ನೋಡುತ್ತದೆ. ಪ್ರಭು ಅಂಗಡಿಯವರು ಇದೇ ಯಯಾತಿ ನಾಟಕವನ್ನು ಒಂದೊಂದು ಪಾತ್ರಗಳನ್ನು ವಿಶ್ಲೇಷಿಸುವ ಮೂಲಕ ಇಡೀ ನಾಟಕದ ವಸ್ತು-ವಿನ್ಯಾಸಗಳನ್ನು ಬಿಡಿಸಿಡುತ್ತಾರೆ. ಮುಂದೆಯೂ ಈ ಬರಹಗಾರರಿಂದ ಅಧ್ಯಯನ ಪೂರ್ಣ ಲೇಖನಗಳನ್ನು ನಿರೀಕ್ಷಿಸಬಲ್ಲ ಆಶಾವಾದವನ್ನು ಈ ಪುಟ್ಟ ಪುಸ್ತಕ ಹುಟ್ಟಿಸುತ್ತದೆ.

ಬಾಲಂಗೋಚಿ

ಟೈಟಾನಿಕ್ ಎಂಬ ದೃಶ್ಯಕಾವ್ಯ

ಟೈಟಾನಿಕ್ ಸಿನಿಮಾ 1912ರಲ್ಲಿ ಮುಳುಗಿದ ಹಡಗಿನ ದುರಂತವನ್ನಾಧರಿಸಿದ್ದು. ಮನುಷ್ಯನ ಸಾಧನೆ ಹಾಗೂ ಹೆಮ್ಮೆಯ ಸಂಕೇತದಂತಿದ್ದ ಹಡಗಿನ ದುರಂತವನ್ನಷ್ಟೇ ಅದರ ನಿರ್ದೇಶಕ ಜೆಮ್ಸ್ ಕೆಮರಾನ್ ಚಿತ್ರಿಸಿದ್ದಿದ್ದರೆ ಈ ಚಿತ್ರ ಸಪ್ಪೆಯಾಗಿರುತ್ತಿತ್ತು. ಬರೀ ತಾಂತ್ರಿಕತೆಯ ಮೇಲುಗೈ ಆಗಿರುತ್ತಿತ್ತು. ಟೈಟಾನಿಕ್ ಗೆಲ್ಲುವುದು ಮಾನವ ಸಹಜ ಪ್ರೀತಿಯ ಚಿತ್ರಣದಲ್ಲಿ ಚಿತ್ರನಾಯಕಿ ರೋಸ್ ಮತ್ತು ಜಾರ್ಕ್‌ರ ಪ್ರೇಮ ಪ್ರಕರಣ ಮತ್ತು ಜೀವನಪ್ರೀತಿಯನಿರೂಪಣೆ ಟೈಟಾನಿಕ್ ಎಲ್ಲ ಮನೋಧರ್ಮದ ಜನಗಳ ಮೆಚ್ಚುಗೆಗೆ ಕಾರಣವಾಗಿದೆ. ತನ್ನ ಶಿಷ್ಟ ಜಗತ್ತಿನ ಸಂಕೋಲೆಗಳಿಂದ ಜೀವನ ಪ್ರೀತಿಯ ಕಡೆಗೆ ರೋಸ್ ಒಲಿಯುತ್ತಾಳೆ. ಮುಪ್ಪು ಹಾಗೂ ಮುತ್ತುವ ನೆನಪುಗಳು; ಇದರ ಜೊತೆಗೆ ಸಾವು ವಿನಾಶದ ಎದುರಿನಲ್ಲಿ ತತ್ತರಿಸುವ ಮನುಷ್ಯ ಸ್ವಭಾವಗಳ ಚಿತ್ರಣ ಈ ಚಿತ್ರದ ಹೆಗ್ಗಳಿಕೆ. ಸಾವಿರಾರು ಜನ ನೀರುಪಾಲಾದ ನೋವಿನ ವಿಷಾದ ನೋಡುಗರನ್ನು ತಟ್ಟುತ್ತದೆ. ತಾಂತ್ರಿಕತೆಯ ಎಲ್ಲ ಸಾಧ್ಯತೆಗಳನ್ನು ಸಮರ್ಪಕವಾಗಿ ಪರಿಣಾಮಕಾರಿಯಾಗಿ ಬಳಸುವುದರ ಜೊತೆಗೆ ವಸ್ತು ಹಾಗೂ ನಿರೂಪಣೆ ದೃಷ್ಟಿಯಿಂದ ಟೈಟಾನಿಕ್ ಎಲ್ಲರ ದುರಂತ ಮತ್ತು ಪ್ರೀತಿ ಬಿಡುಗಡೆಯ ಚಿತ್ರಣವಾಗಿದೆ ಅದೇ ಕಾರಣಕ್ಕೆ ಇದೊಂದು ಚಿತ್ರಜಗತ್ತಿನ ಮೈಲಿಗಲ್ಲು.

ಗಾಂಧಿ v/s ಗಾಂಧಿ

ಭಾರತದ ಐವತ್ತನೇ ಸ್ವಾತಂತ್ರ್ಯೋತ್ಸವ ಹಾಗೂ ಗಾಂಧೀಜಿಯವರ ಹತ್ಯೆಯ ಅರ್ಧ ಶತಮಾನ ಎರಡನ್ನೂ ಒಂದೇ ಕಾಲದಲ್ಲಿ ಆಚರಿಸಿಕೊಳ್ಳುತ್ತಿದ್ದೇವೆ. ಗಾಂಧಿ v/s ಗಾಂಧಿ ನಾಟಕ ದಿನಕರ ಜೋಶಿ ಅವರ ಮೂಲ ಕಾದಂಬರಿ ಅಜಿತ್ ದಳವಿಯವರಿಂದ ನಾಟಕವಾಗಿ ಕನ್ನಡಕ್ಕೆ ಡಿ. ಎಚ್. ಚೌಗುಲೆ ಭಾಷಾಂತರಿಸಿದ್ದಾರೆ. ಕುಸುಮ ಬಾಲೆಯಂಥಾ ಉತ್ತಮ ಪ್ರಯೋಗವನ್ನು ನೀಡಿದ ನಿರ್ದೇಶಕ ಸಿ. ಬಸವಲಿಂಗಯ್ಯ ಮತ್ತೊಂದು ಅರ್ಥಪೂರ್ಣವಾದ ನಾಟಕವನ್ನು ರಂಗಾಯಣದ ಮೂಲಕ ನಿರೂಪಿಸಿದ್ದಾರೆ. ಗಾಂಧಿಯ ಮಗ ಮತ್ತೊಬ್ಬ ಗಾಂಧಿಯಂತೆ ಆಗಲಿಲ್ಲ. ಎನ್ನುವ ಪ್ರಶ್ನೆಯ ಸುತ್ತಲೂ ಗಾಂಧೀಜಿಯ ಕೌಟುಂಬಿಕ ಬದುಕಿನ ಸಿಕ್ಕು ಗೊಂದಲ ವಿರೋಧಗಳೆಲ್ಲವನ್ನೂ ನಿರೂಪಿಸುತ್ತದೆ. ಆದರ್ಶವನ್ನ ಹೆಗಲೇರಿಸಿಕೊಂಡು ಸತ್ಯಾನ್ವೇಷಣೆಗೆ ಹೊರಟ ಬಾಪುವಿನ ಹತ್ತಿರದ ಜನಗಳು ಅನುಭವಿಸುವ ದ್ವಂದ್ವ, ಅವನ ಕಠೋರತೆಗೆ ಪ್ರಯೋಗಗಳಿಗೆ ಒಡ್ಡಿಕೊಳ್ಳುವಾಗಿನ ಪ್ರತಿರೋಧ ಹಾಗೂ ವಿರೋಧಾಭಾಸಗಳು ಚಿತ್ರಿತವಾಗಿವೆ.

ಈ ಸಂಚಯದಲ್ಲಿ....

SANCHAYA (Bi-Monthly) Edited Printed & Published by D. V. Prahlad, 24/D 17th Main, Muneshwara Block, G.E.F. P.O. Bangalore-560 026 Ph : 6697866